അಥ ಋಗ್ವೇದೀಯಃ

ಅಪರಸಂಸ್ಕಾರಪ್ರಯೋಗಃ

(ಉದಕುಂಭಶ್ರಾದ್ಧಮ್, ಬ್ರಹ್ಮಚಾರಿಮರಣೇ ವಿಧಿಃ, ರಜಸ್ವಲಾಮರಣೇ ವಿಧಿಃ, ಸೂತಿಕಾಮರಣೇ ವಿಧಿಃ, ಗರ್ಭಿಣೀಮರಣೇ ವಿಧಿಃ, ಪಾಲಾಶವಿಧಿಃ, ತೀರ್ಥೇ ಅಸ್ಥಿಕ್ಷೇಪವಿಧಿಃ, ಅಸ್ಥಿಶುದ್ಧಿವಿಧಿಃ, ನಾರಾಯಣಬಲಿಪ್ರಯೋಗಃ, ತ್ರಿಪಿಂಡೀಶ್ರಾದ್ಧವಿಧಿಃ, ಗೋದಾನವಿಧಿಃ, ಪ್ರಮಾಣಶ್ಲೋಕಾಶ್ಚ)

ಓಂ

ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ

ಉಡುಪಿ

Scanned by CamScanner

ಅಥ ಋಗ್ವೇದೀಯಃ

ಅಪರಸಂಸ್ಕಾರಪ್ರಯೋಗಃ

(ಉದಕುಂಭಶ್ರಾದ್ಧಮ್, ಬ್ರಹ್ಮಚಾರಿಮರಣೇ ವಿಧಿಃ, ರಜಸ್ವಲಾಮರಣೇ ವಿಧಿಃ, ಸೂತಿಕಾಮರಣೇ ವಿಧಿಃ, ಗರ್ಭಿಣೀಮರಣೇ ವಿಧಿಃ, ಪಾಲಾಶವಿಧಿಃ, ತೀರ್ಥೇ ಅಸ್ಥಿಕ್ಷೇಪವಿಧಿಃ, ಅಸ್ಥಿಶುದ್ಧಿವಿಧಿಃ, ನಾರಾಯಣಬಲಿಪ್ರಯೋಗಃ, ತ್ರಿಪಿಂಡೀಶ್ರಾದ್ಧವಿಧಿಃ, ಗೋದಾನವಿಧಿಃ, ಪ್ರಮಾಣಶ್ಲೋಕಾಶ್ಚ)

ಸಂಪಾದಕಃ

ವೇದಮೂರ್ತಿ ಚಿತ್ರಾಪುರ ಗೋಪಾಲಕೃಷ್ಣ ಆಚಾರ್ಯಃ

ಗ್ರಂಥಪರಿಶೋಧಕಃ

ನಿವೃತ್ತಪ್ರಾಚಾರ್ಯಃ ಶ್ರೀಲಕ್ಷ್ಮೀನಾರಾಯಣಶರ್ಮಾ

ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ, ಉಡುಪಿ

Ph: 9448988106, (080) 26770826
VANDANA BOOK HOUSE
Dealers in: Philosophical
Religious & Sanskrit Books
No. 24/1, 4th Main, 9th Cross,
N.R. Colony, BANGALORE - 560 019.

Scanned by CamScanner

Rgvedīyaḥ Apara Saṃskāra Prayogaḥ

The Rites : Edited by Vedamurthi Chithrapura Gopalakrishna Acharya, scrutinized by Prof. P. Lakshminarayana Sharma, Retd. Principal, SMSP Sanskrit College, Udupi. Published by : Shrimanmadhwa Siddhantha Granthalaya, Car Street, Udupi-576101. [Ph. 0820-2526755]

Year of Publication : 2014 (Second Edition)

©All Rights Reserved by the Publisher.

Pages : x + ೭೦ + 260

Price : **Rs. 250-00**

ಪ್ರಥಮ ಮುದ್ರಣ : ಶಕವರ್ಷ ೧೯೨೫ [ಕ್ರಿ. ಶ. 2003]

ಪರಿಷ್ಕೃತ ದ್ವಿತೀಯ ಮುದ್ರಣ : ಶಕವರ್ಷ ೧೯೩೫ [ಕ್ರಿ. ಶ. 2014]

ಪ್ರಕಾಶಕರು : **ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ,** ರಥಬೀದಿ, ಉಡುಪಿ-576101 [Phone: 0820-2526755]

ಕಂಪ್ಯೂಟರ್ ಅಕ್ಷರಸಂಯೋಜನೆ : 'ಶ್ರೀನವದುರ್ಗಾ ಲೇಸರ್‌ಟೆಕ್', C/o. ಡಾ। ಕೆ. ಪದ್ಮನಾಭ ಕೇಕುಣ್ಣಾಯ, ಉಡುಪಿ–576102. [Mob. 9342438727]

ಮುದ್ರಕರು : ಸಿ. ಎ. ಪ್ರಿಂಟರ್ಸ್, ಬೆಳಗಾವಿ.

ಎಲ್ಲಾ ಹಕ್ಕುಗಳು ಕಾಯ್ದಿಡಲ್ಪಟ್ಟಿವೆ.

Scanned by CamScanner

ಪ್ರಕಾಶಕರ ಮಾತು

ಪ್ರತಿಯೊಬ್ಬ ಬ್ರಾಹ್ಮಣನಿಗೂ ಅತ್ಯಾವಶ್ಯಕಗಳಾದ ಪೂರ್ವಷೋಡಶಸಂಸ್ಕಾರಗಳನ್ನು ವಿಶದಪಡಿಸುವ ಪುಸ್ತಕವೊಂದನ್ನು ಈಗಾಗಲೇ ಪ್ರಕಟಪಡಿಸಿದ್ದೇವಷ್ಟೆ. ಅದರಂತೆಯೇ ಅಪರಸಂಸ್ಕಾರಗಳ ಬಗ್ಗೆಯೂ ಸಮಗ್ರವಾದ ಪುಸ್ತಕವೊಂದನ್ನು ಹೊರತರುವ ನಿರ್ಧಾರವನ್ನು ಸಮಾಜದ ಒತ್ತಾಯದ ಮೇರೆಗೆ ಕೈಗೊಂಡೆವು. ಈ ವಿಷಯದಲ್ಲಿಯೂ ಪ್ರಸಿದ್ಧ ಪುರೋಹಿತರಾದ ಶ್ರೀ ಚಿತ್ರಾಪುರ ಗೋಪಾಲಕೃಷ್ಣಾಚಾರ್ಯರನ್ನು ವಿನಂತಿಸಿದಾಗ ಅವರು ಸಂತೋಷದಿಂದ ಒಪ್ಪಿ ಹೆಚ್ಚಿನ ಶ್ರಮವಹಿಸಿ ಹಲವು ಆಕರಗ್ರಂಥಗಳನ್ನು ಪರಿಶೀಲಿಸಿ ಔರ್ಧ್ವದೇಹಿಕಸಂಸ್ಕಾರಗಳ ವಿವರಣಾತ್ಮಕವಾದ ಈ ಪುಸ್ತಕವನ್ನು ಸಂಪಾದಿಸಿಕೊಟ್ಟಿದ್ದಾರೆ. ಇದರಲ್ಲಿ ಒಬ್ಬ ವ್ಯಕ್ತಿಯು ಮೃತನಾದ ಬಳಿಕ ಅವನ ಸದ್ಗತಿಪ್ರಾಪ್ತಿಗಾಗಿ ಹದಿಮೂರು ದಿನಗಳಲ್ಲಿ ಮಾಡಬೇಕಾದ ಎಲ್ಲಾ ಕ್ರಿಯೆಗಳನ್ನು ವಿವರವಾಗಿ ಸಂಗ್ರಹಿಸಲಾಗಿದೆ. ಅಲ್ಲದೆ ಮರಣಕ್ಕಿಂತ ಪೂರ್ವಭಾವಿಯಾಗಿ ಮಾಡಬಹುದಾದ ಕರ್ತವ್ಯಗಳನ್ನೂ ಧನಿಷ್ಠಾಪಂಚಕಶಾಂತಿ ಮೊದಲಾದ ಶಾಂತಿಕರ್ಮಗಳನ್ನೂ ಸೇರಿಸಲಾಗಿದೆ. ಬ್ರಹ್ಮಚಾರಿ, ರಜಸ್ವಲೆ, ಗರ್ಭಿಣೀ, ಬಾಣಂತಿ ಮೊದಲಾದವರ ಮರಣದ ಸಂದರ್ಭದಲ್ಲಿ ಅನುಸರಿಸಬೇಕಾದ ವಿಶೇಷ ವಿಧಾನಗಳನ್ನೂ ಅಡಕಗೊಳಿಸಲಾಗಿದೆ. ಪಾಲಾಶಸಂಸ್ಕಾರವಿಧಿ, ತೀರ್ಥಗಳಲ್ಲಿ ಅಸ್ಥಿವಿಸರ್ಜನೆಯ ವಿಧಾನ, ನಾರಾಯಣಬಲಿಪ್ರಯೋಗ, ತ್ರಿಪಿಂಡೀಶ್ರಾದ್ಧವಿಧಿ, ಗೋದಾನವಿಧಿ ಮೊದಲಾದ ಸಂಬಂಧಪಟ್ಟ ವಿಷಯಗಳನ್ನೂ ಸೇರಿಸಲಾಗಿದೆ. ಕೊನೆಯಲ್ಲಿ ಅವಶ್ಯವಾಗಿ ತಿಳಿಯಬೇಕಾದ ಹಲವು ವಿಷಯಗಳನ್ನು ಪ್ರಮಾಣಶ್ಲೋಕಗಳೊಂದಿಗೆ ವಿವರಿಸಲಾಗಿದೆ. ಶವದಹನವನ್ನು ಹೆಚ್ಚಿನ ವಿಳಂಬವಿಲ್ಲದೆ ಮಾಡಬೇಕಾಗಿದ್ದು ಪರಿಣತ ಪುರೋಹಿತರು ಸಕಾಲದಲ್ಲಿ ಸಿಗದಿದ್ದ ಪಕ್ಷದಲ್ಲಿ ಸಾಮಾನ್ಯಜ್ಞಾನವುಳ್ಳವರೂ ಈ ದಹನಾಂತಕಾರ್ಯವನ್ನು ನಿರ್ವಹಿಸಲು ಅನುವಾಗಲೆಂಬ ಉದ್ದೇಶದಿಂದ ಈ ಭಾಗದ ಕನ್ನಡ ವಿವರಣೆಯನ್ನು ನೀಡಲಾಗಿದೆ. ಅಂತೆಯೇ ಅಸ್ಥಿಸಂಚಯನವಿಧಿಯನ್ನೂ ಕನ್ನಡದಲ್ಲಿ ವಿವರಿಸಲಾಗಿದೆ.

ಈ ರೀತಿಯಾಗಿ ಸಾಧ್ಯವಾದಷ್ಟು ಸರ್ವಾಂಗಪರಿಪೂರ್ಣವಾದ ಈ 'ಅಪರಸಂಸ್ಕಾರಪ್ರಯೋಗ'ವನ್ನು ಪ್ರಕಟಪಡಿಸುತ್ತಿದ್ದೇವೆ. ಈ ಪುಸ್ತಕವನ್ನು ಸಂಪಾದಿಸಿಕೊಟ್ಟ ಶ್ರೀ ಚಿತ್ರಾಪುರ ಗೋಪಾಲಕೃಷ್ಣಾಚಾರ್ಯರಿಗೂ ಪರಿಶೋಧಿಸಿದ ಶ್ರೀ ಪಿ. ಲಕ್ಷ್ಮೀನಾರಾಯಣ ಶರ್ಮಾ,

Scanned by CamScanner

ನಿವೃತ್ತ ಪ್ರಾಂಶುಪಾಲರು, ಶ್ರೀಮನ್ಮಧ್ವಸಿದ್ಧಾಂತಪ್ರಬೋಧಿನೀ ಸಂಸ್ಕೃತ ಮಹಾಪಾಠಶಾಲೆ, ಉಡುಪಿ ಇವರಿಗೂ ಈ ಪುಸ್ತಕದ ಕರಡುಪ್ರತಿಯನ್ನು ತಿದ್ದುವಲ್ಲಿ ನಮ್ಮೊಂದಿಗೆ ಸಹಕರಿಸಿದ ನಮ್ಮ ಆತ್ಮೀಯರಾದ ವೇ। ಮೂ। ಶ್ರೀ ಬಿ. ಗುರುಮೂರ್ತಿ ಶರ್ಮರಿಗೂ ಕೃತಜ್ಞತೆಗಳು. ಅಕ್ಷರಸಂಯೋಜಕರಾಗಿ ಸಹಕರಿಸಿದ ಡಾ। ಕೆ. ಪದ್ಮನಾಭ ಕೇಕುಣ್ಣಾಯರು ಮತ್ತು ಮುದ್ರಣಕಾರ್ಯವನ್ನು ನಿರ್ವಹಿಸಿದ ಸಿ. ಎ. ಪ್ರಿಂಟರ್ಸ್, ಬೆಳಗಾವಿ ಇವರ ಸಹಕಾರವು ಸರ್ವಥಾ ಅವಿಸ್ಮರಣೀಯವಾಗಿದೆ.

ಈ ಪುಸ್ತಕದಿಂದ ವಿಪ್ರಸಮಾಜಕ್ಕೆ ಪ್ರಯೋಜನವಾದರೆ ನಮ್ಮೀ ಪ್ರಯತ್ನವು ಸಾರ್ಥಕವೆಂದು ಭಾವಿಸುತ್ತೇವೆ. ಸಹೃದಯರ ನಿರಂತರ ಪ್ರೋತ್ಸಾಹ, ಸಹಕಾರಗಳಿಂದ ಮುಂದೆಯೂ ನಮ್ಮೀ ಸಂಸ್ಥೆಯು ಗ್ರಂಥಪ್ರಕಾಶನ ಮತ್ತು ಪುನರ್ಮುದ್ರಣಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸುವಂತಾಗಲು ಕ್ಷೇತ್ರದೇವತೆಗಳನ್ನು ಪ್ರಾರ್ಥಿಸುತ್ತೇವೆ.

ಇತಿ ಸಜ್ಜನವಿಧೇಯ,

ಪ್ರಕಾಶಕರು

ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ, ಉಡುಪಿ.

Scanned by CamScanner

ಮುನ್ನುಡಿ

ವೈದಿಕೈಃ ಕರ್ಮಭಿಃ ಪುಣ್ಯೈಃ ನಿಷೇಕಾದಿ ದ್ವಿಜನ್ಮನಾಮ್ ।
ಕಾರ್ಯಃ ಶರೀರಸಂಸ್ಕಾರಃ ಪಾವನಃ ಪ್ರೇತ್ಯ ಚೇಹ ಚ ॥ [ಮನು]

ವೇದೋಕ್ತಮಂತ್ರಗಳಿಂದಲೂ ಗೃಹ್ಯೋಕ್ತವಿಧಿವಿಧಾನಗಳಿಂದಲೂ ನಿಷೇಕಾದಿ ವಿವಾಹಾಂತಸಂಸ್ಕಾರಗಳನ್ನು ಆಯಾಯಾ ಕಾಲದಲ್ಲಿ ನಡೆಸುವುದರಿಂದ ಬ್ರಾಹ್ಮಣನ ಶರೀರವೂ ಅಂತಃಕರಣವೂ ಪಾಪಗಳಿಂದ ಮಾರ್ಜನೆಗೊಂಡು ಆ ಜೀವಿಯು ಇಹದಲ್ಲಿಯೂ, ದೇಹಾವಸಾನವಾಗಲು ಇನ್ನೊಂದು ಉತ್ತಮಶರೀರವನ್ನು ಆಶ್ರಯಿಸಿ ಪರಲೋಕದಲ್ಲಿಯೂ ಸುಖಿಯಾಗುವನೆಂಬ ಮನುವಿನ ಮಾತು ಸಾರ್ವಕಾಲಿಕ ಸತ್ಯವಾಗಿದೆ. ಗರ್ಭಾಧಾನಾದಿ ಷೋಡಶಸಂಸ್ಕಾರಗಳ ಸಾಮಾನ್ಯ ಪರಿಚಯವಿದ್ದರೂ ಅವುಗಳ ಮಹತ್ತ್ವ–ಪ್ರಯೋಜನವನ್ನು ಅರ್ಥೈಸದೆ ಸದ್ಯ ಕೆಲವು ಮಾತ್ರ ಉಳಿದುಕೊಂಡಿದೆ. ಜನಿಸಿದ ಮಗುವಿಗೆ ವ್ಯವಹಾರಕ್ಕಾಗಿ ನಾಮಕರಣ, ದ್ವಿಜನಹುದೆನಿಸಲು ಉಪನಯನ, ಗೃಹಸ್ಥಧರ್ಮಪಾಲನೆಯ ಮುಖವಾಡದೊಂದಿಗೆ ಸುಖಿಯಾಗಿರಲು ವಿವಾಹ ಇವಿಷ್ಟು ಮಾತ್ರ ಪ್ರಚಲಿತವಾಗಿದ್ದು ಉಳಿದವುಗಳು ಕ್ಷೀಣವಾಗುತ್ತಿವೆ. ಹದಿನಾರು ಸಂಸ್ಕಾರಗಳನ್ನು ಬ್ರಾಹ್ಮಸಂಸ್ಕಾರಗಳೆಂದೂ ಅವುಗಳನ್ನು ತಂದೆಯು ಮಗನ ಉಜ್ಜ್ವಲಭವಿಷ್ಯಕ್ಕಾಗಿ ನಡೆಸಿದರೂ ಗೃಹಸ್ಥನಾದ ಮೇಲೆ ಇಪ್ಪತ್ತನಾಲ್ಕು ದೈವಸಂಸ್ಕಾರಗಳನ್ನು ತಾನೇ ಆಚರಿಸಬೇಕಾಗಿದ್ದು ಒಟ್ಟು ನಲ್ವತ್ತು ಸಂಸ್ಕಾರಗಳಿಂದ ಪಾವನಗೊಂಡ ಜೀವಿಯು “ದಯಾ, ಕ್ಷಮಾ, ಸಹನಾದಿ ಎಂಟು ಆತ್ಮಗುಣಗಳಿಂದ ಪೂರ್ಣನಾಗಿ ಐಹಿಕಾಮುಷ್ಮಿಕಫಲವನ್ನುಣ್ಣಲು ಅರ್ಹನಾಗುವನು.

ಸಂಸ್ಕಾರೈಃ ಸಂಸ್ಕೃತಃ ಪೂರ್ವೈರುತ್ತರೈರನುಸಂಸ್ಕೃತಃ ।
ನಿತ್ಯಮಷ್ಟಗುಣೈರ್ಯುಕ್ತೋ ಬ್ರಾಹ್ಮಣೋ ಬ್ರಹ್ಮಲೌಕಿಕಃ ।
ಬ್ರಾಹ್ಮಂ ಪದಮವಾಪ್ನೋತಿ ಯಸ್ಮಾನ್ನ ಚ್ಯವತೇ ಪುನಃ ॥ [ಶಂಖಲಿಖಿತಸ್ಮೃತಿ]

ಹೀಗೆ ಜನನದಿಂದ ಮರಣತನಕ ನಲ್ವತ್ತೆಂಟು ಸಂಸ್ಕಾರಗಳನ್ನು ಪೂರ್ವಷೋಡಶತ್ರಯಗಳೆಂದೂ ದೇಹಾವಸಾನವಾಗಲು ಮಗನು ನಡೆಸುವ ದಹನಾದಿ ಸಪಿಂಡೀಕರಣ(ವರ್ಷಾಂತಿಕ)ಪರ್ಯಂತ ಅಪರಷೋಡಶತ್ರಯಸಂಸ್ಕಾರಗಳೆಂದೂ ಪೂರ್ವಾಪರ ಸಂಸ್ಕಾರಗಳಿಂದ ಜೀವಿಯು ಇಹದಲ್ಲಿ ಸಂತೃಪ್ತಿಯಿಂದ ಜೀವಿಸಿ ಮರಣದ ಬಳಿಕ ವರ್ಷಾಂತ್ಯದಲ್ಲಿ ವಸ್ವಾದಿಪುಣ್ಯಲೋಕದಲ್ಲಿಯೂ ಸುಖವನ್ನುಂಡು ಕ್ರಮೇಣ ರುದ್ರಾದಿತ್ಯ ಪುಣ್ಯಸ್ಥಾನಪ್ರಾಪ್ತಿಯೊಂದಿಗೆ ಸಾಯುಜ್ಯಪದವಿಯನ್ನೂ ಪಡೆಯುವನೆಂದು ಸ್ಮೃತಿವಚನವಾಗಿದೆ.

Scanned by CamScanner

ಅಪರಷೋಡಶತ್ರಯಗಳು ದಹನಾಂತ ಆದ್ಯಕ್ರಿಯೆಯೆಂದೂ ದಶಾಹತನಕ ಮಧ್ಯಕ್ರಿಯೆಯೆಂದೂ ಸಪಿಂಡೀಕರಣಾಂತ ಅಂತ್ಯಕ್ರಿಯೆಯೆಂದೂ ವಿಭಾಗಿಸಲ್ಪಟ್ಟಿವೆ. ಆ ಕ್ರಿಯಾಪ್ರಭೇದಗಳಲ್ಲಿ ದಶಾಹಾಂತ ಮಲಿನಷೋಡಶಶ್ರಾದ್ಧಗಳೆಂದೂ ಸಪಿಂಡೀಕರಣಕ್ಕಿಂತ ಮೊದಲು ಮಧ್ಯಷೋಡಶ ಶ್ರಾದ್ಧಗಳೆಂದೂ ಅನಂತರ ವರ್ಷಾಂತ್ಯ ತನಕ ಉತ್ತಮಷೋಡಶಶ್ರಾದ್ಧಗಳೆಂದೂ – ಈ ನಲ್ವತ್ತೆಂಟು ಅಪರಷೋಡಶತ್ರಯಕರ್ಮಗಳನ್ನು ಮಗನು ಶ್ರದ್ಧೆಯಿಂದ ಆಚರಿಸಿದರೆ ಋಣಮುಕ್ತನಾದ ಮಗನು ತನ್ನ ವಂಶದ ಶ್ರೇಯಸ್ಸಿಗೆ ಪಾತ್ರನಾಗುವನು.

ಅಪರಷೋಡಶಕ್ರಿಯಾವಿಧಾನಗಳು ಸಮುಚ್ಚಯಾದಿ ಪ್ರಯೋಗಗ್ರಂಥಗಳಲ್ಲಿ ಉಲ್ಲೇಖವಾಗಿದ್ದರೂ ದೇಶಕಾಲಮಾನಪ್ರಕಾರ ಸಮಗ್ರವಾಗಿ ಅನುಷ್ಠಾನಕ್ಕೆ ತರುವುದು ಅಸಾಧ್ಯವೆಂದೂ ಪರಂಪರೆಯಲ್ಲಿ ನಡೆದುಬಂದ ಸಂಪ್ರದಾಯಗಳನ್ನು ಒಳಗೊಂಡ ಪ್ರಯೋಗಪುಸ್ತಕದ ಆವಶ್ಯಕತೆ ಇದೆಯೆಂದು ಆತ್ಮೀಯರನೇಕರ ಅಭಿಪ್ರಾಯ ಹಾಗೂ ಪ್ರೋತ್ಸಾಹದಂತೆ ಈ ಸಾಹಸಕ್ಕೆ ಕೈಹಾಕಲಾಗಿದೆ.

ಕರ್ಮಗಳನ್ನು ವಿಸ್ತಾರಗೊಳಿಸಿದಷ್ಟು ಕ್ರಿಯಾಭಾಗಗಳು ಕ್ಷೀಣವಾಗುತ್ತಾ ಅಪರಾಧಸಹಸ್ರಗಳ ಪಂಕ್ತಿಗೆ ಸೇರಬೇಕಾಗುವ ಪ್ರಸಂಗ ಬರಬಹುದು. ಆದುದರಿಂದ ಸಮುಚ್ಚಯವನ್ನೇ ಆಧಾರವಾಗಿರಿಸಿ ಪ್ರಮಾಣವಿರೋಧವಾಗದಂತೆ ಬಲ್ಲವರ ಹಿತಮಿತ ಸೂಕ್ತ ಮಾರ್ಗದರ್ಶನದ ಹಿನ್ನೆಲೆಯಲ್ಲಿ ಈ ಕೃತಿಯನ್ನು ರಚಿಸಲಾಗಿದೆ. ಹಿರಿಯರನೇಕರು ಇದುವರೆಗೆ ನಡೆಸುತ್ತಿದ್ದ ಪ್ರಯೋಗಗಳಿಗೂ ಈ ಕೃತಿಯ ಪ್ರಯೋಗಗಳಿಗೂ ಅಲ್ಲಲ್ಲಿ ವ್ಯತ್ಯಾಸಗಳು ತೋರಬಹುದು. ಆದರೂ ಮುಂದಿನ ಪೌರೋಹಿತ್ಯಾಭ್ಯಾಸಿಗಳಿಗೆ ಹೆಚ್ಚಿನ ಅನುಭವದೊಂದಿಗೆ ಅನುಕೂಲವಾಗಬಹುದೆಂಬ ಪ್ರಾಮಾಣಿಕ ವಿಶ್ವಾಸವಿದೆ.

ಈ ಕೃತಿಯ ಸಂಗ್ರಹಕ್ಕಾಗಿ ವೇ। ಮೂ। ಪಂಡಿತ ಕಾಪು ಹಯಗ್ರೀವಾಚಾರ್ಯರು, ಮಂಗಳೂರು ವೇ। ಮೂ। ಗಣಪತಿ ಆಚಾರ್ಯರು, ಮದ್ರಾಸ್ ವೇ। ಮೂ। ಟಿ. ಪಿ. ವಿಷ್ಣುಮೂರ್ತಿ ಭಟ್ಟರು, ಉಡುಪಿ ಪಾಡಿಗಾರು ವೇ। ಮೂ। ಮುರಳೀಧರಾಚಾರ್ಯರು, ಬೆಂಗಳೂರು ವೇ। ಮೂ। ಶ್ರೀ ಸುಮನಾಚಾರ್ಯರು ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ನೀಡಿರುವ ಸಹಕಾರವನ್ನು ಮರೆಯುವಂತಿಲ್ಲ. ಬರೆದ ಪ್ರತಿಯನ್ನು ಮುದ್ರಣಕ್ಕೊಪ್ಪುವಂತೆ ಶಬ್ದವಾಕ್ಯಗಳನ್ನು ಸೂಕ್ಷ್ಮವಾಗಿ ಪರಿಶೋಧನೆಗೈದ ಉಡುಪಿ ಸಂಸ್ಕೃತ ಮಹಾಪಾಠಶಾಲಾ ನಿವೃತ್ತ ಪ್ರಾಂಶುಪಾಲರಾದ ವಿದ್ವಾನ್ ಶ್ರೀ ಲಕ್ಷ್ಮೀನಾರಾಯಣ ಶರ್ಮರಿಗೂ ಚಿರಋಣಿ.

ಪ್ರಕಟನೆಯ ಹೊಣೆಗಾರಿಕೆ ಹೊತ್ತ ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯದ ಶ್ರೀ ರಮೇಶ ಭಟ್ಟರಿಗೂ ಮುದ್ರಣವರ್ಗದವರಾದ ಸಿ.ಎ.ಪ್ರಿಂಟರ್ಸ್, ಬೆಳಗಾವಿ ಇವರಿಗೂ ಕೃತಜ್ಞತೆಗಳು.

ಈ ಪ್ರಯೋಗವನ್ನು ಆದರದಿಂದ ಸ್ವಾಗತಿಸಿ ಅನುಷ್ಠಾನಕ್ಕೆ ಅನುವು ಮಾಡಿಕೊಳ್ಳುವ ಪುರೋಹಿತಬಂಧುಗಳಿಗೆ ಎಂದೆಂದೂ ಕೃತಜ್ಞತೆಗಳು.

ವೇ। ಮೂ। ಚಿತ್ರಾಪುರ ಗೋಪಾಲಕೃಷ್ಣ ಆಚಾರ್ಯ

Scanned by CamScanner

ಪ್ರಯೋಗಕಾರಿಕಾವಿಷಯಾನುಕ್ರಮಣಿಕಾ

ಸಪ್ರಮಾಣ ಅಪರಪ್ರಯೋಗನಿರೂಪಣೆ ೧–೬೯

ಅವಸಾನಕಾಲೇ ಕರ್ತವ್ಯಮ್ 1

* ಪ್ರಾಯಶ್ಚಿತ್ತದಾನವಿಧಿಃ 2
* ಕರ್ಣಸೂಕ್ತಮ್ 5
* ಮರಣೋತ್ತರವಿಧಿಃ 9
* ಕ್ಷೌರವಿಧಿಃ 10
* ಶವಸಂಸ್ಕಾರವಿಧಿಃ 12
* ಪ್ರೇತಸ್ಯ ಪುನಃಸಂಧಾನಮ್ 14
* ಪ್ರೇತನಿರ್ಹರಣಪ್ರಕಾರಃ 18
* ಔರ್ಧ್ವದೇಹಿಕವಿಧಿಃ 20
* ಪಂಚಕಾದಿದಾಹವಿಧಿಃ 25
* ದಹನವಿಧಿಃ 27

ಪ್ರಥಮದಿನವಿಧಿಃ 36

* ನವ(ವಿಷಮ)ಶ್ರಾದ್ಧಮ್ 41
* ನಗ್ನಪ್ರಚ್ಛಾದನಶ್ರಾದ್ಧಮ್ 42
* ಪಾಥೇಯಶ್ರಾದ್ಧಮ್ 43

ದ್ವಿತೀಯಾದಿದಿನವಿಧಿಃ 45

* ಪ್ರೇತಸ್ಯ ಅವಯವನಿಷ್ಪತ್ತಿವಿಚಾರಃ 45
* ಸಮಾನತಂತ್ರಕರಣಪಕ್ಷೇ 46
* ಅಸ್ಥಿಸಂಚಯನಮ್ 47

ದಶಮದಿನಕೃತ್ಯಮ್ 52

ಏಕಾದಶದಿನಕೃತ್ಯಮ್ 57

* ಧನಿಷ್ಠಾಪಂಚಕವಿಧಿಃ 57
* ತ್ರಿಪಾದನಕ್ಷತ್ರಶಾಂತಿಃ 61
* ವೃಷೋತ್ಸರ್ಗಹೋಮವಿಧಿಃ 66
* ಅಥಾಗ್ನೌ ಮಹೈಕೋದ್ದಿಷ್ಟವಿಧಿಃ 81
* ರುದ್ರಗಣಶ್ರಾದ್ಧಮ್ 85
* ವಸುಗಣಶ್ರಾದ್ಧಮ್ 85
* ಅಥ ಷೋಡಶಮಾಸಿಕಶ್ರಾದ್ಧವಿಧಿಃ 86
* ಷೋಡಶಮಾಸಿಕಶ್ರಾದ್ಧಮಂಡಲಮ್ 87

ದ್ವಾದಶದಿನಕೃತ್ಯಮ್–ಸಪಿಂಡೀಕರಣಶ್ರಾದ್ಧವಿಧಿಃ... 106

Scanned by CamScanner

* ಸಪಿಂಡೀಕರಣಶ್ರಾದ್ಧಮಂಡಲಮ್ 107
* ತೈಲೋದ್ವರ್ತನವಿಧಿಃ 108
* ಸಪಿಂಡೀಕರಣಶ್ರಾದ್ಧಸಂಕಲ್ಪಃ 109
* ವೈತರಣೀನೌಕಾದಾನಂ ಪ್ರೇತಘಟದಾನಂ ಚ ... 139
* ಪಿಂಡಸಂಯೋಜನಮ್ 144
* ದಾನಮಂತ್ರಾಃ 159
ಮಾತೃಸಪಿಂಡೀಕರಣಶ್ರಾದ್ಧೇ ವಿಶೇಷಃ 166
ತ್ರಯೋದಶದಿನಕೃತ್ಯಮ್ 170
* ಶ್ರವಣದೇವತಾರಾಧನವಿಧಿಃ 172
ಅಪರಪರಿಶಿಷ್ಟಮ್ 175
* ಉದಕುಂಭಶ್ರಾದ್ಧಮ್ 175
* ಬ್ರಹ್ಮಚಾರಿಮರಣೇ ವಿಧಿಃ 175
* ಪ್ರೌಢಕನ್ಯಾಮರಣೇ ಕ್ರಿಯಾವಿಶೇಷಃ 177
* ರಜಸ್ವಲಾಮರಣೇ ವಿಧಿಃ 179
* ಗರ್ಭಿಣೀಮರಣೇ ವಿಧಿಃ (ಶೌನಕಃ).................. 180
* ಸೂತಿಕಾಮರಣೇ ವಿಧಿಃ 181
* ಪಾಲಾಶವಿಧಿಃ 181
* ತೀರ್ಥೇ ಅಸ್ಥಿ ಕ್ಷೇಪಂ ಕರ್ತುಂ ವಿಧಿಃ 183
* ದಶವಿಧಸ್ನಾನವಿಧಿಃ 184
* ಅಸ್ಥಿಶುದ್ಧಿವಿಧಿಃ 186
* ನಾರಾಯಣಬಲಿಪ್ರಯೋಗಾಃ 191
* ತ್ರಿಪಿಂಡೀಶ್ರಾದ್ಧವಿಧಿಃ 195
* ಗೋದಾನವಿಧಿಃ 200
ಪ್ರಮಾಣಶ್ಲೋಕಾಃ 205
ಲೋಕರೂಢಿರೀತ್ಯಾಕ್ರಿಯಾರಂಭೇ
ಸಮಾನತಂತ್ರಪ್ರಯೋಗಃ 227
ಸಂಕ್ಷಿಪ್ತ ಮೋಕ್ಷನಾರಾಯಣಬಲಿಪ್ರಯೋಗಃ 232
* ಸಂಕ್ಷಿಪ್ತಮೋಕ್ಷನಾರಾಯಣಬಲಿಮಂಡಲಮ್ .. 238
ನಾರಾಯಣಪನ್ನಮ್ 242
ಮಂತ್ರಾನುಕ್ರಮಣಿಕಾ 244

Scanned by CamScanner

ಸಪ್ರಮಾಣ ಅಪರಪ್ರಯೋಗನಿರೂಪಣವಿಷಯಾನುಕ್ರಮಣಿಕಾ

ಸಪ್ರಮಾಣ ಅಪರಪ್ರಯೋಗನಿರೂಪಣೆ ೧
ಮರಣೋತ್ತರವಿಧಿ ೫
ಯಮಳಯೋಃ ಜ್ಯೇಷ್ಠಕನಿಷ್ಠವಿಚಾರಃ ೬
ದತ್ತಪುತ್ರವಿಚಾರ ೭
ಬ್ರಹ್ಮಚಾರಿಕರ್ತೃವಿಚಾರ ೮
ಕ್ಷೌರವಿಚಾರ ೯
ಶವಪರ್ಯುಷಿತವಿಚಾರ ೧೦
ಪ್ರೇತಸ್ಯ ಪುನಃಸಂಧಾನಮ್ ೧೧
ಶವನಿರ್ಹರಣವಿಚಾರ ೧೨
ದಹನದ ಬಗ್ಗೆ ವಿಶೇಷವಿಚಾರ ೧೪
ದಹನಪ್ರಕಾರ ೧೫
ಪಂಚಕದ ಬಗ್ಗೆ ವಿಶೇಷವಿಚಾರ ೧೫
ತ್ರಿಪಾದನಕ್ಷತ್ರವಿಚಾರ ೧೬
ಪ್ರಥಮದಿನವಿಧಿ ೧೮
ಕರ್ತೃನಿಯಮ ೨೩
ಆಶೌಚ–ಕರ್ತೃ ವಿಶೇಷವಿಚಾರ ೨೩
ಅಸ್ಥಿಸಂಚಯನವಿಚಾರ ೨೬
ದಶಾಹವಿಚಾರ ೨೮
ಹನ್ನೊಂದನೆಯ ದಿನವಿಚಾರ ೩೦
ಸಪಿಂಡೀಕರಣವಿಚಾರ ೩೩
ಪಿಂಡದಾನ–ವಿಕಿರಬಲಿ–ಬಲಿಹರಣವಿಚಾರ ೩೮
ಹದಿಮೂರನೆಯ ದಿನವಿಚಾರ ೩೯
ಶ್ರವಣದೇವತಾರಾಧನೆಯ ವಿಚಾರ ೩೯
ವರ್ಷಪರ್ಯಂತ ಕರ್ತೃನಿಯಮ ೪೧
ಷೋಡಶಮಾಸಿಕವಿಚಾರ ೪೨
ತಿಲತರ್ಪಣ ಮತ್ತು ವಷಾಂತಕರ್ತವ್ಯವಿಚಾರ ೪೫
ಬ್ರಹ್ಮಚಾರಿಮರಣವಿಚಾರ ೪೬
ನಾರಾಯಣಬಲಿವಿಚಾರ ೪೭
ಏಕಾದಶ್ಯಾಂ ಮರಣೇ ೪೮
ಕೃತಚೂಡಸ್ಯ ಮರಣೇ ೪೯
ಪ್ರೌಢಕನ್ಯಾಮರಣೇ ೫೦
ರಜಸ್ವಲಾಮರಣವಿಚಾರ ೫೨
ಗರ್ಭಿಣೀಮರಣವಿಚಾರ ೫೨
ಸೂತಿಕಾಸ್ತ್ರೀಮರಣವಿಚಾರ ೫೩
ರೋಗಿಮರಣವಿಚಾರ ೫೪
ಪಾಲಾಶವಿಧಿವಿಚಾರ ೫೫
ವ್ಯುತ್ಕ್ರಮಮರಣವಿಚಾರ ೫೬
ಸಂಘಾತಮರಣವಿಚಾರ ೫೮
ಶ್ರಾದ್ಧಗಳ ವಿಚಾರ ೬೧
ತ್ರಿಪಿಂಡೀಶ್ರಾದ್ಧವಿಚಾರ ೬೩
ಮಹಾಲಯವಿಚಾರ ೬೪
ಆತ್ಮಶ್ರಾದ್ಧವಿಚಾರ ೬೮

Scanned by CamScanner

ಸಪ್ರಮಾಣ ಅಪರಪ್ರಯೋಗನಿರೂಪಣೆ

ಸದ್ಗೃಹಸ್ಥನೋರ್ವನು ಕೃತಕೃತ್ಯಜೀವನ ನಡೆಸಿ ಪುಣ್ಯಜೀವಿಯೆನಿಸಿಕೊಂಡಿದ್ದೂ ತನ್ನ ಶಾರೀರಿಕ ಆರೋಗ್ಯಸ್ಥಿತಿಗತಿಗನುಗುಣವಾಗಿಯೋ, ಶಕುನ ಸ್ವಪ್ನಸೂಚನೆಗಳಿಂದಲೋ ಅವಸಾನಕಾಲ ಸಮೀಪಿಸಿತೆಂದು ನಿಶ್ಚಯವಾಗಲು ಇಂದ್ರಿಯಗಳು ನಿಶ್ಶಕ್ತಿಹೊಂದುವ ಮೊದಲು ಬಾಲ್ಯದಲ್ಲಿ ಬುದ್ಧಿ ತಿಳಿದಂದಿನಿಂದ ಆತನಕ ಜ್ಞಾತಾಜ್ಞಾತವಾಗಿ ಮಾಡಿದ ಪಾಪಗಳ ಪರಿಹಾರಕ್ಕಾಗಿ ಪ್ರಾಯಶ್ಚಿತ್ತಕರ್ಮಗಳನ್ನು ಮಾಡಬೇಕು.

ವಿಹಿತಸ್ಯಾನನುಷ್ಠಾನಾನ್ನಿಂದಿತಸ್ಯ ಚ ಸೇವನಾತ್ ।
ಅನಿಗ್ರಹಾಚ್ಚೇಂದ್ರಿಯಾಣಾಂ ನರಃ ಪತನಮೃಚ್ಛತಿ ॥ [ಯಾಜ್ಞವಲ್ಕ್ಯ]

ಎಂಬ ವಚನದಂತೆ ಜೀವನದಲ್ಲಿ ವಿಹಿತಕರ್ಮಗಳನ್ನು ಆಚರಿಸದೆಯೂ, ನಿಂದನೀಯ ಕಾರ್ಯದಲ್ಲಿ ಆಸಕ್ತಿ ಹೊಂದಿ ಇಂದ್ರಿಯಗಳ ವಶನಾಗಿ ಸ್ವೇಚ್ಛಾಚಾರಿಯಾಗಿಯೂ ಬದುಕಿದ ವ್ಯಕ್ತಿಯು ಮರಣಕಾಲದಲ್ಲಿ ಬಹಳ ಸಂಕಟಪಟ್ಟು ಕೊನೆಗೆ ದುರ್ಗತಿಯನ್ನೇ ಹೊಂದುವನು ಎಂದು ಎಚ್ಚರಿಕೆಯನ್ನು ನೀಡಿದ ಶಾಸ್ತ್ರವು ಅದಕ್ಕಾಗಿ ನಾನಾ ವಿಧ ಪ್ರಾಯಶ್ಚಿತ್ತಗಳನ್ನು ವಿಧಿಸಿದೆ–

ಪ್ರಾಯೋ ನಾಮ ತಪಃ ಪ್ರೋಕ್ತಂ ಚಿತ್ತಂ ನಿಶ್ಚಯ ಉಚ್ಯತೇ ।
ತಪೋನಿಶ್ಚಯಸಂಯುಕ್ತಂ ಪ್ರಾಯಶ್ಚಿತ್ತಮಿತಿ ಸ್ಮೃತಮ್ ॥ [ಆಂಗಿರಸಸ್ಮೃತಿ]

ಎಂಬ ಪ್ರಮಾಣದಂತೆ ಪಾಪನಿಶ್ಚಯದಿಂದ ಅದರ ಪರಿಹಾರಕ್ಕೆ ಮಾಡತಕ್ಕ ತಪಸ್ಸೇ ಪ್ರಾಯಶ್ಚಿತ್ತವೆನಿಸಿದೆ. ಅನಿವಾರ್ಯ ಸಂದರ್ಭಗಳಲ್ಲಿ ತಿಳಿದೂ, ತಿಳಿಯದೆಯೂ ಮಾಡಿದ ಪಾಪಕೃತ್ಯಗಳನ್ನು ಮನಃಪೂರ್ವಕ ಬ್ರಾಹ್ಮಣರ ಮುಂದೆ ಒಪ್ಪಿಕೊಂಡು ಅಂತ್ಯಕಾಲದಲ್ಲಾದರೂ ವಿಧ್ಯುಕ್ತಕರ್ಮಗಳನ್ನು ಆಚರಿಸಬೇಕು.

ದಶ ಪಂಚಾಥ ಚತುರ ಉಪವೇಶ್ಯ ದ್ವಿಜಾನ್ ಶುಭಾನ್ ।
ತೇಷಾಮನುಜ್ಞಯಾ ಸರ್ವಂ ಪ್ರಾಯಶ್ಚಿತ್ತಮುಪಕ್ರಮೇತ್ ॥

Scanned by CamScanner

ಬ್ರಾಹ್ಮಣಾ ಯಾನಿ ಭಾಷಂತೇ ಮನ್ಯಂತೇ ತಾನಿ ದೇವತಾಃ ।
ಸರ್ವದೇವಮಯಾ ವಿಪ್ರಾ ನ ತದ್ವಚನಮನ್ಯಥಾ ॥ [ಸ್ಮೃತಿಮುಕ್ತಾವಲೀ]

ಹತ್ತು, ಐದು ಅಥವಾ ನಾಲ್ಕು (ವೇದಜ್ಞರಾದ) ವಿಪ್ರರನ್ನು ಕರೆಯಿಸಿ (ತಾಂಬೂಲವಸ್ತ್ರದಕ್ಷಿಣಾರಾಧನೆಗಳಿಂದ ತೃಪ್ತಿಪಡಿಸಿ) ಅವರ ವಚನದಂತೆ (ಶಕ್ತಿಗನುಗುಣವಾಗಿ) ಪ್ರಾಯಶ್ಚಿತ್ತಕರ್ಮಗಳನ್ನು ಮಾಡಬೇಕು. (ವೇದಜ್ಞ) ವಿಪ್ರರು (ತೃಪ್ತಿಗೊಂಡು ಪೂರ್ಣ ಮನಸ್ಸಿನಿಂದ) ಏನು ನುಡಿಯುವರೋ ದೇವತೆಗಳು ಅದನ್ನು ಅನುಮೋದಿಸಿ ಅನುಗ್ರಹಿಸುವರು, (ವಿಪ್ರರು ಆದೇಶಮಾಡಿದಂತೆ ಕೃಚ್ಛ್ರವನ್ನು ಆಚರಿಸಬೇಕು. ಕೃಚ್ಛ್ರವೆಂದರೆ ಪ್ರಾಜಾಪತ್ಯ ಮೊದಲಾದ ವ್ರತಗಳೆಂದು ಅರ್ಥ. ಅವುಗಳಲ್ಲಿ ಪ್ರಾಜಾಪತ್ಯವ್ರತಲಕ್ಷಣ ಹೀಗಿದೆ–)

ತ್ರ್ಯಹಂ ಪ್ರಾತಸ್ತ್ರ್ಯಹಂ ಸಾಯಂ ತ್ರ್ಯಹಮದ್ಯಾದಯಾಚಿತಮ್ ।
ತ್ರ್ಯಹಂ ನ ಕಿಂಚಿದಶ್ನೀಯಾತ್ಪ್ರಾಜಾಪತ್ಯಂ ಚರನ್ ದ್ವಿಜಃ ॥ [ಮನುಃ]

ಮೂರು ದಿನ ಬೆಳಗ್ಗೆ ಮಾತ್ರ ಭೋಜನ, ಮೂರು ದಿನ ಸಾಯಂಕಾಲ ಮಾತ್ರ ಭೋಜನ, ಮೂರು ದಿನ ತಾನಾಗಿ ಲಭ್ಯವಾದರೆ ಮಾತ್ರ ಭೋಜನ, ಮೂರು ದಿನ ಉಪವಾಸ – ಹೀಗೆ ಹನ್ನೆರಡುದಿನವಿದ್ದು (ಪಂಚಗವ್ಯಪ್ರಾಶನ, ಗೋಸೇವೆ ನಡೆಸಿದರೆ) ಒಂದು ಪ್ರಾಜಾಪತ್ಯವೆನಿಸುವುದು. ಒಂದು ವೇಳೆ ಅಶಕ್ತನಾದರೆ–

ಕೃಚ್ಛ್ರೋಽಯುತಂ ತು ಗಾಯತ್ರ್ಯಾ ವಿಪ್ರದ್ವಾದಶಭೋಜನಮ್ ।
ತಿಲಹೋಮಸಹಸ್ರಂ ವಾ ಸಮಮೇತಚ್ಚತುಷ್ಟಯಮ್ ॥ [ಶಾತಾತಪಸ್ಮೃತಿಃ]

ಹತ್ತುಸಾವಿರ ಗಾಯತ್ರೀಜಪ, ದ್ವಾದಶ ವಿಪ್ರರ ಭೋಜನ ಅಥವಾ ಸಹಸ್ರಸಂಖ್ಯಾಕವಾದ ತಿಲಹೋಮ ಇವುಗಳು ಕೃಚ್ಛ್ರಸಮಾನಗಳೆನಿಸುತ್ತವೆ. ಅಥವಾ–

ಪಾದಕೃಚ್ಛ್ರಂ ವಸ್ತ್ರದಾನಂ ಕೃಚ್ಛ್ರಾರ್ಧಂ ತೈಲಕಾಂಚನಮ್ ।
ಪಾದಹೀನೇ ತು ಗಾಮೇಕಾಂ ಕೃಚ್ಛ್ರಂ ತು ಮಿಥುನದ್ವಯಮ್ ॥ [ಮನುಃ]

ಪಾದಹೀನಂ ನ ಕರ್ತವ್ಯಮಿತಿ ಶಾತಾತಪೋಽಬ್ರವೀತ್ ॥ [ಶಾತಾತಪಃ]

ಪೂರ್ಣಕೃಚ್ಛ್ರವೆಂದರೆ ಸವತ್ಸಗೋದಾನ, ಪಾದಹೀನಕೃಚ್ಛ್ರವೆಂದರೆ ಒಂದು ಗೋದಾನ, ಅರ್ಧಕೃಚ್ಛ್ರವೆಂದರೆ ತೈಲಕಾಂಚನದಾನ, ಪಾದಕೃಚ್ಛ್ರವೆಂದರೆ ವಸ್ತ್ರದಾನ, ಪಾದಕ್ಕಿಂತ ಕಡಮೆಯಾದರೆ ದಾನ ನಿಷ್ಫಲವೇ ಆಗುತ್ತದೆ.

ಉತ್ಕ್ರಾಂತ್ಯಾದೀನಿ ದಾನಾನಿ ದಶ ದದ್ಯಾನ್ಮೃತಸ್ಯ ತು ।

(ವಿಷ್ಣುಪ್ರೀತಿಗಾಗಿ ಬ್ರಾಹ್ಮಣರಿಗೆ ಆಮಾನ್ನದಾನ ಕೊಟ್ಟು) ಸುಖವಾಗಿ ಪ್ರಾಣೋತ್ಕ್ರಮಣವಾಗಲು 'ಉತ್ಕ್ರಾಂತಿಧೇನು', ವೈತರಣೀನದಿ ದಾಟಿಸುವುದಕ್ಕಾಗಿ 'ವೈತರಣೀಧೇನು', ಪಾಪಪರಿಹಾರಕ್ಕಾಗಿ 'ಪಾಪಧೇನು', ಋಣಪರಿಹಾರಕ್ಕಾಗಿ 'ಋಣಧೇನು' –ಹೀಗೆ ೪ ಗೋದಾನಗಳನ್ನು ಅಥವಾ ಮೌಲ್ಯವನ್ನಾದರೂ ದಾನ ಮಾಡಬೇಕು. ವಿಶೇಷವಾಗಿ ತಿಲದಾನ ಮತ್ತು ದಶದಾನ ಕೊಡಬೇಕು.

ತಾಮ್ರಪಾತ್ರಂ ತಿಲೈಃ ಪೂರ್ಣಂ ಪ್ರಸ್ಥಮಾತ್ರೈರ್ದ್ವಿಜಾಯ ತು ।
ಸಹಿರಣ್ಯಂ ತು ಯೋ ದದ್ಯಾಚ್ಛ್ರದ್ಧಾವಿತ್ತಾನುಸಾರತಃ ।
ಸರ್ವಪಾಪವಿಶುದ್ಧಾತ್ಮಾ ಲಭತೇ ಗತಿಮುತ್ತಮಾಮ್ ॥ [ಬ್ರಾಹ್ಮ]

ತಾಮ್ರಪಾತ್ರದಲ್ಲಿ ಒಂದು ಸೇರು ಎಳ್ಳು ತುಂಬಿಸಿ ದಕ್ಷಿಣೆಸಹಿತ ದಾನಮಾಡಿ (ಗೋ–ಭೂ ಮೊದಲಾದ ದಶದಾನಗಳನ್ನೂ ಕೊಡಬೇಕು.) ಇದರಿಂದ ಎಲ್ಲಾ ಪಾಪಗಳಿಂದ ಮುಕ್ತನಾಗಿ ಉತ್ತಮಗತಿಯನ್ನು ಹೊಂದುವನು.

ವಿದ್ಯಾ ಪ್ರವಸತೋ ಮಿತ್ರಂ ಭಾರ್ಯಾ ಮಿತ್ರಂ ಗೃಹೇ ಸತಃ ।
ಆತುರಸ್ಯ ಭಿಷಙ್ಮಿತ್ರಂ ದಾನಂ ಮಿತ್ರಂ ಮರಿಷ್ಯತಃ ॥ [ಸ್ಮೃತಿಸಂಗ್ರಹಃ]

ಪರದೇಶ ಪ್ರಯಾಣಿಕನಿಗೆ ವಿದ್ಯೆಯೂ– ಗೃಹಸ್ಥನಿಗೆ ಗೃಹಿಣಿಯೂ– ರೋಗಿಗೆ ವೈದ್ಯನೂ– ಇಹಯಾತ್ರೆ ಮುಗಿಸುವ ಜೀವಿಗೆ ಸತ್ಪಾತ್ರ–ದಾನವೂ ಮಿತ್ರರು. (ಪ್ರಾಯಶ್ಚಿತ್ತಾರ್ಥ ಯಥಾಶಕ್ತಿ ದಾನಮಾಡಿ, ಕ್ಷಣಕ್ಷಣವೂ ನಾರಾಯಣಸ್ಮರಣೆ ಉಸಿರಾಗಿರಬೇಕು.)

Scanned by CamScanner

ಗೃಹೀತದಾನಪಾಥೇಯಾಃ ಪ್ರಯಾಂತಿ ತ್ರಿದಿವಂ ನರಾಃ ।
ಭ್ರಾತರೋ ವಾಽಥ ಪುತ್ರೋ ವಾ ದದ್ಯುರಾಸನ್ನಬಾಂಧವಾಃ ॥ [ವೈದ್ಯನಾಥೀಯ]

ದಾನವನ್ನಿತ್ತ ಮನುಷ್ಯರು ಸ್ವರ್ಗವನ್ನು ಹೊಂದುವರು. ನಿಶ್ಶಕ್ತತೆಯಿಂದ ದಾನಕೊಡಲು ಅಸಾಧ್ಯವಾದರೆ ಮಗನಾಗಲಿ, ಅಣ್ಣತಮ್ಮಂದಿರಾಗಲಿ, ಬಾಂಧವರೇ ಆಗಿರಲಿ ಅವರ ಉದ್ದೇಶ ಸಂಕಲ್ಪಮಾಡಿ ಕೊಡಬಹುದು.

ಪಿತುರ್ಮರಣಕಾಲೇ ತು ಪುತ್ರಸ್ತು ಋಣಮೋಚನಾತ್ ।
ಮಸ್ತಕಂ ತು ಸಮಾದಾಯ ದಕ್ಷಿಣೇ ತಸ್ಯ ಜಾನುನಿ ॥

ಶ್ರಾವಯೇತ್ಪುಣ್ಯಸೂಕ್ತಾನಿ ಪುಣ್ಯಮಂತ್ರಾಕ್ಷರಾಣಿ ಚ ।
ತತಸ್ತು ನಿರ್ಗತೇ ವಾಯೌ ಕುಶಾಗ್ರೇಷು ವಿನಿಕ್ಷಿಪೇತ್ ॥ [ನಿರ್ಣಯಸಿಂಧು]

ಮರಣಾಸನ್ನ ತಂದೆಯ ಮೇಲುಸಿರು (ಊರ್ಧ್ವಶ್ವಾಸ) ಪ್ರಾರಂಭವಾದಾಗ ಮಗನು ಬಲತೊಡೆಯಲ್ಲಿ ತಂದೆಯ ಶಿರವನ್ನಿಟ್ಟು 'ಕರ್ಣಸೂಕ್ತ', 'ಪುಣ್ಯಸೂಕ್ತ'ಗಳನ್ನೂ, ವಿಷ್ಣುಸಹಸ್ರನಾಮ, ಗೀತೆ ಹಾಗೂ ನಾರಾಯಣಸ್ಮರಣೆಗಳನ್ನೂ ಜೀವಿಗೆ ಶ್ರವಣವಾಗುವಂತೆ ಪಠಿಸಬೇಕು; ಪ್ರಾಣೋತ್ಕ್ರಮಣವಾದ ಬಳಿಕ ದರ್ಭೆಗಳ ಮೇಲೆ ಶವವನ್ನು ಮಲಗಿಸಬೇಕು.

ನಾನಾನಮಿತಿ ಸೂಕ್ತಂ ತು ಅಂತ್ಯಕಾಲೇ ಸದಾ ಪಠೇತ್ ।
ಜಪ್ತ್ವಾ ಚೈವ ಪರಂ ಸ್ಥಾನಮ್ ಅಮೃತತ್ವಂ ಸ ಗಚ್ಛತಿ ॥ [ಸ್ಮೃತಿಸಾರ]

ವಿಶೇಷವಾಗಿ ನಾನಾನಮಿತ್ಯಾದಿ(ಕರ್ಣ)ಸೂಕ್ತವನ್ನು ನಿರಂತರವಾಗಿ ಪಠಿಸುತ್ತಿರಬೇಕು. ಇದರಿಂದ ಮುಕ್ತಿಯು ದೊರೆಯುವುದು. [ಕೆಲವು ಪ್ರದೇಶಗಳಲ್ಲಿ ಶಂಖಧ್ವನಿ ಮಾಡುತ್ತಲೇ ಇರುವುದುಂಟು. ಗಂಗಾದಿ ತೀರ್ಥ(ಹರಿಯ ತೀರ್ಥ)ವನ್ನು ಪ್ರಾಶನ ಮಾಡಿಸುತ್ತಿದ್ದು ಪ್ರಾಣಪಕ್ಷಿ ಹಾರಿಹೋದ ಮೇಲೆ ಗೋಮಯದಿಂದ ಶುದ್ಧೀಕರಿಸಿದ ಭೂಮಿಯಲ್ಲಿ ದರ್ಭೆ, ಎಳ್ಳು ಸಹಿತ ಹಾಸಿ ದಕ್ಷಿಣ ದಿಕ್ಕಿಗೆ ತಲೆ ಇರುವಂತೆ ಮೇಲ್ಮುಖವಾಗಿ (ಅಂಗಾತವಾಗಿ) ಮಲಗಿಸಿ ಬಿಳಿಬಟ್ಟೆಯನ್ನು ಮುಚ್ಚಬೇಕು.]

Scanned by CamScanner

ಮರಣೋತ್ತರವಿಧಿ–

ಮರಣಸಮಯಕ್ಕಿಂತ ಮೊದಲು ಕೃಚ್ಛ್ರಪ್ರಾಯಶ್ಚಿತ್ತ ದಾನಾದಿಗಳನ್ನು ಮಾಡದೆ ಇದ್ದರೆ ಭೂಮಿ ಮೇಲೆ ಮಲಗಿಸಿ ಶವದ ಪಾದಾಂಗುಷ್ಠಗಳನ್ನು ಜೊತೆಯಾಗಿ ಮತ್ತು ಕೈಯ ಅಂಗುಷ್ಠಗಳನ್ನು ಜೊತೆಯಾಗಿ (ಪ್ರಣತಿಮುದ್ರೆ) ದರ್ಭೆಯಿಂದ ಕಟ್ಟಬೇಕು. ಶವವನ್ನು ಮುಟ್ಟಿಕೊಂಡು 'ಅಸುನೀತೇ' ಎಂಬ ಜೀವಸೂಕ್ತ ಪಠಿಸಿ ಕರ್ಣಸೂಕ್ತವನ್ನು ಪಠಿಸಬೇಕು. ದಾನಾದಿಗಳನ್ನೂ ಸೂತಕಾಂತ್ಯದಲ್ಲಿ ಕೊಡುವುದಾಗಿ ಸಂಕಲ್ಪ ಮಾಡಿ ಶವದ ಬಾಯಿಗೆ ತೀರ್ಥಹಾಕಿ ಒಂದು ಚೂರು ಚಿನ್ನವನ್ನು ಹಾಕಿ ಒಂದು ತೆಂಗಿನಕಾಯಿಯನ್ನು ಒಡೆದು ಶಿರಭಾಗದಲ್ಲಿ ಅಕ್ಕಿರಾಶಿ ಹರಡಿ ತೆಂಗಿನಕಾಯಿಯ ಒಂದು ಖಂಡದಲ್ಲಿ ತುಪ್ಪದ ದೀಪವನ್ನು ಹಚ್ಚಿಡಬೇಕು. ಪಾದದೇಶದಲ್ಲಿ ಭತ್ತವನ್ನು ಹರಡಿ ಇನ್ನೊಂದು ಖಂಡದಲ್ಲಿ ತೈಲದೀಪವನ್ನು ಹಚ್ಚಿಡುವ ವಾಡಿಕೆ ಕೆಲವೆಡೆ ಇದೆ. ಪುತ್ರನು ಸಮೀಪ ಇಲ್ಲವಾದರೆ ಅಧಿಕಾರಿಗಳು ಇಷ್ಟು ಕ್ರಿಯೆಗಳನ್ನು ನಡೆಸಿ ಮಗನಿಗೆ ತಿಳಿಸಬೇಕು. ತತ್‌ಕ್ಷಣ ಬರುವ ನಿರೀಕ್ಷಣೆ ಇದ್ದರೆ ನಿರೀಕ್ಷಿಸಬೇಕು. ಅನನುಕೂಲವೆಂದಾದರೆ ದಹನಾದಿಗಳನ್ನು ಮುಂದುವರಿಸಬೇಕು.

ಕುರ್ವೀತ ಸರ್ವಕರ್ಮಾಣಿ ಬ್ರಾಹ್ಮಣಾನಾಮನುಜ್ಞಯಾ ।
ಬ್ರಾಹ್ಮಣೈರಭ್ಯನುಜ್ಞಾನಾದ್ದೋಷಾ ನಶ್ಯಂತಿ ಸರ್ವಥಾ ।
ಬ್ರಾಹ್ಮಣಾನಾಂ ವಿನಾ ವಾಕ್ಯೈಃ ಕ್ರಿಯಾಃ ಸ್ಯುರ್ನಿಷ್ಫಲಾಸ್ತತಃ ॥ [ಹಾರೀತ]

ಹೆಂಡತಿಯೇ ಆಗಿರಲಿ ಗೋತ್ರದವರೇ ಆಗಿರಲಿ ಬ್ರಾಹ್ಮಣರಿಂದ ಅನುಜ್ಞೆ ಪಡೆದು ಕ್ರಿಯೆಯನ್ನು ಮುಂದುವರಿಸಬೇಕು. ವಿಪ್ರೋತ್ತಮರ ಅನುಮತಿಯನ್ನು ಪಡೆದು ಕ್ರಿಯೆ ನಡೆಸಿದರೆ ದೋಷಗಳಿಲ್ಲ. ಇಲ್ಲವಾದರೆ ನಿಷ್ಫಲವೆಂದಿದೆ.

ಒಂದು ವೇಳೆ ಪತ್ನಿಯು ರಜಸ್ವಲೆಯಾಗಿದ್ದರೆ–

ರಜೋಮಧ್ಯೇ ತು ಭಾರ್ಯಾಯಾಃ ದೈವಾತ್ ಭರ್ತುರ್ಮೃತಿರ್ಯದಿ ।
ಪುತ್ರಹೀನಸ್ಯ ಕರ್ತವ್ಯಂ ನ ತಯಾ ದಹನಾದಿಕಮ್ ॥

Scanned by CamScanner

ಅನ್ಯೈಸ್ತದನುಮತ್ಯಾ ಚ ನ ಕಾರ್ಯಂ ಪ್ರೇತಕರ್ಮ ಹಿ ।
ತೂಷ್ಣೀಂ ದಗ್ಧ್ವಾ ಚತುರ್ಥೇಽಹ್ನಿ ಪುನಃ ಸ್ನಾನಂ ವಿಧಾಯ ಚ ।
ಪ್ರೇತಕರ್ಮ ತಯಾ ಕಾರ್ಯಮಥವಾ ಪಂಚಮೇಽಹನಿ ॥ [ಸಂಗ್ರಹ]

ಮಕ್ಕಳಿಲ್ಲದ ಯಜಮಾನನು ಮರಣ ಹೊಂದಲು ಪ್ರಥಮಾಧಿಕಾರಿಯಾದ ಪತ್ನಿಯು ರಜಸ್ವಲೆಯಾಗಿದ್ದರೆ ಆಕೆಯ ಒಪ್ಪಿಗೆಯಂತೆ ಗೋತ್ರದವರು ಕೇವಲ ದಹನವನ್ನು ಮಾತ್ರ ಅಮಂತ್ರಕವಾಗಿ ಮಾಡಬೇಕು, ಪತ್ನಿಯು ನಾಲ್ಕನೇ ದಿನ ಒಮ್ಮೆ ಸ್ನಾನ ಮಾಡಿ ಪುನಃ ಸಂಕಲ್ಪಪೂರ್ವಕ ಸ್ನಾನ ಮಾಡಿ ಪ್ರೇತಕಾರ್ಯಾದಿಗಳನ್ನು ಮಾಡಬೇಕು. ಅಥವಾ ಐದನೇ ದಿನದಂದೂ ಪ್ರೇತಕಾರ್ಯಾದಿಗಳನ್ನು ಮಾಡಬಹುದು. ಆದರೆ ಈ ಕ್ರಮ ಈಗ ರೂಢಿಯಲ್ಲಿ ಇಲ್ಲ.

ಯಮಳಯೋಃ ಜ್ಯೇಷ್ಠಕನಿಷ್ಠವಿಚಾರಃ –

ಯಮಳೌ ಚೈಕಗರ್ಭೇ ತು ಸ್ತ್ರೀ ವಾ ಪುರುಷ ಏವ ವಾ ।
ಕನಿಷ್ಠ ಆದ್ಯಜಾತಃ ಸ್ಯಾತ್ಪಶ್ಚಾಜ್ಜಾತೋಽಗ್ರಜಃ ಸ್ಮೃತಃ ॥ [ವೈದ್ಯನಾಥೀಯ]

ತಾಯಿಯ ಗರ್ಭದಿಂದ ಪ್ರಥಮ ಭೂಸ್ಪರ್ಶವಾದ ಶಿಶುವು ಜ್ಯೇಷ್ಠವೆಂದು ವ್ಯವಹಾರವಿದ್ದರೂ ಗರ್ಭಕೋಶದಲ್ಲಿ ಮೇಲೆ ಕೆಳಗೆ ಬೆಳೆಯುತ್ತಿದ್ದು ಪ್ರಸವಕಾಲದಲ್ಲಿ ಎರಡನೆಯದಾಗಿ ಭೂಸ್ಪರ್ಶವಾದ ಶಿಶುವು ಜ್ಯೇಷ್ಠವೆಂದು ಸ್ಮೃತಿವಚನವಿದೆ. ಆದರೆ–

ಪಾರ್ಶ್ವಯೋಸ್ಸಂಸ್ಥಿತೌ ಗರ್ಭೌ ತಯೋರ್ಯಃ ಪೂರ್ವಜಸ್ಸ ತು ।
ಜ್ಯೇಷ್ಠ ಇತ್ಯುಚ್ಯತೇ ಸದ್ಭಿಃ ಜಾತಕಾದಿಷು ಕರ್ಮಸು ॥ [ವೈದ್ಯನಾಥೀಯ]

ಗರ್ಭಗಳು ಗರ್ಭಕೋಶದ ಉಭಯ ಪಾರ್ಶ್ವಗಳಲ್ಲಿ ಸಮವಾಗಿ ಬೆಳೆಯುತ್ತಿದ್ದುದಾಗಿ ವೈದ್ಯಕೀಯಪರೀಕ್ಷೆಯಿಂದ ನಿರ್ಧಾರವಾಗಿದ್ದರೆ ಪ್ರಥಮಜಾತ ಶಿಶುವು ಜ್ಯೇಷ್ಠವೆಂದು ವಿಶೇಷ ವಚನವಿದೆ.

Scanned by CamScanner

ದತ್ತಪುತ್ರವಿಚಾರ –

ಭ್ರಾತುಃ ಪುತ್ರಂ ಪ್ರಗೃಹ್ಣೀಯಾತ್ ಸ್ವಪುತ್ರೋ ನಾಸ್ತಿ ಯದ್ಯಪಿ । [ಅಂಗಿರಾಃ]

ಅಥವಾ ದುಹಿತುಃ ಪುತ್ರಂ ಗೃಹ್ಣೀಯಾತ್ ದತ್ತಕೇ ವಿಧೌ..... ॥ [ವೃದ್ಧಯಾಜ್ಞವಲ್ಕ್ಯಃ]

ಗಂಡುಮಕ್ಕಳಿಲ್ಲದವರು ಸಹೋದರರನ ಮಗನನ್ನು ಅಥವಾ ಮಗಳ ಮಗನನ್ನು ವಿಧಿಯಂತೆ ಸ್ವೀಕರಿಸಿ ಕಾಲೋಚಿತ ಸಂಸ್ಕಾರಪೂರ್ವಕ ಉತ್ತರಾಧಿಕಾರಿಯನ್ನಾಗಿ ಮಾಡುವುದು ಶಾಸ್ತ್ರಸಮ್ಮತವಾಗಿದೆ.

ಔರಸೇ ತು ಸಮುತ್ಪನ್ನೇ ಪುತ್ರಸ್ಯ ಗ್ರಹಣಾದನು ।
ಔರಸಸ್ತು ಪಿತುಃ ಕುರ್ಯಾತ್ತದಾ ದತ್ತೋ ವಿಸರ್ಜಯೇತ್ ॥ [ವೈದ್ಯನಾಥೀಯ]

ದತ್ತುಸ್ವೀಕಾರ ಮಾಡಿದ ಬಳಿಕ ದೈವಾನುಗ್ರಹಾತ್ ಪತ್ನಿ ಗರ್ಭವತಿಯಾಗಿ ಗಂಡುಶಿಶು ಜನನವಾದರೆ ಔರಸಪುತ್ರನೇ ತಂದೆಯ ಉತ್ತರಕ್ರಿಯೆಯಲ್ಲಿ ಅಧಿಕಾರಿಯೆಂದೂ ದತ್ತಪುತ್ರನು ಅಧಿಕಾರವನ್ನು ಬಿಟ್ಟುಕೊಡಬೇಕೆಂದೂ ಸಾಮಾನ್ಯವಚನವಿದ್ದರೂ–

ಸ್ವವಂಶಂ ಯಃ ಪರಿತ್ಯಜ್ಯ ದತ್ತಕೋಽಯಂ ಪರಸ್ಯ ತು ।
ವಂಶಾರ್ಥಮಾಗತೋ ಯಸ್ಮಾತ್ತತೋ ಜ್ಯೇಷ್ಠೋಽಯಮೀರಿತಃ ॥ [ಪೈಠೀನಸಿಃ]

ತನ್ನ ವಂಶವನ್ನು ಬಿಟ್ಟು ಇನ್ನೊಂದು ವಂಶಾಭಿವೃದ್ಧಿಗಾಗಿ ಸ್ವೀಕಾರ ಮಾಡಲ್ಪಟ್ಟ ದತ್ತಕಪುತ್ರನೇ ಜ್ಯೇಷ್ಠನೆಂದೂ ನಿರ್ಣಯಿಸಲಾಗಿದೆ.

ಕುಲದ್ವಯೇ ಸ್ವಯಂ ಕರ್ತಾ ಮಾತಾಪಿತ್ರೋರ್ನ ಚೇತ್ಸುತಃ ।
ಕರ್ಮ ಕುರ್ವೀತ ಯತ್ನೇನ ನ ಚೇನ್ನಿರಯಮಶ್ನುತೇ ॥ [ಲೋಗಾಕ್ಷಿಃ]

ದಾನಿಗಳಾದ ಮಾತಾಪಿತೃಗಳು ಪುತ್ರಹೀನರಾದರೆ ಉಭಯಕುಲದ ಕರ್ಮಾಧಿಕಾರಿಯೂ ದತ್ತಪುತ್ರನೇ ಆಗುವನು. ಹಾಗೂ–

Scanned by CamScanner

ಮಾತಾಪಿತ್ರೋರ್ಮೃತೌ ಸತ್ಯಾಂ ಕ್ಷೌರಮಾಶೌಚಮಾಚರೇತ್ ।
ತಿಲಾಂಜಲಿಃ ಪ್ರದಾತವ್ಯೋ ದತ್ತಕೇನ ನ ಸಂಶಯಃ ॥ [ವೃದ್ಧಯಾಜ್ಞವಲ್ಕ್ಯ]

ಜನ್ಮದಾತರು ಮರಣಹೊಂದಲು ಇತರ ಪುತ್ರರಿದ್ದರೂ ದತ್ತಪುತ್ರನು ಕ್ಷೌರ–ಆಶೌಚಾಚರಣೆ–ತಿಲಾಂಜಲಿದಾನ ಇವಿಷ್ಟನ್ನೂ ಮಾಡಬೇಕು.

ಬ್ರಹ್ಮಚಾರಿಕರ್ತೃವಿಚಾರ –

ಮಾತಾಪಿತ್ರೋರ್ವ್ರತೀ ಕುರ್ಯಾತ್ ಪಿತೃಮೇಧಂ ಸದೈವ ಹಿ ।
ಜ್ಯೇಷ್ಠಭ್ರಾತುಸ್ತಥೈವ ಸ್ಯಾದನ್ಯೇಷಾಂ ನ ಕದಾಚನ ॥ [ಸ್ಮೃತಿಸಾರ]

ವ್ರತಸ್ಥ ಬ್ರಹ್ಮಚಾರಿಯು ತಾಯಿ, ತಂದೆ, ಅಣ್ಣ, ಗುರು ಇವರ ಕ್ರಿಯೆಗಳನ್ನು ಮಾಡಬಹುದು. ಇತರರ ಕ್ರಿಯೆಗಳನ್ನು ಆಚರಿಸಿದರೆ ಪುನಃ ಉಪನಯನವಾಗಬೇಕು.

ಮಾತುಃ ಪಿತುಃ ಪ್ರಕುರ್ವೀತ ಸಂಸ್ಥಿತಸ್ಯೌರಸಸ್ಸುತಃ ।
ವ್ರತಸ್ಥೋ ವಾಽವ್ರತಸ್ಥೋ ವಾ ಏಕ ಏವ ಭವೇದ್ಯದಿ ॥ [ಸುಮಂತು]

ಓರ್ವನೇ ಪುತ್ರನಿದ್ದು ಉಪನಯನವಾಗದಿದ್ದರೂ ಚೌಲಸಂಸ್ಕಾರ (ಚೂಡಾಕರ್ಮ) ಆಗಿದ್ದಿದ್ದರೆ ಇನ್ನೊಬ್ಬರಿಂದ ಮಂತ್ರವಾಚನ ಮೂಲಕ ದಹನಾದಿಗಳನ್ನು ನಡೆಸಬಹುದೆಂದೂ ಕೆಲವು ಶಾಸ್ತ್ರಕಾರರ ನಿರ್ಣಯವಿದೆ. ಮೊದಲೇ ಚೌಲವು ಆಗಿದ್ದಿದ್ದರೆ ಪ್ರಾಣ ಹೋಗುವುದಕ್ಕಿಂತ ಮೊದಲೇ ಶುಭಘಳಿಗೆ ಗೊತ್ತುಪಡಿಸಿ ಉಪವೀತವನ್ನು ಮಾತ್ರ ಪಿತೃ(ಸ್ಪರ್ಶ) ಮೂಲಕ ಹಾಕಿ ಜ್ಞಾನಿಗಳಿಂದ ಮಂತ್ರೋಪದೇಶ ಕೊಡಿಸಬಹುದೆಂದೂ ಚೂಡಾಕರ್ಮ ಸಕಾಲದಲ್ಲಿ ಆಗದಿದ್ದರೆ ಆತನಿಂದ ಪಿತೃದಹನ ಮಾತ್ರ ಅಮಂತ್ರಕವಾಗಿ ಮಾಡಿಸಿ ವರ್ಷಪರ್ಯಂತ ಮೃತನ ಪತ್ನಿ ಯಾ ಸಹೋದರರು ಮೃತನ ಕ್ರಿಯಾದಿಗಳನ್ನು ನಡೆಸಿ ವರ್ಷದ ಅನಂತರ ಮೃತಜೀವಿಯ ಪುತ್ರನಿಗೆ ಸಂಸ್ಕಾರಗಳನ್ನು ಮಾಡಿ ಪಿತೃಕರ್ಮಾಧಿಕಾರಿಯನ್ನಾಗಿ ಮಾಡಬೇಕೆಂದೂ ಕೆಲವು ಋಷಿವಾಕ್ಯಗಳಿವೆ. [ಇಲ್ಲಿ ಸಂಪ್ರದಾಯ ಹಾಗೂ ಹಿರಿಯರ ಅಭಿಮತವೇ ಮುಖ್ಯವಾಗಿದೆ.]

Scanned by CamScanner

ಕ್ಷೌರವಿಚಾರ –

ಬ್ರಹ್ಮದಂಡಪೂರ್ವಕ ಬ್ರಾಹ್ಮಣರಿಂದ ಅನುಜ್ಞೆಯನ್ನು ಪಡೆದು ಕರ್ತೃವು (ಮಗನು) ವಪನಮಾಡಿಸಿಕೊಂಡು ಸ್ನಾನ ಮಾಡಬೇಕು.

ಗಂಗಾಯಾಂ ಭಾಸ್ಕರಕ್ಷೇತ್ರೇ ಮಾತಾಪಿತ್ರೋರ್ಗುರೋರ್ಮೃತೌ ।
ಆಧಾನೇ ಸೋಮಯಾಗೇ ಚ ವಪನಂ ಸಪ್ತಸು ಸ್ಮೃತಮ್ ॥ [ಸ್ಮೃತಿಸಾರ]

ಗಂಗಾ ಗಯಾದಿ ಕ್ಷೇತ್ರಯಾತ್ರೆಗಳಲ್ಲಿಯೂ ಮಾತಾಪಿತೃ ಹಾಗೂ ಜ್ಞಾನೋಪದೇಶಮಾಡಿದ ಗುರುಗಳ ಮರಣವಾದಲ್ಲಿಯೂ ಆಧಾನಸಂಸ್ಕಾರದಲ್ಲಿಯೂ, ಮಹಾಯಾಗ ಪ್ರಾರಂಭದಲ್ಲಿಯೂ ವಪನ ಮಾಡಿಸಿಕೊಳ್ಳಬೇಕು.

ಗರ್ಭವಾನ್ ವಪನಂ ಕುರ್ಯಾತ್ ಬ್ರಹ್ಮಹತ್ಯಾಸಮಂ ಭವೇತ್ ।
ಮಾತರಂ ಪಿತರಂ ಜ್ಯೇಷ್ಠಮಾಚಾರ್ಯಂ ಶ್ವಶುರಂ ವಿನಾ ॥ [ಸ್ಮೃತ್ಯಂತರ]

ಗರ್ಭಿಣಿಯ ಪತಿಯು ಕ್ಷೌರ ಮಾಡಿಸಿಕೊಂಡರೆ ಬ್ರಹ್ಮಹತ್ಯಾ ದೋಷವು ಬರುವುದು. ಆದರೂ ತಂದೆ, ತಾಯಿ, ಅಣ್ಣ, ಗುರು, ಮಾವ– ಈ ಐವರ ಮರಣದಲ್ಲಿ ಕ್ಷೌರ ವಿಹಿತವೆನಿಸಿದೆ.

ರಾತ್ರೌ ದಗ್ಧ್ವಾ ತು ಪಿಂಡಾಂತಂ ಕೃತ್ವಾ ವಪನವರ್ಜಿತಮ್ ।
ವಪನಂ ನೇಷ್ಯತೇ ರಾತ್ರೌ ಶ್ವಸ್ತನೀ ವಾಪನಕ್ರಿಯಾ ॥ [ಸಂಗ್ರಹ]

ರಾತ್ರೆಯಲ್ಲಿ ದಹನಕ್ರಿಯೆ ಆಗುವುದಾದರೆ ಕ್ಷೌರ ನಿಷೇಧವೆಂದೂ ಮರುದಿನ ಕ್ಷೌರಪೂರ್ವಕ ಕ್ರಿಯಾಪ್ರಾರಂಭ ಮಾಡಬೇಕೆಂದೂ ಇದೆ. ಆದರೂ ಸಹ–

ಮಾತಾಪಿತ್ರೋರ್ಮೃತೇ ಪ್ರಾಪ್ತೇ ದಾಹಕಸ್ಯ ವಿಶೇಷತಃ ।
ಸಂಸ್ಕಾರಕರ್ತುರ್ವಪನಂ ರಾತ್ರಾವಪಿ ವಿಧೇರ್ಬಲಾತ್ ॥ [ಧರ್ಮಸಿಂಧು]

Scanned by CamScanner

ತಾಯಿ ತಂದೆ ವಿಷಯದಲ್ಲಿ ರಾತ್ರೆಯಾದರೂ ವಪನವಿಹಿತವೆಂದು ವಿಶೇಷ ವಚನವಿದೆ. [ಆದರೆ ಇದು ಈಗ ರೂಢಿಯಲ್ಲಿಲ್ಲ.]

ಶವಪರ್ಯುಷಿತವಿಚಾರ –

ಪಂಚವಿಂಶತಿಘಟೀಪೂರ್ವಂ ದಿವಾ ಪ್ರೇತಸ್ಯ ಸಂಸ್ಕೃತಿಃ ।
ದಿವಾ ವಾ ಯದಿ ವಾ ರಾತ್ರೌ ಶವಸ್ತಿಷ್ಠತಿ ಕರ್ಹಿಚಿತ್ ॥

ತತ್ಪರ್ಯುಷಿತಮಿತ್ಯಾಹುಃ ದಹನೇ ತಸ್ಯ ಕಾ ಗತಿಃ ।
ಪಂಚಗವ್ಯೇನ ಸಂಸ್ನಾಪ್ಯ ಪ್ರಾಜಾಪತ್ಯತ್ರಯಂ ಚರೇತ್ ॥ [ಗಾರ್ಗ್ಯಸ್ಮೃತಿ]

ಪ್ರಾಣ ಹೋಗಿ ಇಪ್ಪತ್ತೈದು ಘಳಿಗೆ (ಹತ್ತು ತಾಸು) ಬಳಿಕ ಶವವು ಪರ್ಯುಷಿತ(ಹಳಸಿದ ವಸ್ತು)ವೆನಿಸುವುದು. ಅನಿವಾರ್ಯವಾದರೆ ಮೂರು ಪ್ರಾಜಾಪತ್ಯಕೃಚ್ಛ್ರ ಸೂತಕಾಂತ್ಯದಲ್ಲಿ ಆಚರಿಸುವೆನೆಂದು ಹೇಳಿ ತಾತ್ಕಾಲಿಕ ಪಂಚಗವ್ಯವನ್ನು (ಪವಮಾನಾನುವಾಕಮಂತ್ರದಿಂದ) ಪ್ರೋಕ್ಷಣೆಮಾಡಿ ಶವವನ್ನು ದಹನಮಾಡಬೇಕು.

ರಾತ್ರೌ ಯದಿ ಮೃತಃ ಕಶ್ಚಿತ್ ಪ್ರಮಾದಾತ್ ಕಾಲಪರ್ಯಯಾತ್ ।
ನವನಾಡ್ಯಾಸ್ತ್ವಧಃ ಸ್ಯಾಚ್ಚೇದ್ವಹ್ನೌ ತು ಜುಹುಯಾಚ್ಛವಮ್ ।
ಊರ್ಧ್ವಂ ಶ್ವಃ ಪ್ರಾತರೇವ ಸ್ಯಾನ್ನ ರಾತ್ರೌ ತು ಕದಾಚನ ॥ [ವ್ಯಾಸಸ್ಮೃತಿ]

ಅಸ್ತಮಾನವಾದ ಬಳಿಕ ಒಂಬತ್ತು ಘಟಿಯ (3 ತಾಸು 36 ಮಿನಿಟುಗಳ) ಒಳಗೆ ರಾತ್ರೆಯಲ್ಲೇ ದಹನಮಾಡಬೇಕು. ಅನಂತರವಾದರೆ ಮರುದಿನ ದಹನಮಾಡಬಹುದು ಎಂಬ ವಿಧಿಯಿದೆ. [ಆದರೆ ಕೃಚ್ಛ್ರಾಚರಣೆ ಪಂಚಗವ್ಯಪ್ರೋಕ್ಷಣೆ ಅವಶ್ಯವಾಗಿ ಮಾಡಬೇಕು.]

ಊರ್ಧ್ವೋಚ್ಛಿಷ್ಟಾಧರೋಚ್ಛಿಷ್ಟೇ ಹ್ಯಂತರಿಕ್ಷಮೃತೇಽಪಿ ವಾ ।
ಕೃಚ್ಛ್ರತ್ರಯಂ ಪ್ರಕುರ್ವೀತ ಆಶೌಚೇ ಮರಣೇಽಪಿ ವಾ ॥ [ಆಂಗಿರಸಸ್ಮೃತಿ]

Scanned by CamScanner

ಜೀವಿಯ ಪ್ರಾಣಹೋಗುವ ಸಮಯದಲ್ಲಿ ಊರ್ಧ್ವೋಚ್ಛಿಷ್ಟ(ವಾಂತಿ–ಕಫ–ಜೊಲ್ಲುಸುರಿಯುವಿಕೆ)ವಾದರೆ, ಅಧರೋಚ್ಛಿಷ್ಟ (ಮಲಮೂತ್ರ ವಿಸರ್ಜನ)ವಾದರೆ, ಅಂತರಿಕ್ಷದಲ್ಲಿ (ಮಂಚ–ಹಾಸಿಗೆಯಲ್ಲಿ) ಮೃತಿಹೊಂದಿದರೆ ಆ ದೇಹವು ನಿಷಿದ್ಧವಸ್ತುಸಮಾನವೆನಿಸುತ್ತದೆ. ಪ್ರಾಜಾಪತ್ಯಕೃಚ್ಛ್ರಾಚರಣೆ, ಗವ್ಯಪ್ರೋಕ್ಷಣೆಯಿಂದ ಅದನ್ನು ಶುದ್ಧಿಗೊಳಿಸಿ ದಹಿಸಬೇಕು.

ಪ್ರೇತಸ್ಯ ಪುನಃಸಂಧಾನಮ್ –

ಉಪನಯನಸಂಸ್ಕಾರವಾದ ಬಳಿಕ ಬ್ರಹ್ಮಚಾರಿಯು ನಿತ್ಯದಲ್ಲೂ ಅಗ್ನಿಕಾರ್ಯವನ್ನು ನಡೆಸುತ್ತಿರಬೇಕು. ಮರಣವಾಗಲು ಲೌಕಿಕಾಗ್ನಿಯನ್ನು ಪ್ರಜ್ವಲಿಸಿ ತುಷಾಗ್ನಿಯೆಂದು ಹೆಸರಿಸಿ ದಹನ ಮಾಡಬೇಕು. ಗೃಹಸ್ಥನೋರ್ವನು ವಿವಾಹಕಾಲದಲ್ಲಿ ಪ್ರಾಪ್ತವಾದ ಗೃಹ್ಯಾಗ್ನಿ(ಔಪಾಸನಾಗ್ನಿ)ಯನ್ನು ನಿತ್ಯದಲ್ಲೂ ಸಾಯಂಪ್ರಾತಃ ಉಪಾಸನೆ ಮಾಡಿಕೊಂಡಿರಬೇಕು. ಮರಣವಾಗಲು ದಹನಕ್ರಿಯೆಯಲ್ಲಿ ಅದೇ ಅಗ್ನಿಯನ್ನು ಉಪಯೋಗಿಸಬೇಕು. ಶವದ ಸಮೀಪ ಲೌಕಿಕಾಗ್ನಿಯನ್ನು ಪ್ರಜ್ವಲಿಸಿ ಸಂಕಲ್ಪಮಾಡಿ ಪ್ರೇತಸ್ಪರ್ಶಸಮಿಧೆಯನ್ನು ಮಂತ್ರವತ್ತಾಗಿ ಹೋಮಿಸುವುದೇ ಪುನಃಸಂಧಾನವಿಧಾನವಾಗಿದೆ. ಶವದಹನಕ್ಕಾಗಿ ಅಗ್ನಿಪ್ರಭೇದನಿಯಮಗಳನ್ನು ತಿಳಿಯಬೇಕು.

ಗೃಹಸ್ಥೋ ಬ್ರಹ್ಮಚಾರೀ ಚ ವಿಧುರೋ ವಿಧವಾಃ ಸ್ತ್ರಿಯಃ ।
ಔಪಾಸನಶ್ಚೋತ್ತಪನಸ್ತುಷಾಗ್ನಿಸ್ತು ಕಪಾಲಜಃ ॥ [ಸ್ಮೃತ್ಯಂತರ]

ವ್ರತಿಯತ್ಯೋಃ ಕಪಾಲಾಗ್ನಿಃ ತುಷಾಗ್ನಿರ್ಬಾಲಕನ್ಯಯೋಃ ।
ವಿಧುರಂ ವಿಧವಾಂ ಚೈವ ದಹೇದುತ್ತಪನಾಗ್ನಿನಾ ॥ [ಕರ್ಮಸಿದ್ಧಾಂತ]

ಔಪಾಸನಾಗ್ನಿ(ಗೃಹ್ಯಾಗ್ನಿ), ಉತ್ತಪನಾಗ್ನಿ, ಕಪಾಲಾಗ್ನಿ, ತುಷಾಗ್ನಿ – ಎಂದು ನಾಲ್ಕು ವಿಧವಾದ ಅಗ್ನಿಗಳಿವೆ. ಗೃಹಸ್ಥ ಗೃಹಿಣಿಯರನ್ನು ಗೃಹ್ಯಾಗ್ನಿಯಿಂದಲೂ ವಿಧುರವಿಧವೆಯರನ್ನು ಉತ್ತಪನಾಗ್ನಿಯಿಂದಲೂ ಬ್ರಹ್ಮಚಾರಿ ವಾನಪ್ರಸ್ಥವ್ರತಸ್ಥರನ್ನು ಕಪಾಲಾಗ್ನಿಯಿಂದಲೂ ಮೂರು ವರ್ಷದಿಂದ ಉಪನಯನ ತನಕದ ಗಂಡುಮಕ್ಕಳನ್ನೂ ಮೂರು ವರ್ಷಗಳಿಂದ ವಿವಾಹಪರ್ಯಂತದ ಹೆಣ್ಣುಮಕ್ಕಳನ್ನೂ ತುಷಾಗ್ನಿಯಿಂದಲೂ ದಹನ ಮಾಡಬೇಕು. ಅಗ್ನಿಯನ್ನು ಹೆಸರಿಸಿದಂತೆ ಸಿದ್ಧಗೊಳಿಸುವ ವಿಧಾನ –

Scanned by CamScanner

ಔಪಾಸನಾಗ್ನಿ – ಗೃಹಸ್ಥನು ವಿವಾಹವಾದಂದಿನಿಂದ ನಿತ್ಯ ಉಪಾಸನೆ ಮಾಡಿಕೊಂಡಿರುವ ಅಗ್ನಿಯೇ ಗೃಹ್ಯಾಗ್ನಿ (ಔಪಾಸನಾಗ್ನಿ).

ಉತ್ತಪನಾಗ್ನಿ – ಒಂದು ಮುಷ್ಟಿ ದರ್ಭೆಯನ್ನು ಪ್ರಜ್ವಲಿಸಿ ಆ ಜ್ವಾಲೆಯಿಂದ ಇನ್ನೊಂದು ಮುಷ್ಟಿ ಪ್ರಜ್ವಲಿಸಿ ಪುನಃ ಮತ್ತೊಂದು ಮುಷ್ಟಿ ದರ್ಭೆಯನ್ನು ಪ್ರಜ್ವಲಿಸಿದ ಅಗ್ನಿಯೇ ಉತ್ತಪನಾಗ್ನಿ.

ಕಪಾಲಾಗ್ನಿ – ಕೆಂಡಗಳ ಮೇಲೆ ಮಡಕೆತುಂಡು ಇಟ್ಟು ಜೊತೆಗೆ ಕಟ್ಟಿಗೆಚೂರು ಇಟ್ಟಾಗ ಜ್ವಲಿಸುವ ಅಗ್ನಿಯೇ ಕಪಾಲಾಗ್ನಿ.

ತುಷಾಗ್ನಿ – ಜ್ವಲಿಸುವ ಕೆಂಡದ ಮೇಲೆ ಭತ್ತದ ಉಮಿಯನ್ನು ಹಾಕಿದಾಗ ಸುಡುವ ಅಗ್ನಿಯೇ ತುಷಾಗ್ನಿಯೆಂದೂ ಕರೆಯಲಾಗಿದೆ.

ಕೃಷ್ಣಪಕ್ಷದಲ್ಲಿ ರಾತ್ರಿಯಲ್ಲಿ ಮರಣವಾದರೆ ಸಾಯಂಕಾಲದ ಔಪಾಸನದೇವತೆಗಳಿಗೂ ಹಗಲಲ್ಲಿ ಮರಣವಾದರೆ ಪ್ರಾತರೌಪಾಸನದೇವತೆಗಳಿಗೂ ಅಮಾವಾಸ್ಯೆಯ ವರೆಗಿನ ದಿನಸಂಖ್ಯೆಗೆ ಅನುಗುಣವಾದ ಸಂಖ್ಯೆಯಿಂದ ಆಹುತಿಯನ್ನು ನೀಡಬೇಕು. ಶುಕ್ಲಪಕ್ಷದಲ್ಲಾದರೆ ಹಗಲು ಮೃತಿಯಾದರೆ ಪ್ರಾತರೌಪಾಸನದೇವತೆಗಳಿಗೂ ರಾತ್ರಿಯಲ್ಲಿ ಮರಣವಾದರೆ ಸಾಯಮೌಪಾಸನದೇವತೆಗಳಿಗೂ ಆಹುತಿಯನ್ನು ಕೊಡಬೇಕು. ಇಲ್ಲಿ ದರ್ಶಪರ್ಯಂತ ನಿಯಮವಿಲ್ಲ. ಪತ್ನಿಯು ಮೊದಲು ಮರಣಹೊಂದಿದರೆ ತನ್ನ ಉಪಾಸನಾಗ್ನಿಯಿಂದಲೇ ದಹನ ಮಾಡಬೇಕು. ಶಕ್ತನಾದರೆ ಪುನಃ ವಿವಾಹವಾಗಿ ಅಗ್ನಿಯನ್ನು ಪೂರ್ಣಗೊಳಿಸಬಹುದು. ಅಶಕ್ತನಾದರೆ 'ಪ್ರತ್ಯವರೋಹ ಜಾತವೇದಃ ಪುನಸ್ತ್ವಂ ದೇವೇಭ್ಯೋ ಹವ್ಯಂ ವಹತು ಪ್ರಜಾನನ್ ।' ಎಂದು ಲೌಕಿಕಾಗ್ನಿಯಲ್ಲಿ ಪ್ರತ್ಯವರೋಹಣಪೂರ್ವಕ ತನ್ನ ಮರಣಪರ್ಯಂತವಾಗಿ ನಿತ್ಯ ಉಪಾಸನ ಮಾಡಬೇಕು.

ಶವನಿರ್ಹರಣವಿಚಾರ –

ಸ್ನಾನಂ ಪ್ರೇತಸ್ಯ ಪುತ್ರಾದ್ಯೈರ್ವಸ್ತ್ರಾದ್ಯೈಃ ಪೂಜನಂ ತತಃ । [ಪ್ರಚೇತಸ್ಮೃತಿ]

ಕರ್ತೃವು ದುಃಖವನ್ನು ಸಹಿಸಿಕೊಂಡು ಆತ್ಮೀಯರು ಸೇರಿ ಶವವನ್ನು ಪ್ರಾಂಗಣಕ್ಕೆ ತಂದು ತುಳಸೀಕಟ್ಟೆ ಸಮೀಪ ಮಾಡಿನ ನೀರು ಬೀಳುವ ಜಾಗದಲ್ಲಿ ಮಂಡಲದಲ್ಲಿ (ಹಲಗೆಯ ಮೇಲೆ, ಕೆಲವೆಡೆ ಇಡೀ ಬಾಳೆ ಎಲೆಯ ಮೇಲೆ) ದಕ್ಷಿಣದಿಕ್ಕಿಗೆ ತಲೆಯಿರುವ ಹಾಗೆ ಇಟ್ಟು ಕಾಲಿನಿಂದ ಶಿರಪರ್ಯಂತ ಎಣ್ಣೆ ಹಚ್ಚಿ ಬಿಸಿನೀರಿನಿಂದ ಸ್ನಾನ ಮಾಡಿಸಿ ನೂತನ ಬಿಳಿ ವಸ್ತ್ರಾದಿಗಳಿಂದಲೂ ಗೋಪೀಚಂದನ ಅಂಗಾರಾಕ್ಷತೆ ನಿರ್ಮಾಲ್ಯಗಳಿಂದಲೂ ಅಲಂಕರಿಸಬೇಕು. ಮುತ್ತೈದೆಯಾದರೆ ಕುಂಕುಮಾದಿ ಸೌಭಾಗ್ಯದ್ರವ್ಯಗಳಿಂದ ಅಲಂಕರಿಸಬೇಕು. (ಶವಕ್ಕೆ ಲಾವಂಚದಿಂದ ತಯಾರಿಸಿದ ಮಾಲೆಯನ್ನು ಹಾಕುವುದಿದೆ.) ಅಂಚು ಇಲ್ಲದ ನೂತನ ಬಿಳಿಬಟ್ಟೆಯಿಂದ ಶಿರದಿಂದ ಪಾದ ತನಕ ಆಚ್ಛಾದನೆ ಮಾಡಬೇಕು.

Scanned by CamScanner

(ರೂಢಿಯಲ್ಲಿ ಮುಖವನ್ನು ಬಿಟ್ಟು ಪಾದತಲ ಆಚ್ಛಾದನೆ ಮಾಡುವುದಿದೆ.) ಆದರೆ– **'ಮುಖೇ ವಸ್ತ್ರಂ ಪಿಧಾಯೈನಂ ನಿರ್ಹರೇಯುಸ್ಸುತಾದಯಃ'** [ಕಾತ್ಯಾಯನಸ್ಮೃತಿ] ಎಂಬಂತೆ ಮುಖವನ್ನು ಆಚ್ಛಾದನೆ ಮಾಡಬೇಕೆಂದಿದೆ.

ಪಾದಮಾತ್ರಮವಚ್ಛಾದ್ಯ ಮೂಲತೋಽಹತವಾಸಸಾ ।
ಕರ್ತಾ ತದೈಕದೇಶಂ ತು ಕುರ್ಯಾದ್ವಾಸಸ್ತಥೋತ್ತರಮ್ ॥ [ಸ್ಮೃತ್ಯಂತರ]

ಮುಖದಿಂದ ಪಾದತನಕ ಆಚ್ಛಾದನೆ ಮಾಡಿ ಬಳಿಕ ಪಾದದೇಶದಿಂದ ಹೊದಿಸಿದ ಬಟ್ಟೆಯ ನಾಲ್ಕನೇ ಒಂದಂಶವನ್ನು ಹರಿದು ಉತ್ತರೀಯವಸ್ತ್ರ(ಕರ್ಮವಸ್ತ್ರ)ವೆಂದು ಕರ್ತೃವು ಕೊರಳಲ್ಲಿ ಮಾಲಾಕಾರವಾಗಿ ಧರಿಸಬೇಕು. ಆ ಉತ್ತರೀಯದಲ್ಲಿ ಕಬ್ಬಿಣಚೂರು, ಹುರಿದ ಎಳ್ಳನ್ನು ಗ್ರಂಥಿಯಾಗಿರಿಸಿಕೊಂಡಿರಬೇಕು (ಕಟ್ಟಿಕೊಂಡಿರಬೇಕು). ಸ್ನಾನಾದಿಗಳಿಂದ ಎಳ್ಳು ಅಂಕುರಿಸದಿರುವಂತೆ ಮಾಡುವುದೇ ಹುರಿಯಬೇಕು ಎನ್ನುವುದರ ಉದ್ದೇಶವಾಗಿದೆ. ಕ್ರಿಯೆಯಲ್ಲಿ ಪಾಲ್ಗೊಳ್ಳುವ ಗಂಡುಮಕ್ಕಳಿಗೆಲ್ಲಾ ಉತ್ತರೀಯ ಆವಶ್ಯಕ. ಸಹೋದರರ ಉತ್ತರೀಯಗಳು ಒಬ್ಬರಿಂದೊಬ್ಬರಿಗೆ ವ್ಯತ್ಯಾಸವಾಗಬಾರದು.

ಬಳಿಕ ಅಲಂಕರಿಸಿದ ಶವವನ್ನು ಸಿದ್ಧಗೊಳಿಸಿದ ಚಟ್ಟದಲ್ಲಿ ಮೇಲ್ಮುಖವಾಗಿಟ್ಟು ಚಟ್ಟಸಹಿತ ಶವವನ್ನು ಬಟ್ಟೆತಂತುವಿನಿಂದ ಭದ್ರವಾಗಿ ಕಟ್ಟಬೇಕು. ಮಕ್ಕಳು ಅಪ್ರದಕ್ಷಿಣೆ ಬಂದು ನಮಸ್ಕರಿಸಲು, ಮೃತನ ಪತ್ನಿಯೂ ಅಪ್ರದಕ್ಷಿಣೆಯಾಗಿ ಬಂದು ಶವದ ಪಾದಮೂಲದಲ್ಲಿ ತಾನು ಧರಿಸಿದ್ದ ಸೌಭಾಗ್ಯದ್ರವ್ಯಗಳನ್ನು ತೆಗೆದು ಇಡುವ ವಾಡಿಕೆ ಇದೆ. (ಪತ್ನಿಯು ರಜಸ್ವಲೆಯಾಗಿದ್ದರೆ ನಾಲ್ಕನೇ ದಿನ ಸ್ನಾನ ಮಾಡಿ ಮುತ್ತೈದೆತನದ ದ್ರವ್ಯಗಳನ್ನು ವಿಸರ್ಜಿಸಬೇಕು.)

ಗರುಡಪುರಾಣದ ಪ್ರಕಾರ– ಮೃತಪಟ್ಟ ಸ್ಥಳದಲ್ಲಿ, ಬಾಗಿಲಲ್ಲಿ, ಅರ್ಧಮಾರ್ಗದಲ್ಲಿ, ಚಿತೆಯಲ್ಲಿ, ಶವದ ಕೈಯಲ್ಲಿ, ಅಸ್ಥಿಸಂಚಯನದಲ್ಲಿ – ಹೀಗೆ ಆರು ಪಿಂಡಗಳನ್ನು, ಮುಂದೆ ನಿತ್ಯವಿಧಿಗಳಲ್ಲಿ ಹತ್ತು ದಿನ ಹತ್ತು ಪಿಂಡಗಳನ್ನು ಇಡುವುದರಿಂದ ಮಲಿನಷೋಡಶ ಮಾಸಿಕಶ್ರಾದ್ಧವೆಂದು ತಿಳಿದುಬರುತ್ತದೆ. ದಹನಕ್ಕೆ ಸಂಬಂಧಪಟ್ಟ ಅಗ್ನಿಯನ್ನು ಮಣ್ಣಿನ ಪಾತ್ರೆಯಲ್ಲಿಟ್ಟು ಶಿಕ್ಯದಲ್ಲಿ ತೂಗಾಡಿಸಿ ಶವದ ಮುಂದೆ ಹಿಡಿದುಕೊಂಡು ಹೋಗಬೇಕು. ಶವವಾಹಕ ಬಂಧುಗಳು ಉಪವೀತವನ್ನು ಮಾಲಾಕಾರ ಮಾಡಿಕೊಂಡು ತಲೆಗೆ ವಸ್ತ್ರ ಸುತ್ತಿಕೊಂಡು ಹಿರಿಯರನ್ನು ಮುಂದಾಗಿರಿಸಿಯೂ ಪುತ್ರರು ಶವದ ಚಟ್ಟವನ್ನು ಹೊತ್ತುಕೊಂಡೂ ಅಗ್ನಿಯನ್ನು, ನೀರಿನ ಕೊಡವನ್ನು ಮುಂದೆ ಮಾಡಿಕೊಂಡು ಶ್ಮಶಾನಪ್ರದೇಶಕ್ಕೆ

Scanned by CamScanner

ಹೋಗಬೇಕು. ಪಿತೃಗಳು ತಾನು ಸಣ್ಣವನಿದ್ದಾಗ ಹೆಗಲಲ್ಲಿ ಎತ್ತಿ ಇಳಿಸಿ ಆಡಿಸಿದ್ದರು. ಈ ಋಣವನ್ನು ಪರಿಹರಿಸಲು ಪುತ್ರನು ಶವವನ್ನು ಅಗತ್ಯವಾಗಿ ಹೆಗಲಲ್ಲಿಟ್ಟು ಒಯ್ಯಬೇಕು. ಹೆಜ್ಜೆಹೆಜ್ಜೆಗೂ ಅಶ್ವಮೇಧಯಾಗದ ಫಲವಿದೆಯೆಂದೂ ಹೇಳಿರುತ್ತದೆ. ಅಗ್ನಿ ಮತ್ತು ಶವದ ಮಧ್ಯೆ ಯಾರೂ ಸುಳಿಯಬಾರದು. ದಾರಿಮಧ್ಯೆ ಶವವನ್ನು ಇಟ್ಟು ಕರ್ತೃವು ಶವದ ಮುಚ್ಚಿದ ವಸ್ತ್ರವನ್ನು ಸರಿಸಿ ಮುಖ ನೋಡಿ ವಸ್ತ್ರ ಮುಚ್ಚಿ ಬಲ ಎಡ ಪಾರ್ಶ್ವಗಳಲ್ಲಿ ಎರಡು ಪಿಂಡಗಳನ್ನು ಹಾಕಬೇಕು ಎನ್ನುವ ವಿಧಿಯಿದೆ. ಮಾಂಸಾದಿಗಳ ಆಸೆಯಿಂದ ಅನುಸರಿಸುವ ಮಾಯಾಶಕ್ತಿದೇವತೆಗಳ ತೃಪ್ತಿಗಾಗಿ ಈ ವಿಧಾನವಿದೆ. ಶವವಾಹಕರಲ್ಲಿ ಹಿಂದಿನವರು ಮುಂದೆ, ಮುಂದಿನವರು ಹಿಂದೆಯಾಗಿ ಶ್ಮಶಾನದೇಶಕ್ಕೆ ಹೋಗಿ ದಹನಸ್ಥಳಕ್ಕೆ ಅಪ್ರದಕ್ಷಿಣೆಯಂತೆ ಒಯ್ದು ವಾಯವ್ಯಭಾಗದಲ್ಲಿ ನೀರು, ಅಗ್ನಿ ಹಾಗೂ ಶವವನ್ನು ದಕ್ಷಿಣಶಿರವಾಗುವಂತೆ ಇಡಬೇಕು. ದಾರಿಮಧ್ಯೆ ಪಿಂಡಹಾಕುವ ಬದಲು ತಿಲೋದಕ ನೀಡುವ ವಾಡಿಕೆಯೂ ಇದೆ. ದಹನಪ್ರದೇಶದಲ್ಲಿ ಕಲ್ಲು, ಮುಳ್ಳು ಮೊದಲಾದುವುಗಳನ್ನು ಕಿತ್ತು ಪ್ರೋಕ್ಷಣೆ ಮೂಲಕ ಶುದ್ಧಗೊಳಿಸಿ ವಾಯವ್ಯದಿಂದ ಆಗ್ನೇಯಪರ್ಯಂತ ಒಂದಾಳು ದೀರ್ಘವಾದ ಹನ್ನೆರಡು ಅಂಗುಲ ಹೊಂಡವನ್ನು ಮಾಡಿ ಮಧ್ಯೆ ಕಬ್ಬಿಣ ಯಾ ಶಮೀಶಾಖೆಯಿಂದ ಭೂಮಿಯಲ್ಲಿ ಮೂರು ರೇಖೆಗಳನ್ನು ಬರೆದು ಆ ರೇಖೆಗಳ ಮೂಲದಲ್ಲಿ ಬಿಳಿ ವರ್ಣದ ಚಿಕ್ಕದಾದ ಶಿಲಾಖಂಡಗಳನ್ನು ಇಡಬೇಕು. ಕುಶಲ ವ್ಯಕ್ತಿಯಿಂದ ಶರೀರದಹನಕ್ಕೆ ಸಾಕಾಗುವಷ್ಟು ತುಲಸೀಕಾಷ್ಠ ಹಾಗೂ ಇತರ ಕಟ್ಟಿಗೆಗಳಿಂದ ಚಿತೆಯನ್ನು ಮಾಡಿಸಬೇಕು.

ದಹನದ ಬಗ್ಗೆ ವಿಶೇಷವಿಚಾರ –

ಬುದ್ಧಿಪೂರ್ವಕಂ ದುರ್ಮೃತಾನಾಂ ಲೌಕಿಕಾಗ್ನಾವಮಂತ್ರಕಂ ದಗ್ಧ್ವಾ ಅಸ್ಥೀನಿ ಸ್ಥಾಪಯೇತ್ ಪ್ರಾಯಶ್ಚಿತ್ತಂ ನಾರಾಯಣಬಲ್ಯಾದಿ ಕೃತ್ವಾ ಅಸ್ಥೀನಿ ಕ್ಷೀರೇಣ ಸ್ನಾಪಯಿತ್ವಾ ಸಮಂತ್ರಕಂ ದಹೇದಿತಿ ಶೌನಕೀಯಮತಮ್ ॥

ಆತ್ಮಹತ್ಯೆ ಮಾಡಿಕೊಂಡು ಪ್ರಾಣತ್ಯಾಗಮಾಡಿದರೆ ಲೌಕಿಕಾಗ್ನಿಯಿಂದ ಅಮಂತ್ರಕವಾಗಿ ದಹನ ಮಾಡಿ ಮರುದಿನ ಅಸ್ಥಿಗಳನ್ನು ತೆಗೆದಿಟ್ಟು ಕೃಚ್ಛ್ರಾಚರಣಪೂರ್ವಕ ನಾರಾಯಣಬಲಿ ಪ್ರಾಯಶ್ಚಿತ್ತ ನಡೆಸಿ ಹಾಲಿನಿಂದ ಅಸ್ಥಿಯನ್ನು ಶುದ್ಧಗೊಳಿಸಿ ಮಂತ್ರಪೂರ್ವಕ ದಹನ ಮಾಡಬೇಕು. ಅನಿರೀಕ್ಷಿತವಾಗಿ ಅಗ್ನಿ, ನೀರುಗಳಿಗೆ ಬಿದ್ದು, ಮರದಿಂದ ಬಿದ್ದು, ವಾಹನಾಪಘಾತಗಳಿಂದ ಮೃತರಾದರೆ ಕ್ರಿಯಾಪ್ರಾರಂಭದಲ್ಲಿ ಔರ್ಧ್ವದೇಹಿಕವಿಧಿ ಅಧಿಕಾರಕ್ಕಾಗಿ ಶವದಹನಕ್ಕಿಂತ ಮೊದಲು ಒಂದು, ಹನ್ನೊಂದನೇ ಯಾ ಹನ್ನೆರಡನೇ ದಿನ ಸಪಿಂಡೀಕರಣಸಂದರ್ಭದಲ್ಲಿ ಸದ್ಗತಿಗಾಗಿ ಮತ್ತೊಂದು –ಹೀಗೆ ಎರಡು ನಾರಾಯಣಬಲಿಗಳನ್ನು ಮಾಡಬೇಕು.

Scanned by CamScanner

ದಹನಪ್ರಕಾರ –

ಚಿತಿನಿರ್ಮಾಣವಾದ ಮೇಲೆ ಚಟ್ಟಸಹಿತ ಶವವನ್ನು ದಕ್ಷಿಣ ಶಿರವಿರುವಂತೆ ಚಿತೆಯ ಮೇಲಿಟ್ಟು ಶವವನ್ನು ಚಟ್ಟಕ್ಕೆ ಕಟ್ಟಿದ ಹಗ್ಗವನ್ನು ಬಿಡಿಸಬೇಕು. ಶವದ ಮೇಲೆ ಬಂಧುಗಳೂ ಧರ್ಮಕಾಷ್ಠವೆಂದು ಕಟ್ಟಿಗೆಯನ್ನು ಇಡುವ ಪದ್ಧತಿ ಇದೆ. ಮರಣಕಾಲದಲ್ಲಿ ಧನಿಷ್ಠಾದಿ ಪಂಚಕದೋಷ ಹಾಗೂ ಕೃತ್ತಿಕಾದಿ ತ್ರಿಪಾದನಕ್ಷತ್ರದೋಷಗಳಿದ್ದರೆ ಹಿಟ್ಟಿನಿಂದ ಪ್ರತಿಮೆಯನ್ನು ಮಾಡಿ ಪ್ರಯೋಗದಲ್ಲಿ ತಿಳಿಸಿದಂತೆ ಶವದ ಜೊತೆ ದಹನ ಮಾಡಬೇಕು.

ಪಂಚಕದ ಬಗ್ಗೆ ವಿಶೇಷವಿಚಾರ –

ಆದೌ ಕೃತ್ವಾ ಧನಿಷ್ಠಾರ್ಧಮೇತನ್ನಕ್ಷತ್ರಪಂಚಕಮ್ ।
ರೇವತ್ಯಂತಂ ಸದಾ ದೂಷ್ಯಮಶುಭಂ ದಾಹಕರ್ಮಣಿ ॥ [ಗಾರುಡ]

ಧನಿಷ್ಠಾನಕ್ಷತ್ರದ ಮೂರು, ನಾಲ್ಕನೇ ಪಾದದಿಂದ ರೇವತೀನಕ್ಷತ್ರ ತನಕ ಮರಣವಾದರೆ ಅನಿಷ್ಟಫಲವಿದೆ.

ಕುಂಭಮೀನಸ್ಥಿತೇ ಸೋಮೇ ಮರಣಂ ಯಸ್ಯ ಜಾಯತೇ ।
ನ ತಸ್ಯೋರ್ಧ್ವಗತಿರ್ದೃಷ್ಟಾ ಸಂತತೌ ನ ಶುಭಂ ಭವೇತ್ ॥

ನ ತಸ್ಯ ದಾಹಃ ಕರ್ತವ್ಯೋ ವಿನಾಶಸ್ತ್ವೇಷು ಜಂತುಷು ।
ಅಥವಾ ತದ್ದಿನೇ ಕಾರ್ಯೋ ದಾಹಸ್ತು ವಿಧಿಪೂರ್ವಕಮ್ ॥ [ಬ್ರಾಹ್ಮ]

ಚಂದ್ರನು ಕುಂಭ–ಮೀನ ರಾಶಿಯಲ್ಲಿರುವಾಗ ಮರಣಪಟ್ಟರೆ ಜೀವಿಗೆ ಸದ್ಗತಿ ಇಲ್ಲ. ಸಂತತಿಯಲ್ಲೂ ಅನಿಷ್ಟಫಲಗಳಿವೆ. ಪ್ರಾಯಶ್ಚಿತ್ತವಾಗಿ ಶವದ ಬಾಯಲ್ಲಿ ಎಳ್ಳು ಸಹಿತ ಪಂಚರತ್ನಗಳನ್ನು ಹಾಕಬೇಕು. ಹಿಟ್ಟಿನಿಂದ ಅಥವಾ ದರ್ಭೆಯಿಂದಲಾದರೂ ಐದು ಪ್ರತಿಮೆಗಳನ್ನು ಮಾಡಿ ಧನಿಷ್ಠಾದಿ ಐದು ನಕ್ಷತ್ರದೇವತೆಗಳನ್ನು ಅಭಿಮಂತ್ರಿಸಿ ದಹನಕಾಲದಲ್ಲಿ ಪ್ರಯೋಗದಲ್ಲಿ ತಿಳಿಸಿದಂತೆ ಶವದ ಉಕ್ತ ಸ್ಥಾನಗಳಲ್ಲಿಡಬೇಕು.

Scanned by CamScanner

ವಿಶೇಷ ನಿಯಮ – ಧನಿಷ್ಠಾನಕ್ಷತ್ರಾರ್ಧಕ್ಕಿಂತ ಮೊದಲು ಮೃತಪಟ್ಟು ಉತ್ತರಾರ್ಧಾದಿ ಪಂಚಕನಕ್ಷತ್ರಗಳಲ್ಲಿ ದಹನಮಾಡುವುದಿದ್ದರೆ ಹಿಟ್ಟಿನ ಮೂರ್ತಿಗಳ ಸಹಿತ ದಹನವಾಗಬೇಕು. ಹನ್ನೊಂದರಂದು ಶಾಂತಿ ಬೇಕಾಗಿಲ್ಲ. ಅದರಂತೆ ಪಂಚಕನಕ್ಷತ್ರದಲ್ಲಿ ಮರಣಪಟ್ಟು ಅಶ್ವಿನ್ಯಾದಿ ಮುಂದಿನ ನಕ್ಷತ್ರಗಳಲ್ಲಿ ದಹನಮಾಡುವುದಿದ್ದರೆ ಹಿಟ್ಟಿನ ಮೂರ್ತಿ ಅಗತ್ಯವಿಲ್ಲ. ಹನ್ನೊಂದರಂದು ಶಾಂತಿ ಮಾತ್ರ ಸಾಕು.

ತ್ರಿಪಾದನಕ್ಷತ್ರವಿಚಾರ –

ತ್ರಿಪಾದನಕ್ಷತ್ರಗಳು – ಕೃತ್ತಿಕಾ, ಪುನರ್ವಸು, ಉತ್ತರಾ, ವಿಶಾಖಾ, ಉತ್ತರಾಷಾಢ, ಪೂರ್ವಾಭಾದ್ರ – ಇವುಗಳು ತ್ರಿಪಾದನಕ್ಷತ್ರಗಳು. ಇವುಗಳಲ್ಲಿ ಕೃತ್ತಿಕಾ, ಉತ್ತರಾ, ಉತ್ತರಾಷಾಢ ನಕ್ಷತ್ರಗಳ ಪ್ರಥಮಪಾದಗಳು ಅನಿಷ್ಟಫಲಪ್ರದಗಳಾಗುವುದಿಲ್ಲ. ಮುಂದಿನ ಮೂರು ಪಾದಗಳು ಅನಿಷ್ಟಕರವಾಗಿವೆ. ಪುನರ್ವಸು, ವಿಶಾಖಾ – ಈ ಎರಡು ನಕ್ಷತ್ರಗಳ ಮೊದಲ ಮೂರು ಪಾದಗಳಲ್ಲಿ ಮರಣವಾದರೆ ಮಾತ್ರ ದೋಷವೆನಿಸುವುದು. ಶವದಹನಕಾಲದಲ್ಲಿ ಮೂರು ಬೊಂಬೆಗಳ ಸಹಿತ ದಹನವಿಧಿ ಇದೆ. ಹನ್ನೊಂದನೇ ದಿನ ಶಾಂತಿ ಮಾಡುವುದರಿಂದ ಜೀವಿಗೂ ಸದ್ಗತಿಯುಂಟಾಗಿ ಕುಟುಂಬಕ್ಕೂ ಅನಿಷ್ಟ ಪರಿಹಾರವಾಗುವುದು. ಪಂಚಕ ಹಾಗೂ ತ್ರಿಪಾದನಕ್ಷತ್ರ ಶಾಂತಿಗಳಲ್ಲಿ ಬ್ರಹ್ಮಕರ್ಮಸಮುಚ್ಚಯಪ್ರಕಾರ ನವಗ್ರಹಶಾಂತಿಪೂರ್ವಕ ನಕ್ಷತ್ರಶಾಂತಿಯನ್ನು ಉಲ್ಲೇಖಿಸಿರುತ್ತಾರೆ. ಇದರಂತೆ ದ್ವಿಪುಷ್ಕರಯೋಗ, ತ್ರಿಪುಷ್ಕರಯೋಗಗಳೆಂದೂ ಇವೆ. ಬಲ್ಲವರಿಂದ ತಿಳಿದು ಸೂಕ್ತ ಶಾಂತಿಯನ್ನು ಮಾಡುವುದು ಶ್ರೇಯಸ್ಕರ. ದ್ವಿಪುಷ್ಕರ–ತ್ರಿಪುಷ್ಕರ ಯೋಗಗಳೆಂದರೆ–

> ಯದಿ ಭದ್ರಾತಿಥೀನಾಂ ಸ್ಯಾದ್ಭಾನುಭೌಮಶನೈಶ್ಚರೈಃ ।
> ತ್ರಿಪಾದೃಕ್ಷೈಶ್ಚ ಸಂಯೋಗೋ ದ್ವಯೋರ್ಯೋಗೇ ದ್ವಿಪುಷ್ಕರಃ ॥ [ಗಾರ್ಗ್ಯ]

ಭದ್ರಾತಿಥಿಗಳು – ಬಿದಿಗೆ, ಸಪ್ತಮಿ, ದ್ವಾದಶಿ.

ವಾರಗಳು – ಭಾನು–ಭೌಮ–ಶನಿವಾರಗಳು.

ತ್ರಿಪಾದನಕ್ಷತ್ರಗಳು – ಕೃತ್ತಿಕಾ, ಉತ್ತರಾ, ಉತ್ತರಾಷಾಢ, ಪುನರ್ವಸು, ವಿಶಾಖಾ, ಪೂರ್ವಾಭಾದ್ರಾ.

Scanned by CamScanner

ಇವುಗಳಲ್ಲಿ ಎರಡು ಸೇರಿದ ದಿನ ಮರಣವಾದರೆ ದ್ವಿಪುಷ್ಕರಯೋಗ. ಮೂರೂ ಸೇರಿದಾಗ ತ್ರಿಪುಷ್ಕರಯೋಗವೆಂದು ತಿಳಿಯಬೇಕು. ಈ ಶಾಂತಿಗಳಲ್ಲಿ ನವಗ್ರಹರನ್ನು ಆವಾಹಿಸಿ ಸಮಿತ್-ತಿಲ-ಆಜ್ಯಗಳಿಂದ ಹೋಮಿಸಬೇಕೆಂದೂ ಪಕ್ಷವಿದೆ. ಬಳಿಕ ಅಗ್ನಿಯನ್ನು 'ಸೂಟೆ'(ತೆಂಗಿನ ಗರಿಗಳ ಕಂತೆ)ಯ ಮೂಲಕ ಪ್ರಜ್ವಲಿಸಿ ಪುರುಷರಾದರೆ ಶವದ ಶಿರೋಭಾಗದಲ್ಲೂ ಸುಮಂಗಲೆಯರಾದರೆ ಪಾದದೇಶದಲ್ಲಿಯೂ ಚಿತೆಗೆ ಅಗ್ನಿಯನ್ನು ಕೊಡಬೇಕು.

ನಗ್ನದೇಹಂ ದಹೇನ್ನೈವ ಕಿಂಚಿದ್ದೇಯಂ ಪರಿತ್ಯಜೇತ್ । [ಯಮಸ್ಮೃತಿ]

ಆಚ್ಛಾದಿತವಸ್ತ್ರದ ಅರ್ಧವನ್ನು ತುಂಡರಿಸಿ ಚಂಡಾಲರಿಗೆ ಕೊಡಬೇಕು. ಉಳಿದ ಅರ್ಧವಸ್ತ್ರದೊಂದಿಗೆ ದಹನವನ್ನು ಮಾಡಬೇಕು. ನಗ್ನದೇಹವನ್ನು ಸುಡಬಾರದು. [ಲೋಕರೂಢಿಪ್ರಕಾರ ಸವಸ್ತ್ರದಹನವೇ ವಾಡಿಕೆಯಾಗಿದೆ. ಶಿರಸ್ಫೋಟವಾಗಲು ಕರ್ತೃವು ನೀರಿನ ಮಡಕೆಯನ್ನು ಎಡ ಹೆಗಲಲ್ಲಿ ಹೊತ್ತುಕೊಂಡು ಚಿತೆಯ ಮೂಲದಲ್ಲಿಟ್ಟಿದ್ದ ಶಿಲಾಖಂಡದಿಂದ ಮಡಕೆಯ ಹಿಂಭಾಗದಲ್ಲಿ ತೂತು ಮಾಡಿ ಶವದ ಪಾದದೇಶದಿಂದ ಆರಂಭಿಸಿ ಧಾರೆಯಾಗಿ ನೀರು ಸುರಿಯುವಂತೆ ಅಪ್ರದಕ್ಷಿಣೆಯಾಗಿ ಸುತ್ತಬೇಕು. ಮಡಕೆಯ ಮೇಲ್ಭಾಗ, ಮಧ್ಯಭಾಗ ಮತ್ತು ಬುಡದಲ್ಲಿ ಕ್ರಮವಾಗಿ ಒಟ್ಟು ಮೂರು ಸಾರಿ ತೂತು ಮಾಡಿ ಹಾಗೂ ಜಲಧಾರೆ ಸುರಿದು, ಪುರುಷನಾದರೆ ಶಿರೋದೇಶದಲ್ಲೂ ಸ್ತ್ರೀಯಾದರೆ ಪಾದದೇಶದಲ್ಲೂ ಶವದ ಪಾರ್ಶ್ವದಲ್ಲಿ ದಕ್ಷಿಣಾಭಿಮುಖವಾಗಿ ನಿಂತು ಮಡಕೆಯನ್ನು ನೆಲಕ್ಕೆ ಎತ್ತಿಹಾಕಬೇಕು. ಒಡೆದ ಮಡಕೆಯ ತುಂಡಿನಲ್ಲಿದ್ದ ನೀರನ್ನು ಎಳ್ಳುಸಹಿತ ಶವದ ಮೇಲೆ ಪ್ರೋಕ್ಷಿಸಬೇಕು. ಇದರಿಂದ ಪ್ರೇತ ತೃಪ್ತಿಗೊಳ್ಳುವುದೆಂದರ್ಥ. ಬಳಿಕ ಶಿಲಾಖಂಡವನ್ನು ಹಿಡಿದುಕೊಂಡು ಕನಿಷ್ಠರನ್ನು ಮುಂದುಮಾಡಿ ಜಲಾಶಯ ತನಕ ಹೋಗಿ ಸಚೇಲಸ್ನಾನ ಮಾಡಿ ಬಂಧುಗಳೂ ಮೃತಜೀವಿಗೆ ದಹನತಾಪಶಮನಕ್ಕಾಗಿ ತಂದಿರುವ ಶಿಲಾಖಂಡವನ್ನು ಮಾಧ್ಯಮವಾಗಿರಿಸಿ ಜಲಾಂಜಲಿಯನ್ನು ಕೊಡಬೇಕು.]

ಸಚೈಲಸ್ತು ತತಃ ಸ್ನಾತ್ವಾ ಶುಚಿಃ ಪ್ರಯತಮಾನಸಃ ।
ಪಾಷಾಣಂ ತತ ಆದಾಯ ವಿಪ್ರೇ ದದ್ಯಾದ್ದಶಾಂಜಲೀನ್ ॥ [ಪ್ರಚೇತಸ್ಮೃತಿ]

ಆದೌ ವಸ್ತ್ರಂ ಚ ಪ್ರಕ್ಷಾಲ್ಯ ತೇನೈವಾಚ್ಛಾದಿತೈಸ್ತತಃ ।
ಕರ್ತವ್ಯಂ ತೈಃ ಸಚೇಲಂ ತು ಸ್ನಾನಂ ಸರ್ವಂ ಮಲಾಪಹಮ್ ॥ [ನಿರ್ಣಯಸಿಂಧು]

Scanned by CamScanner

ಉಟ್ಟ ಬಟ್ಟೆಯನ್ನು ಒದ್ದೆಮಾಡಿ ಅದನ್ನೇ ಪುನಃ ಉಟ್ಟು ಸ್ನಾನಮಾಡುವುದೇ ಪ್ರೇತದಹನಸಂದರ್ಭದಲ್ಲಿ ಸಚೇಲಸ್ನಾನವೆನಿಸುವುದು. ಪ್ರೇತಮಾಧ್ಯಮವೆನಿಸಿದ ಪಾಷಾಣಕ್ಕೆ ಹತ್ತುಸಾರಿ ಅಂಜಲಿಯಿಂದ ಜಲಧಾರೆ ಕೊಡಬೇಕು. ಮೃತಸ್ಥಳಕ್ಕೆ ಹೋದವರೂ ದಹನಕ್ರಿಯೆಗಳಲ್ಲಿ ಭಾಗವಹಿಸಿದವರೂ ಅಲ್ಲೇ ಸ್ನಾನಮಾಡಿ ಉದಕಧಾರೆ ಕೊಟ್ಟರೂ ತಮ್ಮ ತಮ್ಮ ಮನೆಗೆ ಹೋಗಿ ಪುನಃ ಸ್ನಾನ, ಘೃತಧೂಮಸೇವನೆ, ಉಪವೀತಧಾರಣ ಮಾಡಿಕೊಳ್ಳಬೇಕು. ಅದಕ್ಕಿಂತ ಮೊದಲು ಪಾನಾದಿಗಳನ್ನು ಸರ್ವಥಾ ಮಾಡಬಾರದು. [ದಹನಾದಿಗಳು ಅಸ್ತಮಾನಕ್ಕಿಂತ ಮೊದಲೇ ಆಗಿದ್ದರೆ ತತ್‌ಕ್ಷಣ ಪ್ರಥಮದಿನ ಕ್ರಿಯೆಯನ್ನು ಪ್ರಾರಂಭಿಸುವುದು ವಿಹಿತವಾಗಿದೆ. ಮೃತಪೂರ್ವದಲ್ಲಿ ಮನೆಯೊಳಗಿದ್ದ ಅಡುಗೆ ಪದಾರ್ಥಗಳನ್ನು ಹೊರಗೆ ಚೆಲ್ಲಬೇಕು. ಅನಂತರ ತೆಂಗಿನಕಾಯಿಹಾಲು ಬೆರಸಿದ ಗಂಜಿಯನ್ನು ಪ್ರತ್ಯೇಕ ತಯಾರಿಸಿ ಮನೆಯವರು ಉಣ್ಣುವ ವಾಡಿಕೆ ಇದೆ.]

ಪ್ರಥಮದಿನವಿಧಿ –

ಪಾಂಚಭೌತಿಕಶರೀರವನ್ನು ತ್ಯಜಿಸಿ ಸೂಕ್ಷ್ಮರೂಪದಿಂದ ಇರುವ ಜೀವಿಯು 'ಪ್ರೇತ' ಎಂದು ಕರೆಯಲ್ಪಡುತ್ತದೆ. ಆ ಜೀವಿಯ ಹೆಸರಲ್ಲಿ ಹತ್ತುದಿನ ನಡೆಸಲಾಗುವ ನಿತ್ಯವಿಧಿ ಪಿಂಡಪ್ರದಾನಾದಿಗಳಿಂದ ಪಿತೃಪಂಕ್ತಿ ಪ್ರವೇಶವಾಗಲು ಸಂಬಂಧಿಸಿದಂತೆ ಅತಿವಾಹಿಕ ಶರೀರವುಂಟಾಗುವುದು. ನಿರ್ಜೀವಶರೀರವನ್ನು ದಹನಮಾಡಿದರೂ ಶರೀರವಾಸನಾಸಂಬಂಧವಾಗಿ ಅತಿಯಾದ ತಾಪ–ಹಸಿವು–ಬಾಯಾರಿಕೆಗಳು ಸೂಕ್ಷ್ಮಜೀವಿಗೆ ಆಗುವುದು.

ಏಕಸ್ತೋಯಾಂಜಲಿಸ್ತ್ವೇವಂ ಪಾತ್ರಮೇಕಂ ಚ ದೀಯತೇ ।
ದ್ವಿತೀಯೇ ದ್ವೌ ತೃತೀಯೇ ತ್ರೀನ್ ವೃದ್ಧಿಸ್ತತ್ರ ಪ್ರಶಸ್ಯತೇ ॥

ಏವಂ ಸ್ಯುಃ ಪಂಚಪಂಚಾಶತ್ತೋಯಸ್ಯಾಂಜಲಯಃ ಕ್ರಮಾತ್ ।
ತೋಯಪಾತ್ರಾಣಿ ತಾವಂತಿ ಸಂಯುಕ್ತಾನಿ ತಿಲಾದಿಭಿಃ ॥ [ಬ್ರಾಹ್ಮ]

ದಾಹತಾಪ ಉಪಶಮನಕ್ಕೋಸ್ಕರ ಪ್ರತಿನಿತ್ಯ ಅಂಜಲಿಯಿಂದ ನೀರನ್ನು ಧಾರೆಯಾಗಿ ಕೊಡಬೇಕು. ಪ್ರಥಮದಿನ ಒಂದು ಬಾರಿ, ಎರಡನೇ ದಿನ ಎರಡು ಬಾರಿ –ಹೀಗೆ ಆಯಾಯಾ ದಿನಗಳ ಸಂಖ್ಯೆಯಂತೆ ಹೆಚ್ಚು ಮಾಡುತ್ತಾ ಕೊಡಲು ಹತ್ತು ದಿನಗಳಿಗೆ ಐವತ್ತೈದು

Scanned by CamScanner

ಆಗುತ್ತದೆ. ದಿವಸಕ್ಕೆ ಹತ್ತುಹತ್ತರಂತೆ ಅಥವಾ ಪ್ರತಿದಿನ ಎರಡು ಹೆಚ್ಚಿಸಿಯೂ ಕೊಡಬಹುದು. ಪ್ರಥಮದಿನ ಯಾವ ಕ್ರಮದಿಂದ ಅಂಜಲಿಧಾರೆ ಪ್ರಾರಂಭವಾಗಿದೆಯೋ ಅದರಂತೆ ಹತ್ತುದಿನ ತನಕ ಕೊಡಬೇಕೇ ವಿನಾ ದಿನಕ್ಕೊಂದು ಪದ್ಧತಿಯನ್ನು ಅನುಸರಿಸಿ ವ್ಯತ್ಯಾಸ ಮಾಡಬಾರದು. ಈ ತಿಲತೋಯಾಂಜಲಿಯನ್ನು ನಿತ್ಯಕ್ರಿಯಾಸ್ಥಳದಲ್ಲಿ, ವೇದಿಕೆಯಲ್ಲಿ ಸ್ಥಾಪಿಸಲ್ಪಟ್ಟ ಪ್ರೇತಶಿಲೆಯ ಮೇಲೆ ಕೊಡಬೇಕು. ಮೃತನ ಪತ್ನಿಯು ಹಾಗೂ ವಿವಾಹಿತ ಹೆಣ್ಣುಮಕ್ಕಳು ಸೆರಗು ಮೂಲಕ ನೀರನ್ನು ಬಿಡುವ ವಾಡಿಕೆ. ಅದರಂತೆ ಮೃತಸ್ಥಾನದಲ್ಲಿ ಮಣ್ಣಿನ ಘಟವನ್ನು ಇಟ್ಟು ಅದಕ್ಕೂ ಅಂಜಲಿಧಾರೆ ನೀಡಬೇಕು. [ಮೃತಸ್ಥಾನದಲ್ಲಿ ದಶಾಹತನಕ ದೀಪವನ್ನು ಹಚ್ಚಿಡಬೇಕು.]

ಪ್ರಾಙ್ಮುಖೋದಙ್ಮುಖಂ ದೀಪಂ ದೇವಾಗಾರೇ ದ್ವಿಜಾಲಯೇ ।
ಕುರ್ಯಾದ್ಯಾಮ್ಯಮುಖಂ ಪಿತ್ರ್ಯೇ ಅದ್ಭಿಃ ಸಂಕಲ್ಪ್ಯ ಸುಸ್ಥಿರಮ್ ॥ [ಗಾರುಡ]

ದೇವರ ಸನ್ನಿಧಿಯಲ್ಲಿ ಪೂರ್ವಾಭಿಮುಖವಾಗಿಯೂ ಯಾ ಉತ್ತರಾಭಿಮುಖವಾಗಿಯೂ ಪಿತೃಕರ್ಮಗಳಲ್ಲಿ ದಕ್ಷಿಣಾಭಿಮುಖವಾಗಿಯೂ ದೀಪವನ್ನು ಹಚ್ಚಿಡಬೇಕು ಎಂಬುದು ವಿಧಿ. [ದಿವಸಕ್ಕೊಂದು ಪಿಂಡದಂತೆ ಹತ್ತುದಿನಗಳಲ್ಲಿ ಹತ್ತುಪಿಂಡಗಳೂ, ಪ್ರಥಮಾದಿ ವಿಷಮ ದಿನಗಳಲ್ಲಿ ಐದು ಪಿಂಡಗಳೂ ಹಾಗೂ ಅತಿವಾಹಿಕ ಶರೀರವುಂಟಾಗುವ ಸಂದರ್ಭದಲ್ಲಿ ನಗ್ನತೆಯ ಆಚ್ಛಾದನೆಗಾಗಿ ಪ್ರಥಮದಿನ ಒಂದು ಪಿಂಡ – ಹೀಗೆ ಹತ್ತುದಿನಗಳಲ್ಲಿ 'ಮಲಿನಷೋಡಶಮಾಸಿಕಶ್ರಾದ್ಧ'ವೆಂದೂ ಭೂಲೋಕವನ್ನು ಬಿಟ್ಟು ಪ್ರೇತಲೋಕವನ್ನು ಹೋಗಲು 'ಪಾಥೇಯಶ್ರಾದ್ಧ'ವೆಂದೂ ಪ್ರಥಮ ನಿತ್ಯಕ್ರಿಯೆಯಲ್ಲಿ ಮಾತ್ರ ಪ್ರೇತಾಪ್ಯಾಯನಕ್ಕೋಸ್ಕರ ನಡೆಸಲಾಗುತ್ತದೆ. ಪ್ರಥಮದಿನದ ಕ್ರಿಯಾಸಂದರ್ಭದಲ್ಲಿ ವಿಷಮ, ನಗ್ನಪ್ರಚ್ಛಾದನ, ಪಾಥೇಯಶ್ರಾದ್ಧಗಳೆಂದು ಮೂರು ಕ್ರಿಯೆಗಳನ್ನು ಸಮಾನತಂತ್ರದಲ್ಲಿ ಆಚರಿಸುವುದು ರೂಢಿಯಲ್ಲಿದೆ. ಸಮುಚ್ಚಯಾದಿ ಗ್ರಂಥಗಳಲ್ಲಿ ಪ್ರತಿಯೊಂದು ಕ್ರಿಯೆಗಳನ್ನೂ ಸ್ನಾನಪೂರ್ವಕ ಬೇರೆಬೇರೆಯಾಗಿ ನಡೆಸಬೇಕೆಂದು ಉಲ್ಲೇಖವಿದೆ. ಸಮಾನತಂತ್ರಪ್ರಯೋಗವು 227ನೇ ಪುಟದಲ್ಲಿದೆ.]

ಪಿತೃಶಬ್ದಂ ಸ್ವಧಾಂ ಚೈವ ನ ಪ್ರಯುಂಜೀತ ಕರ್ಹಿಚಿತ್ ।
ಅನುಶಬ್ದಂ ತಥಾ ಚೇಹ ಪ್ರಯತ್ನೇನ ವಿವರ್ಜಯೇತ್ ।
ಉಪತಿಷ್ಠತಾಮಯಂ ಪಿಂಡಃ ಪ್ರೇತಾಯೇತಿ ಸಮುಚ್ಚರೇತ್ ॥ [ಆದಿತ್ಯೇ]

Scanned by CamScanner

ನಿತ್ಯವಿಧಿಶ್ರಾದ್ಧದಲ್ಲಿ ಪಾರ್ವಣಶ್ರಾದ್ಧದಂತೆ ಪಿತೃ, ಸ್ವಧಾ ಮುಂತಾದ ಶಬ್ದಗಳನ್ನು ಹೇಳದೆ 'ಪ್ರೇತ' ಎಂಬ ಶಬ್ದವನ್ನು ಬಳಸಿ ಕರ್ಮವನ್ನು ಮಾಡಬೇಕು. 'ಪ್ರೇತಾಯ ಅಯಂ ಪಿಂಡ ಉಪತಿಷ್ಠತಾಮ್ ।' ಎಂದು ಉಚ್ಚರಿಸಬೇಕು.

ತೈಜಸಂ ಮೃಣ್ಮಯಂ ವಾಽಥ ಪಾತ್ರಂ ಸಂಶೋಧ್ಯ ಯತ್ನತಃ ।
ಲೌಕಿಕಾಗ್ನಾವಧಿಶ್ರಿತ್ಯ ಪಚೇದನ್ನಂ ಘೃತಪ್ಲುತಮ್ ॥ [ಮತ್ಸ್ಯೇ]

ತಿಲಸರ್ಪಿರ್ಮಧುಕ್ಷೀರೈಃ ಸಂಸಿಕ್ತಂ ತಪ್ತಮೇವ ಹಿ ।
ದದ್ಯಾತ್ಪ್ರೇತಾಯ ಪಿಂಡಂ ತು ದಕ್ಷಿಣಾಮುಖಸಂಸ್ಥಿತಃ ॥ [ಬ್ರಾಹ್ಮೇ]

ಮಣ್ಣಿನ ಅಥವಾ ತಾಮ್ರದ ಪಾತ್ರೆಯಲ್ಲಿ ಅಕ್ಕಿಯನ್ನು ಒಮ್ಮೆ ತೊಳೆದು ಲೌಕಿಕಾಗ್ನಿಯಲ್ಲಿ ಬೇಯಿಸಿ ಎಳ್ಳು, ತುಪ್ಪ, ಜೇನು, ಹಾಲುಗಳನ್ನು ಮಿಶ್ರಮಾಡಿ ದಕ್ಷಿಣಮುಖವಾಗಿ ಪಿಂಡ ಮಾಡಿಡಬೇಕು. [ದಶಾಹಪರ್ಯಂತದ ಪಿಂಡದಲ್ಲಿ ಉದ್ದು ಉಪಯೋಗಿಸುವ ಸಂಪ್ರದಾಯವಿದೆ.]

ಮಾಷಾಃ ಶ್ರಾದ್ಧೇಷು ವೈ ಗ್ರಾಹ್ಯಾ ವರ್ಜ್ಯಾಶ್ಚೈವಾಗ್ನಿಪಿಂಡಯೋಃ ।
ಬ್ರಾಹ್ಮಣೇಷು ಯಥಾ ಮದ್ಯಂ ತಥಾ ಮಾಷೋಽಗ್ನಿಪಿಂಡಯೋಃ ॥ [ಸ್ಮೃತಿಸಾರ]

ವಾರ್ಷಿಕಶ್ರಾದ್ಧಸಂದರ್ಭದಲ್ಲಿ ಉದ್ದಿನ ಭಕ್ಷ್ಯಗಳು ಆವಶ್ಯಕವೆಂದೂ ಪಿಂಡದ್ರವ್ಯಗಳಲ್ಲಿ ಮತ್ತು ಹೋಮದ್ರವ್ಯದಲ್ಲಿ ಉದ್ದು ನಿಷಿದ್ಧವೆಂದೂ ಪ್ರಮಾಣವಿದೆ. ಆದರೆ ಏಕೋದ್ದಿಷ್ಟಶ್ರಾದ್ಧಪರ್ಯಂತ ಉದ್ದು ಮಿಶ್ರಮಾಡುವ ವಾಡಿಕೆಯಿದೆ. [ಸಪಿಂಡೀಕರಣದಂದು ಹೆಸರುಬೇಳೆ ಮಿಶ್ರಮಾಡುವುದು ರೂಢಿಯಲ್ಲಿದೆ.]

ಗರುಡಪುರಾಣ ಪ್ರಕಾರ–

ದಶಮೇಽಹನಿ ಮಾಂಸೇನ ಪಿಂಡಂ ದದ್ಯಾತ್ ಖಗೇಶ್ವರ ।
ಮಾಷೇಣ ತನ್ನಿಷೇಧಾದ್ವಾ ಕಲೌ ನ ಪಲಪೈತೃಕಮ್ ॥ [ಗರುಡ]

Scanned by CamScanner

ನಿತ್ಯವಿಧಿಶ್ರಾದ್ಧದಲ್ಲಿ ಪಾರ್ವಣಶ್ರಾದ್ಧದಂತೆ ಪಿತೃ, ಸ್ವಧಾ ಮುಂತಾದ ಶಬ್ದಗಳನ್ನು ಹೇಳದೆ 'ಪ್ರೇತ' ಎಂಬ ಶಬ್ದವನ್ನು ಬಳಸಿ ಕರ್ಮವನ್ನು ಮಾಡಬೇಕು. 'ಪ್ರೇತಾಯ ಅಯಂ ಪಿಂಡ ಉಪತಿಷ್ಠತಾಮ್ ।' ಎಂದು ಉಚ್ಚರಿಸಬೇಕು.

ತೈಜಸಂ ಮೃಣ್ಮಯಂ ವಾಽಥ ಪಾತ್ರಂ ಸಂಶೋಧ್ಯ ಯತ್ನತಃ ।
ಲೌಕಿಕಾಗ್ನಾವಧಿಶ್ರಿತ್ಯ ಪಚೇದನ್ನಂ ಘೃತಪ್ಲುತಮ್ ॥ [ಮತ್ಸ್ಯೇ]

ತಿಲಸರ್ಪಿರ್ಮಧುಕ್ಷೀರೈಃ ಸಂಸಿಕ್ತಂ ತಪ್ತಮೇವ ಹಿ ।
ದದ್ಯಾತ್ಪ್ರೇತಾಯ ಪಿಂಡಂ ತು ದಕ್ಷಿಣಾಮುಖಸಂಸ್ಥಿತಃ ॥ [ಬ್ರಾಹ್ಮೇ]

ಮಣ್ಣಿನ ಅಥವಾ ತಾಮ್ರದ ಪಾತ್ರೆಯಲ್ಲಿ ಅಕ್ಕಿಯನ್ನು ಒಮ್ಮೆ ತೊಳೆದು ಲೌಕಿಕಾಗ್ನಿಯಲ್ಲಿ ಬೇಯಿಸಿ ಎಳ್ಳು, ತುಪ್ಪ, ಜೇನು, ಹಾಲುಗಳನ್ನು ಮಿಶ್ರಮಾಡಿ ದಕ್ಷಿಣಮುಖವಾಗಿ ಪಿಂಡ ಮಾಡಿಡಬೇಕು. [ದಶಾಹಪರ್ಯಂತದ ಪಿಂಡದಲ್ಲಿ ಉದ್ದು ಉಪಯೋಗಿಸುವ ಸಂಪ್ರದಾಯವಿದೆ.]

ಮಾಷಾಃ ಶ್ರಾದ್ಧೇಷು ವೈ ಗ್ರಾಹ್ಯಾ ವರ್ಜ್ಯಾಶ್ಚೈವಾಗ್ನಿಪಿಂಡಯೋಃ ।
ಬ್ರಾಹ್ಮಣೇಷು ಯಥಾ ಮದ್ಯಂ ತಥಾ ಮಾಷೋಽಗ್ನಿಪಿಂಡಯೋಃ ॥ [ಸ್ಮೃತಿಸಾರ]

ವಾರ್ಷಿಕಶ್ರಾದ್ಧಸಂದರ್ಭದಲ್ಲಿ ಉದ್ದಿನ ಭಕ್ಷ್ಯಗಳು ಆವಶ್ಯಕವೆಂದೂ ಪಿಂಡದ್ರವ್ಯಗಳಲ್ಲಿ ಮತ್ತು ಹೋಮದ್ರವ್ಯದಲ್ಲಿ ಉದ್ದು ನಿಷಿದ್ಧವೆಂದೂ ಪ್ರಮಾಣವಿದೆ. ಆದರೆ ಏಕೋದ್ದಿಷ್ಟಶ್ರಾದ್ಧಪರ್ಯಂತ ಉದ್ದು ಮಿಶ್ರಮಾಡುವ ವಾಡಿಕೆಯಿದೆ. [ಸಪಿಂಡೀಕರಣದಂದು ಹೆಸರುಬೇಳೆ ಮಿಶ್ರಮಾಡುವುದು ರೂಢಿಯಲ್ಲಿದೆ.]

ಗರುಡಪುರಾಣ ಪ್ರಕಾರ–

ದಶಮೇಽಹನಿ ಮಾಂಸೇನ ಪಿಂಡಂ ದದ್ಯಾತ್ ಖಗೇಶ್ವರ ।
ಮಾಷೇಣ ತನ್ನಿಷೇಧಾದ್ವಾ ಕಲೌ ನ ಪಲಪೈತೃಕಮ್ ॥ [ಗರುಡ]

Scanned by CamScanner

ದಶಾಹಕರ್ಮಣ್ಯಾರಬ್ಧೇ ಸಂಸ್ಕಾರಾದೌ ಕನೀಯಸಾ ।
ಜ್ಯೇಷ್ಠೋ ಯಸ್ತ್ವಂತರಾಗಚ್ಛೇತ್ತೋಽಪ್ಯಶೇಷಂ ಸಮಾಪಯೇತ್ ॥ [ಬ್ರಾಹ್ಮ]

ದಶಾಹ ಮಧ್ಯದಲ್ಲಿ ಮುಖ್ಯಕರ್ತೃವು ಬಂದರೆ ತಿಲತೋಯಾಂಜಲಿ, ನಗ್ನಪ್ರಚ್ಛಾದನಶ್ರಾದ್ಧ, ವಿಷಮದಿನಶ್ರಾದ್ಧಾದಿ ಎಲ್ಲ ಕರ್ಮಗಳನ್ನೂ ಆತನೇ ಮಾಡಬೇಕು. ದಹನಕ್ರಿಯೆ ನಡೆಸಿದಾತನು ದಶಾಹಪರ್ಯಂತ ತೋಯಾಂಜಲಿ ಮಾತ್ರ ಕೊಡಬೇಕು. ಒಂದು ವೇಳೆ ಕಿರಿಯ ಮಗನೇ ಕ್ರಿಯೆ ನಡೆಸುತ್ತಿದ್ದು, ಜ್ಯೇಷ್ಠನು ಬಂದರೆ ಹಿಂದೆ ಹೇಳಿದ ನಿಯಮವನ್ನೇ ಅನುಸರಿಸಬೇಕು. ಕಿರಿಯಮಗನೂ ಪಿಂಡದಾನಾದಿಗಳನ್ನು ನಡೆಸಬೇಕು.

ನಿತ್ಯಕ್ರಿಯಾ ಸಂದರ್ಭದಲ್ಲಿ ಪ್ರೇತಶಿಲೆಯನ್ನೇ ನಿಮಿತ್ತವಾಗಿಟ್ಟು ಒಂದೆಸಳಿನ ಬರ್ಹಿಸ್ಸಿನಲ್ಲಿ ಪಿಂಡಪ್ರದಾನ ಮಾಡಬೇಕೆಂದೂ ವಿಷಮದಿನಗಳ ಮಾಸಿಕಸಂದರ್ಭ ಒಂದೆಸಳಿನ ಕೂರ್ಚವನ್ನು ನಿಮಿತ್ತಸ್ಥಾನದಲ್ಲಿಟ್ಟು ಆರಾಧನೆ ಮಾಡಿ ಅನಂತರ ಪಿಂಡದಾನ ಮಾಡಬೇಕೆಂದೂ ಸಮುಚ್ಚಯಗ್ರಂಥದಲ್ಲಿ, ಗರುಡಪುರಾಣದಲ್ಲಿ, ನಿತ್ಯಶ್ರಾದ್ಧದಲ್ಲೂ ಒಂದೆಸಳಿನ ಕೂರ್ಚಮುಖೇನ ಪ್ರೇತಾರಾಧನೆ ಹಾಗೂ ಬರ್ಹಿಸ್ಸಿನಲ್ಲಿ ಪಿಂಡಪ್ರದಾನ ಪ್ರಕಾರವೆಂದೂ ವಿಕಲ್ಪಗಳಿವೆ.

ಹತ್ತುದಿನಗಳ ಕ್ರಿಯೆಗಳಿಂದ ಆ ಪ್ರೇತವು ಅತಿವಾಹಿಕವೆಂಬ ಸೂಕ್ಷ್ಮವಾದ ಪೂರ್ಣಾಂಗಶರೀರವುಳ್ಳದ್ದಾಗುವುದು.

ಶಿರಸ್ತ್ವಾದ್ಯೇನ ಪಿಂಡೇನ ಪ್ರೇತಸ್ಯ ಕ್ರಿಯತೇ ಸದಾ ।
ದ್ವಿತೀಯೇನ ತು ಕರ್ಣಾಕ್ಷಿನಾಸಿಕಾಶ್ಚ ಸಮಾಸತಃ ॥

ಗಲಾಂಸ ಭುಜವಕ್ಷಾಂಸಿ ತೃತೀಯೇನ ಯಥಾಕ್ರಮಮ್ ।
ಚತುರ್ಥೇನ ತು ಪಿಂಡೇನ ನಾಭಿಲಿಂಗಗುದಾನಿ ಚ ॥

ಜಾನೂ ಜಂಘೇ ತಥಾ ಪಾದೌ ಪಂಚಮೇನ ತು ಸರ್ವದಾ ।
ಸರ್ವಮರ್ಮಾಣಿ ಷಷ್ಠೇನ ಸಪ್ತಮೇನ ತು ನಾಡಯಃ ॥

Scanned by CamScanner

ದಂತಲೋಮಾನ್ಯಷ್ಟಮೇನ ವೀರ್ಯಂ ಚ ನವಮೇನ ಚ ।
ದಶಮೇನ ತು ಪೂರ್ಣತ್ವಂ ತೃಪ್ತತಾ ಕ್ಷುದ್ವಿಪರ್ಯಯಃ ॥ [ಬ್ರಹ್ಮ]

ಮೃತಾತ್ ಪ್ರಥಮದಿನದಿಂದ ಹತ್ತನೆಯ ದಿನದವರೆಗೆ ಕ್ರಿಯೆ ನಡೆಸಲು ಕ್ರಮವಾಗಿ– (೧) ಶಿರಸ್ಸು, (೨) ಕಿವಿ, ಕಣ್ಣು, ಮೂಗು (೩) ಕುತ್ತಿಗೆ, ಹೆಗಲು, ಭುಜ, ಎದೆ (೪) ನಾಭಿ, ಲಿಂಗ, ಗುದ (೫) ಜಾನು, ಜಂಘೆ, ಪಾದಗಳು (೬) ಎಲ್ಲ ಮರ್ಮಸ್ಥಾನಗಳು (೭) ನಾಡಿಗಳು (೮) ದಂತ, ರೋಮಗಳು (೯) ವೀರ್ಯ (೧೦) ಪೂರ್ಣಶರೀರ ಹಾಗೂ ತೃಪ್ತಿ, ಹಸಿವಿನ ನಿವೃತ್ತಿ ಎಂಬ ಕ್ರಮದಿಂದ ಶರೀರನಿಷ್ಪತ್ತಿಯಾಗುವುದು.

ಕರ್ತೃನಿಯಮ –

ಸಂಧ್ಯಾ ದಾನಂ ಜಪೋ ಹೋಮಃ ಸ್ವಾಧ್ಯಾಯಃ ಪಿತೃತರ್ಪಣಮ್ ।
ಬ್ರಹ್ಮಭೋಜ್ಯಂ ವ್ರತಂ ನೈವ ಕರ್ತವ್ಯಂ ಮೃತಸೂತಕೇ ॥ [ಸ್ಮೃತಿಮುಕ್ತಾವಳಿ]

ಆಶೀರ್ವಾದಂ ದೇವಪೂಜಾಂ ಪ್ರತ್ಯುತ್ಥಾನಾಭಿವಂದನಮ್ ।
ಪರ್ಯಂಕೇ ಶಯನಂ ಸ್ಪರ್ಶಂ ನ ಕುರ್ಯಾನ್ಮೃತಸೂತಕೇ ॥ [ಗಾರುಡ]

ಮೃತಸೂತಕದಲ್ಲಿ ಸಂಧ್ಯಾವಂದನ, ದಾನ, ಜಪ, ಹೋಮ, ಪೂಜೆ, ಅಧ್ಯಯನ, ಪಿತೃತರ್ಪಣ, ಮಂಚದಲ್ಲಿ ಶಯನ, ಇನ್ನೊಬ್ಬರ ಸ್ಪರ್ಶ, ಆಶೀರ್ವಾದ ಮಾಡುವುದೂ–ಪಡೆಯುವುದೂ ವರ್ಜ್ಯ. ನಮಸ್ಕಾರಾದಿಗಳನ್ನೂ ಮಾಡಬಾರದು.

ಆಶೌಚ–ಕರ್ತೃ ವಿಶೇಷವಿಚಾರ –

ಸೂತಕಾದ್ದ್ವಿಗುಣಂ ಶಾವಂ ಶಾವಾದ್ದ್ವಿಗುಣಮಾರ್ತವಮ್ ।
ಆರ್ತವಾದ್ದ್ವಿಗುಣಾ ಸೂತಿಸ್ತತೋಽಪಿ ಶವದಾಹತಃ ॥ [ವೃದ್ಧಾತ್ರಿಃ]

Scanned by CamScanner

ಅಶುದ್ಧಿಗಳಲ್ಲಿ ಜನನ-ಮರಣ-ರಜಸ್ವಲಾ-ಪ್ರಸೂತಸ್ತ್ರೀಸ್ಪರ್ಶ-ಶವದಹನ ಹೀಗೆ ಐದು ವಿಭಾಗಗಳಿವೆ. ಇವುಗಳಲ್ಲಿ ಕ್ರಮೇಣ ಒಂದಕ್ಕೊಂದು ಎರಡೆರಡರಷ್ಟು ದೋಷವುಳ್ಳದ್ದಾಗಿದೆ.

ವಿಶೇಷತೋ ದೇವಪೂಜಾಂ ಪ್ರಮೀತಪಿತೃಕೋ ನರಃ ।
ಯಾವದ್ವತ್ಸರಪರ್ಯಂತಂ ಮನಸಾಽಪಿ ನ ಚಾಚರೇತ್ ॥ [ಶ್ರಾದ್ಧಕೌಮುದೀ]

ಮೃತಪಿತೃಕನ ಶರೀರವು ಒಂದು ಸಂವತ್ಸರ ತನಕವೂ ಅಶುಚಿಯಾಗಿರುವುದೆಂದು ಇದೆ. ನಿತ್ಯಕರ್ಮಗಳನ್ನು ಮಾತ್ರ ನಡೆಸುತ್ತಾ ದೀಕ್ಷಾಬದ್ಧನಾಗಿರಬೇಕು. ನೈಮಿತ್ತಿಕ ಹಾಗೂ ಕಾಮ್ಯಕರ್ಮಾದಿಗಳನ್ನೂ ವಾರ್ಷಿಕಹಬ್ಬದ ದಿನಗಳಲ್ಲಿ ವಿಶೇಷ ದೇವಪೂಜಾದಿಗಳನ್ನು ಮಾಡುವಂತಿಲ್ಲ.

ಅನುಗಮ್ಯ ಶವಂ ಬುದ್ಧ್ಯಾ ಸ್ನಾತ್ವಾ ಸ್ಪೃಷ್ಟ್ವಾ ಹುತಾಶನಮ್ ।
ಸರ್ಪಿಃ ಪ್ರಾಶ್ಯ ಪುನಃ ಸ್ನಾತ್ವಾ ಪ್ರಾಣಾಯಾಮೈರ್ವಿಶುಧ್ಯತಿ ॥ [ಕಣ್ವ]

ಶವವನ್ನು ಶ್ಮಶಾನಕ್ಕೆ ಒಯ್ಯುವಾಗ ಜೊತೆಯಲ್ಲಿ ಹೋದರೆ ದಹನವಾದಮೇಲೆ ಸ್ನಾನಮಾಡಿ ಅಗ್ನಿ(ತಾಪ) ಸ್ಪರ್ಶಿಸಿ ತುಪ್ಪವನ್ನು ಸೇವಿಸಿ (ಆಘ್ರಾಣಿಸಿ) ಪುನಃ ಸ್ನಾನಮಾಡಿ ಪ್ರಾಣಾಯಾಮ ಮಾಡಲು ಪೂರ್ಣ ಶುದ್ಧಿಯಾಗುವುದು. [ಶವಸ್ಪರ್ಶ ಮಾಡಿದವರು ಮೇಲೆ ತಿಳಿಸಿದಂತೆ ಮಾಡುವುದಲ್ಲದೆ ಉಪವೀತವನ್ನು ಬದಲಾಯಿಸಬೇಕು. ಶ್ಮಶಾನ ಧೂಮಾಘ್ರಾಣದಿಂದ ಅಂತಃಕರಣವೂ ಮಲಿನಗೊಳ್ಳುವುದು.]

ಅಂತರ್ದಶಾಹೇ ಭುಕ್ತ್ವಾನ್ನಂ ಸೂತಕೇ ಮೃತಕೇಽಪಿ ವಾ ।
ಅಸ್ಯಾಶೌಚಂ ಭವೇತ್ತಾವದ್ಯಾವದನ್ನಂ ವ್ರಜತ್ಯಧಃ ॥ [ಅಂಗಿರಾಃ]

ದಶಾಹಪರ್ಯಂತ ಜನನ ಹಾಗೂ ಮರಣ ಸೂತಕದವರಲ್ಲಿ ಭೋಜನ ಮಾಡಿದರೆ ಉಂಡ ಅನ್ನ ಜೀರ್ಣವಾಗುವ ತನಕ ಪಾತಕಿಯೆನಿಸುವನು.

ದಶರಾತ್ರಂ ಭವಂತ್ಯೇತೇ ಲವಣಕ್ಷಾರವರ್ಜಿತಾಃ ।
ತೈಲತಾಂಬೂಲಹೀನಾಶ್ಚಾಪ್ಯೇಕಭುಕ್ತಾ ಜಿತೇಂದ್ರಿಯಾಃ ॥

Scanned by CamScanner

ಅಧಃಶಯ್ಯಾಸನಾ ದೀನಾ ಮಲಿನಾ ಭೋಗವರ್ಜಿತಾಃ ।
ಅಕ್ಷಾರಲವಣಾನ್ನಾಃ ಸ್ಯುರ್ಲಬ್ಧಕ್ರೀತಾಶನಾಸ್ತಥಾ ॥ [ಬೃಹಸ್ಪತಿಃ]

ಮೃತಜೀವಿಯ ಮನೆಯಲ್ಲಿ ಅಭ್ಯಂಗಾದಿ ಹಬ್ಬ ದಿನಾಚರಣೆಗಳನ್ನು ಆಚರಿಸುವಂತಿಲ್ಲ. ಕರ್ತೃವಂತೂ ಭೋಗವಸ್ತುಗಳನ್ನು ವರ್ಜಿಸಿ ಉಪ್ಪು, ಹುಳಿ, ಖಾರ ಪದಾರ್ಥಗಳನ್ನು ಸೇವಿಸದೆ ಬಡಿಸಿದ ಭೋಜ್ಯವನ್ನು ದಿನಕ್ಕೊಂದು ಬಾರಿ ಮಾತ್ರ ಸ್ವೀಕರಿಸಿ ಹಾಸುಗೆ, ಮಂಚ, ಚಾಪೆಯಲ್ಲಿಯೂ ಮಲಗದೆ ನೆಲದಲ್ಲಿ ಮಲಗುತ್ತಿರಬೇಕು. ಹೆಚ್ಚಿನ ಸಮಯಗಳಲ್ಲಿ ಲೋಕವಾರ್ತಾದಿಗಳಿಗೆ ಮನಸ್ಸು ಕೊಡದೆ ಹಿರಿಯರ ಗುಣಗಾನ ಹಾಗೂ ಅಧ್ಯಯನ, ಪ್ರತಿನಿತ್ಯ ಗೀತಾಪಾರಾಯಣಾದಿಗಳಿಂದ ಕಾಲ ಕಳೆಯಬೇಕು.

ಆಶೌಚಮಧ್ಯೇ ಯತ್ನೇನ ಭೋಜಯೇಚ್ಚ ಸ್ವಗೋತ್ರಜಾನ್ ॥ [ಸ್ಮೃತಿಸಾರ]

ಮರಣವಾಗಿ ಹತ್ತುದಿನಗಳೊಳಗೆ ಸಾಧ್ಯವಾದಷ್ಟು ಕುಟುಂಬಸ್ಥರನ್ನೂ ಗೋತ್ರದವರನ್ನೂ ಭೋಜನ ಮಾಡಿಸಬೇಕು. (ಮೃತಪಟ್ಟ ಮನೆಯಲ್ಲಿ ದೇವರ ಪೂಜಾದಿಗಳೂ ನಿಷೇಧ. ಕಾರಣ ಗೃಹಸೂತಕ, ಜಲಸೂತಕ, ಭಾಂಡಭಾಜನಾದಿದ್ರವ್ಯಗಳೂ ಸೂತಕದೋಷದಿಂದ ಆವೃತವಾಗಿರುವುದು. ಮೃತಸ್ಥಾನದಲ್ಲಿ 'ಪ್ರೇತಘಟ' ಸ್ಥಾಪನೆಯೂ ಇರುವುದರಿಂದ ಘಂಟಾನಾದವೂ ನಿಷೇಧವೆನಿಸಿದೆ. ಒಂದು ವೇಳೆ ಪರಂಪರಾಗತಪದ್ಧತಿಯಂತೆ ಅವಶ್ಯವೆನಿಸಿದರೆ ಶ್ರೋತ್ರಿಯರಿಂದ ನಿರ್ಮಾಲ್ಯತೀರ್ಥ ಸಿದ್ಧಗೊಳಿಸಬಹುದು. ಆದರೆ ಬೇರೆ ಕೂಪದಿಂದ ನೀರು ತಂದಿರಬೇಕು. ಕರ್ತೃಗಳು ಓಡಾಡುವ ಬಾಗಿಲಲ್ಲಿ ಪ್ರವೇಶಿಸದೆ ದೇವರ ಕೋಣೆಗಾಗಿ ಇರುವ ಬೇರೆ ಬಾಗಿಲಲ್ಲಿ ಬಂದಿರಬೇಕು. ಶ್ರೋತ್ರಿಯನಾದರೂ ಈ ಮನೆಯಿಂದ ಹೋಗಿ ಪುನಃ ಸ್ನಾನವನ್ನು ಮಾಡಬೇಕು. ಕರ್ತೃಗಳಂತೂ ನಿತ್ಯಕ್ರಿಯೆಗೆ ಸಂಬಂಧಪಟ್ಟ ವಸ್ತುವನ್ನಲ್ಲದೆ ಅನ್ಯಪದಾರ್ಥಗಳನ್ನು ಸ್ಪರ್ಶಿಸಬಾರದು. ಅವರನ್ನು ಯಾರೂ ಸ್ಪರ್ಶಿಸಬಾರದೆಂದೂ ರೂಢಿ ಇದೆ.)

ಪಿತ್ರೋರುಪರಮೇ ಸ್ತ್ರೀಣಾಮೂಢಾನಾಂ ತು ಕಥಂ ಭವೇತ್ ।
ತ್ರಿರಾತ್ರೇಣೈವ ಶುದ್ಧಿಃ ಸ್ಯಾದಿತ್ಯಾಹ ಭಗವಾನ್ ಯಮಃ ॥ [ನಿರ್ಣಯಸಿಂಧು]

ಮಾತಾಪಿತೃಗಳು ಮರಣಹೊಂದಿದಾಗ ಪತಿಗೃಹದಲ್ಲಿದ್ದ ಮಗಳಿಗೆ ಮೂರು ದಿನ ಮಾತ್ರ ಸೂತಕವಿದೆ. ದೇಶಾಚಾರದಂತೆ ಸಹೋದರರ ಯಾ ಕರ್ತೃವಿನ ಜೊತೆ ಕ್ರಿಯಾಭಾಗದಲ್ಲಿ ಪಾಲುಗೊಂಡಾಗ ದಶಾಹ ಸೂತಕವಿದೆ. (ಆದರೆ ಪತಿಯ ಕುಟುಂಬದಲ್ಲಿ ಸಮಾನಸೂತಕವಿದ್ದರೆ

Scanned by CamScanner

ಪಿತೃಕ್ರಿಯೆಯಲ್ಲಿ ಸಹಭಾಗಿತ್ವವು ಗೌಣವೆನಿಸುವುದಾದರೂ ಕ್ರಿಯೆಗೆ ಸಂಬಂಧಿಸಿದಂತೆ ಕ್ರಿಯಾವಸ್ತ್ರ ಧರಿಸಿ ದೀಕ್ಷಿತಳಾಗಿದ್ದರೆ ಸಪಿಂಡೀಕರಣ ತನಕ ಬಾಧಕವಿಲ್ಲವೆಂದೂ ಒಂದು ವೇಳೆ ಪತಿಗೃಹದ ಸೂತಕ ಇನ್ನೂ ಉಳಿದಿದ್ದರೆ ಅದನ್ನೇ ಅನುಸರಿಸಬೇಕೆಂದೂ ಹಿರಿಯರ ಅಭಿಮತವಾಗಿದೆ.)

ತಸ್ಮಾನ್ನಿಧೇಯಮಾಕಾಶೇ ದಶರಾತ್ರಂ ಪಯೋ ಜಲಮ್ ।
ಸರ್ವತಾಪೋಪಶಾಂತ್ಯರ್ಥಮಧ್ವಶ್ರಮವಿನಾಶನಮ್ ॥ [ನಿರ್ಣಯಸಿಂಧು]

ಮೃತಸ್ಥಾನದ ಪ್ರೇತಘಟ ಸಮೀಪ ಎತ್ತರದಲ್ಲಿ ದೀಪ, ಹಾಲು, ನೀರು ಹತ್ತು ರಾತ್ರೆ ತನಕ ಇಡಬೇಕು. ಇದರಿಂದ ಮೃತಜೀವಿಗೆ ಪ್ರಯಾಣದಲ್ಲಿ ಶ್ರಮ ಪರಿಹಾರವಾಗುವುದು. (ಕ್ರಿಯಾಕರ್ತೃವು ಮಧ್ಯಾಹ್ನ ಮಾತ್ರ ಹವಿಷ್ಯಾನ್ನಭೋಜನ ಮಾಡಬೇಕು; ಲೌಕಿಕ ಆಟಪಾಠಗಳನ್ನು, ಹಾಸ್ಯ, ಅತಿಸಂತೋಷ, ಉಚ್ಚಾಸನ, ಉತ್ತಮ ವಸ್ತ್ರಧಾರಣೆ, ತೈಲಾಭ್ಯಂಗ, ಹಾಸಿಗೆಯಲ್ಲಿ ಶಯನಾದಿಗಳನ್ನು ತ್ಯಜಿಸಬೇಕು. ಕೆಲವೆಡೆ ಪ್ರೇತಘಟ ಇಡುವುದು ಬಳಕೆಯಲ್ಲಿಲ್ಲ.)

ಭುಂಜ್ಯಾತ್ ಭೋಜನಕಾಲೇ ತು ಭಕ್ತಮುಷ್ಟಿಂ ಚ ನಿರ್ವಪೇತ್ ।
ನಾಮಗೋತ್ರೇಣ ಸಂಬೋಧ್ಯ ಧರಿತ್ರ್ಯಾಂ ಪಿತೃಯಜ್ಞವತ್ ॥ [ದೇವಲಸ್ಮೃತಿ]

ಭೋಜನಸಮಯದಲ್ಲಿ ತನ್ನ ಎಲೆಯ ಸಮೀಪದಲ್ಲಿ ತ್ರಿಕೋಣಾಕಾರಮಂಡಲ ಮಾಡಿ ತನಗೆ ಬಡಿಸಿದ ಅನ್ನದಿಂದ ಸ್ವಲ್ಪ ಅನ್ನವನ್ನು ಬೆಲ್ಲ ತುಪ್ಪ ಮಿಶ್ರಮಾಡಿ ಮಂಡಲದಲ್ಲಿ ಪ್ರೇತಕ್ಕೋಸುಗ ಇಡಬೇಕು. ಅದನ್ನು ಒಯ್ದು ಹೊರಗೆ ಎತ್ತರದಲ್ಲಿಡುವ ವಾಡಿಕೆಯೂ ಇದೆ. (ಪ್ರತಿನಿತ್ಯ ಶ್ರೋತ್ರಿಯ ವಿಪ್ರನಿಂದ ಗರುಡಪುರಾಣವನ್ನು ಪಾರಾಯಣ ಮಾಡಿಸಿ ಅದರ ಅರ್ಥವನ್ನು ಬಂಧುಗಳಿಂದ ಕೂಡಿಕೊಂಡು ಶ್ರವಣ ಮಾಡುತ್ತಾ ಕಾಲ ಕಳೆಯಬೇಕು.)

ಅಸ್ಥಿಸಂಚಯನವಿಚಾರ –

ಮೃತಜೀವಿಯ ದೇಹ ದಹನವಾದ ಮೇಲೆ ಅಸ್ಥಿಗಳನ್ನು ಸಂಗ್ರಹಿಸುವುದೇ ಅಸ್ಥಿಸಂಚಯನ. ಮರಣದಿನದಿಂದ ೧–೨–೩–೪–೭–೯ನೇ ದಿನಗಳಲ್ಲಿ ಸಂಗ್ರಹ ಮಾಡಬಹುದು. ಆದರೆ ದ್ವಿಪಾದ–ತ್ರಿಪಾದ ನಕ್ಷತ್ರಗಳೂ ಕರ್ತೃವಿನ ಜನ್ಮಾನುಜನ್ಮ ತ್ರಿಜನ್ಮ ನಕ್ಷತ್ರಗಳೂ, ರವಿ–ಕುಜ–ಶುಕ್ರವಾರಗಳೂ ವರ್ಜ್ಯವೆಂದೂ ಇದೆ. ಆದರೂ ಗೌತಮವಾಕ್ಯದಂತೆ–

Scanned by CamScanner

ಅಸ್ಥಿಸಂಚಯನಂ ಕುರ್ಯಾಚ್ಚತುರ್ಥೇ ದಿವಸೇ ಯದಿ ।
ವಾರನಕ್ಷತ್ರದೋಷಾಣಾಮನವೇಕ್ಷ್ಯಾಹ ಗೌತಮಃ ॥ [ಗೌತಮ]

ಮರಣದಿನದಿಂದ ನಾಲ್ಕನೇ ದಿನವಾಗಿದ್ದರೆ ವಾರನಕ್ಷತ್ರಾದಿಗಳನ್ನು ವಿಮರ್ಶೆ ಮಾಡದೆ ಸಂಚಯನ ಮಾಡಬಹುದೆಂದು ತಿಳಿಯಬೇಕು. (ಸಂಚಯನ ಮಾಡುವಾಗ ಅಂಗುಷ್ಠೋಪಕನಿಷ್ಠಿಕಾ ಬೆರಳಿನ ಸಹಾಯದಿಂದ ಪಾದದೇಶದಿಂದ ಶಿರಃಪರ್ಯಂತವಾಗಿ ಪಾದ, ಎದೆ, ತಲೆ ಭಾಗದಿಂದ ಸಂಗ್ರಹಿಸಿ ನಿಶ್ಶಬ್ದವಾಗಿ ಮಣ್ಣಿನ ಪಾತ್ರೆಯಲ್ಲಿಡಬೇಕು. [ಅಸ್ಥಿಗಳನ್ನು ಮಣ್ಣಿನ ಪಾತ್ರೆಯಲ್ಲಿಡುವಾಗ ಸದ್ದಾಗಬಾರದು.] ಗೆರಸೆಯಿಂದ ಶೋಧಿಸಿ ಉಳಿದ ಅಸ್ಥಿಗಳನ್ನು ಅದೇ ಮಡಕೆಯಲ್ಲಿ ಸಂಗ್ರಹಿಸಿ ಭಸ್ಮವನ್ನು ಮಾತ್ರ ಪೂರ್ಣ ಸಂಗ್ರಹಿಸಿ ಪ್ರವಹಿಸುವ ನೀರಿಗೆ ಹಾಕಬೇಕು. ಅಥವಾ ದಹನಸ್ಥಳದಲ್ಲೇ ಹೊಂಡ ಮಾಡಿ ಸ್ಥಾಪಿಸಬೇಕು. ಮೃತದೇಹವನ್ನು ದಹನಮಾಡಿದ ಗರ್ತವನ್ನು ಮಣ್ಣಿನಿಂದ ತುಂಬಿಸಿ ಮಧ್ಯೇ ವೇದಿಕಾರಾಧನೆ ಮಾಡಬೇಕು. ಅಸ್ಥಿಗಳನ್ನು ಸಂಗ್ರಹಿಸಿದ ಮಡಕೆಯನ್ನು ಹಾಲುಳ್ಳ ಮರದ ಬುಡದಲ್ಲಿ ಮಳೆಗಾಲದಲ್ಲೂ ನೀರು ನಿಲ್ಲದ ಸ್ಥಳದಲ್ಲಿ ಭೂಗತಗೊಳಿಸಿ ಆ ಅಸ್ಥಿಪಾತ್ರವನ್ನು ಅಸ್ಥಿಸಹಿತ ಶುದ್ಧ ಮಾಡಿ ಗಂಗಾದಿತೀರ್ಥಯಾತ್ರಾಸಂದರ್ಭ ವಿಸರ್ಜಿಸುವುದು ಬಹುಪಕ್ಷದಂತೆ ವಾಡಿಕೆ ಇದೆ.)

ದಶಾಹಾಭ್ಯಂತರೇ ಯಸ್ಯ ಗಂಗಾತೋಯೇಽಸ್ಥಿ ಮಜ್ಜತಿ ।
ಗಂಗಾಯಾಂ ಮರಣೇ ಯಾದೃಕ್ ತಾದೃಕ್ ಫಲಮವಾಪ್ನುಯಾತ್ ॥ [ವೃದ್ಧಮನು]

ಹತ್ತು ದಿವಸದೊಳಗೆ ಯಾವಾತನ ಅಸ್ಥಿಗಳು ಗಂಗೆಯಲ್ಲಿ ಮುಳುಗುವುದೋ ಅವನು ಗಂಗಾತೀರದಲ್ಲಿ ಮರಣಹೊಂದಿದಷ್ಟು ವಿಶೇಷ ಫಲವನ್ನು ಹೇಳಿರುತ್ತಾರೆ. ಆ ಸಮಯದಲ್ಲಿ ಅಸಾಧ್ಯವೆಂದಾಗ ಮುಂದೆ ಅನುಕೂಲವಾದಾಗ ವಿಸರ್ಜಿಸಬಹುದು.

ಅಸ್ತಂ ಗತೇ ಗುರೌ ಶುಕ್ರೇ ತಥಾ ಮಾಸೇ ಮಲಿಮ್ಲುಚೇ ।
ಗಂಗಾಯಾಮಸ್ಥಿನಿಕ್ಷೇಪಂ ನ ಕುರ್ಯಾದಿತಿ ಗೌತಮಃ ॥ [ಗೌತಮ]

ಹತ್ತು ದಿವಸಗಳೊಳಗೆ ಅಸ್ಥಿಯನ್ನು ಗಂಗೆಯಲ್ಲಿ ವಿಸರ್ಜಿಸಿದರೆ ಯಾವ ದೋಷವೂ ಇಲ್ಲ. ಅನಂತರವಾದರೆ ಮಲಮಾಸ ಹಾಗೂ ಗುರುಶುಕ್ರಾಸ್ತದಿನಗಳನ್ನು ಹೊರತುಪಡಿಸಿ ವಿಸರ್ಜಿಸಬೇಕು.

Scanned by CamScanner

ದಶಾಹವಿಚಾರ –

(ಧರ್ಮೋದಕ, ಧರ್ಮ=ಹತ್ತು+ಉದಕ = ಜಲ, ಹತ್ತನೇ ದಿನದ ಜಲಾಂಜಲಿ)

ತಾಯಿಯ ಗರ್ಭದಲ್ಲಿ ನವಮಾಸ ತನಕ ಯಾವ ಶಬ್ದವೂ ಇಲ್ಲದೆ ಬೆಳೆಯುವ ಶಿಶುವು ಭೂಸ್ಪರ್ಶವಾಗಲು ಅಳುವಂತೆ ಮೃತಜೀವಿಯು ದಶಾಹವಿಧಿಯಿಂದ ಉಂಟಾದ ಸೂಕ್ಷ್ಮದೇಹ ಪಡೆದು ಆಪ್ಯಾಯನಕ್ಕಾಗಿ ಹಾತೊರೆಯುತ್ತಿರಲು ಬಂಧುಗಳೆಲ್ಲಾ ಸೇರಿ ತಮ್ಮ ಸಂಬಂಧವನ್ನು ಹೇಳಿ ಅಂಜಲಿಯಿಂದ ಉದಕವನ್ನು ಧಾರೆಯಾಗಿ ನೀಡಬೇಕು. ಇದರಿಂದ ಆ ಜೀವಿಯು ತೃಪ್ತಿಗೊಳ್ಳುವುದು. ಇದನ್ನೇ 'ಧರ್ಮೋದಕ'ವೆನ್ನುವರು. ಪ್ರಥಮ ದಿನದಿಂದ ಮಾಧ್ಯಮವಾಗಿರಿಸಿದ ಪ್ರೇತಶಿಲೆಗಳನ್ನು ಜಲದಲ್ಲಿ ವಿಸರ್ಜಿಸಬೇಕು.

ಸ್ಥಾಪಿತಂ ಪ್ರೇತಪಾಷಾಣಮಾದಶಾಹಾನ್ನ ಚಾಲಯೇತ್ ।
ದೇಶಕ್ಷೋಭೇ ಮಹಾಪತ್ತೌ ಸ್ಥಾಪಿತಂ ಚೋದ್ಧರೇದ್ಯದಿ ।
ಪ್ರಾಣಾಯಾಮತ್ರಯಂ ಕೃತ್ವಾ ಸಂಸ್ಪೃಶ್ಯ ವ್ಯಾಹೃತೀರ್ಜಪೇತ್ ॥

ಯದಿ ನಷ್ಟಂ ಹೃತಂ ವಾಪಿ ಪಾಷಾಣಂ ಪ್ರಥಮೇಽಹ್ನಿಕಮ್ ।
ಪಾಷಾಣಮನ್ಯಮಾದಾಯ ಪೂರ್ವದತ್ತಾಂಬು ನಿಕ್ಷಿಪೇತ್ ॥ [ವೈದ್ಯನಾಥೀಯ]

ಪ್ರೇತಮಾಧ್ಯಮವಾಗಿಟ್ಟಿದ್ದ ಶಿಲೆಯು ಯಾವ ಕಾರಣದಿಂದಲೂ ವ್ಯತ್ಯಾಸವಾಗಕೂಡದು. ಒಂದು ವೇಳೆ ಮಹಾ ಆಪತ್ತು ಯಾ ದೇಶಕ್ಷೋಭಾದಿಗಳಿಂದ ಪಾಷಾಣ ಸ್ಥಾಪಿಸಿದ ಜಾಗದಿಂದ ಚಲನೆಯಾದರೆ (ಸ್ಥಾನಾಂತರಗೊಂಡರೆ) ಮೂರು ಬಾರಿ ಪ್ರಾಣಾಯಾಮ ಮಾಡಿ, ಆ ಶಿಲೆಯನ್ನು ಮುಟ್ಟಿಕೊಂಡು ವ್ಯಾಹೃತಿಯನ್ನು ಅಭಿಮಂತ್ರಿಸಬೇಕು. ಒಂದು ವೇಳೆ ಕಾಣೆಯಾದರೆ ಅಥವಾ ಕಳ್ಳತನವಾದರೆ ಬೇರೆ ಶಿಲೆ ಸಂಗ್ರಹಿಸಿ ಕೃಚ್ಛ್ರಾಚರಣೆ ನಡೆಸಿ ಪ್ರಾರಂಭದಿಂದ ಕೊಟ್ಟ ಸಂಖ್ಯಾಪ್ರಕಾರ ತಿಲತರ್ಪಣವನ್ನು ಕೊಡಬೇಕು.

ಆದೌ ಮಧ್ಯೇ ತಥಾಂತೇ ಯ ಉದಕಾದಿ ಸಮಾಪಯೇತ್ ।
ಸ ಏವ ದಶಮೇ ಕುರ್ಯಾತ್ಪಾಷಾಣೋತ್ಥಾಪನಾದಿಕಮ್ ॥ [ಶಂಖಸ್ಮೃತಿ]

ಪ್ರೇತಶಿಲೆಯನ್ನು ಯಾವುದೇ ಕಾರಣದಿಂದ ಹತ್ತು ದಿನಗಳ ಬಳಿಕ ಇಡುವಂತಿಲ್ಲ. ಇಟ್ಟರೆ ಕುಲನಾಶ ಎಂಬ ದುಷ್ಫಲವಿದೆ. ಇದೇ ಸಂದರ್ಭದಲ್ಲಿ ಮೃತಸ್ಥಾನದಲ್ಲಿಟ್ಟ ಪ್ರೇತಘಟ ಹಾಗೂ ಕ್ಷೀರನೀರಪ್ರದಾನಪಾತ್ರೆಗಳನ್ನು ವಿಸರ್ಜಿಸಬೇಕೆಂದೂ ಸ್ಮೃತಿಕಾರರು ತಿಳಿಸಿರುತ್ತಾರೆ. [ಹತ್ತನೇ ದಿನ ಏಕಾದಶೀತಿಥಿಯಾದರೆ ಒಂಬತ್ತನೇ ದಿನ ದಶಾಹವಿಧಿಯನ್ನು ಪೂರೈಸಬೇಕು.] ದರ್ಶಾದಿಗಳ ನಿಮಿತ್ತ ಉದಕದಾನಾದಿಗಳನ್ನು ಮೊದಲು ಯಾರು ಮುಗಿಸುತ್ತಾನೋ ಅವನೇ ಹತ್ತನೆಯ ದಿವಸದಲ್ಲಿಯೇ ಶಿಲಾವಿಸರ್ಜನೆಯನ್ನು ಮಾಡಬೇಕು.

[ಜ್ಯೇಷ್ಠಪುತ್ರನಾಗಲೀ ಕನಿಷ್ಠನೇ ಆಗಲಿ ಸಹೋದರರು ಯಾರೇ ಆಗಲಿ ಮಾತಾಪಿತೃಗಳ ಕ್ರಿಯೆ ಮಾಡುತ್ತಿರಲು ಪರವೂರಲ್ಲಿದ್ದ ಪುತ್ರನು ಅಥವಾ ಪ್ರಾರಂಭದಿಂದ ಕ್ರಿಯೆಯಲ್ಲಿ ಅನಾರೋಗ್ಯದಿಂದ ಭಾಗವಹಿಸಲು ಅಶಕ್ತನಾದವನು ಮಧ್ಯೇ ಯಾವುದೇ ದಿನದಂದು ಸೇರಿದರೆ ನಿಯಮದಂತೆ ಪ್ರಥಮ ದಿನದಿಂದ ಮಾಡಬೇಕಾಗಿದ್ದ ಸ್ನಾನ–ತಿಲಾಂಜಲಿ–ವಾಸೋದಕ–ತಿಲೋದಕ–ಪಿಂಡಪ್ರದಾನಾದಿಗಳನ್ನು ದಿನಸಂಖ್ಯೆಯಂತೆ ಸಂಕಲ್ಪ ಹಾಗೂ ಕೃಷ್ಣಾರ್ಪಣಪೂರ್ವಕ ಪ್ರತ್ಯೇಕ ಪ್ರತ್ಯೇಕವಾಗಿ ಕೊಟ್ಟು ಬಳಿಕ ಕರ್ತೃಗಳ ಜೊತೆಗೆ ಸೇರಿಕೊಳ್ಳುವುದು ವಿಹಿತವಾಗಿದೆ.]

ಪಿತುರ್ದಶಾಹಮಧ್ಯೇ ತು ಸಂಪ್ರಾಪ್ತೇ ಹರಿವಾಸರೇ ।
ಪಿಂಡದಾನಂ ನ ಕರ್ತವ್ಯಂ ನ ತಿಲೋದಕಸತ್ಕ್ರಿಯಾ ॥ [ಸ್ಮೃತಿಮುಕ್ತಾವಲಿ]

ಒಂಬತ್ತನೇ ದಿನ ಏಕಾದಶಿ ಬಂದರೆ ಆ ದಿನದ ವಿಧಿಯನ್ನು ಹತ್ತರಂದು ನಡೆಸಬೇಕು. ಹತ್ತನೇ ದಿನ ಏಕಾದಶಿಯಾದರೆ ಒಂಬತ್ತರಂದೇ ಎಲ್ಲ ಕ್ರಿಯೆಗಳನ್ನು ಮುಗಿಸಬೇಕು. ಹನ್ನೊಂದನೇ ದಿನ ಏಕಾದಶಿಯಾದರೆ ಹನ್ನೆರಡರಂದು ಏಕೋದ್ದಿಷ್ಟ ಹಾಗೂ ಸಪಿಂಡೀಕರಣವನ್ನು ಮಾಡಬೇಕು. ಹನ್ನೆರಡರಂದು ಏಕಾದಶಿಯಾದರೆ ದ್ವಾದಶಿಯಂದು ಸಪಿಂಡೀಕರಣವನ್ನೂ ತ್ರಯೋದಶಿಯಂದು ಶ್ರವಣದೇವತಾರಾಧನೆಯನ್ನೂ ಮಾಡಬೇಕು. ಇದು ಸಾಮಾನ್ಯ ಪಕ್ಷ.

(ಮಾತಾಪಿತೃಗಳ ದಶಾಹಮಧ್ಯೇ ಗ್ರಹಣ ಸಂಭವಿಸಿದರೆ ಗ್ರಹಣಕಾಲದಲ್ಲಿ ಪ್ರೇತಶಿಲೆಯನ್ನು ಜಲಾಧಿವಾಸ ಮಾಡಿರಬೇಕು.)

ಆಶೌಚಾಂತ್ಯದಿನೇ ಕ್ಷೌರಂ ಜನನ್ಯಾಂ ಚ ಗುರೌ ಮೃತೇ ॥ [ವ್ಯಾಸಸ್ಮೃತಿ]

ಹತ್ತನೇ ದಿನ ಕ್ರಿಯಾಭಾಗಗಳನ್ನು ಮುಗಿಸಿ (ಕನಿಷ್ಠಪೂರ್ವಕ) ಕರ್ತೃವು ವಪನ ಮಾಡಿಸಿಕೊಳ್ಳಬೇಕು.

Scanned by CamScanner

ಹನ್ನೊಂದನೆಯ ದಿನವಿಚಾರ –

ಹನ್ನೊಂದನೆಯ ದಿನ ಮನೆ, ಪಾತ್ರೆ, ವಸ್ತುಗಳನ್ನೆಲ್ಲಾ ಶುದ್ಧಿಮಾಡಿ ಪಂಚಗವ್ಯಪ್ರಾಶನ, ಪುಣ್ಯಾಹವಾಚನ, ಉಪವೀತಧಾರಣೆ ಮಾಡಿಸಿಕೊಂಡು ಮಾನಸಿಕಸಂಧ್ಯಾವಂದನೆ ಮಾಡುವುದು. ಪುಣ್ಯಾಹವಾಚನ ವಿಷಯದಲ್ಲಿ ವಿಶೇಷವಾಗಿ ಗಮನಹರಿಸಬೇಕು.

ಪುಣ್ಯಾಹವಾಚನೇ ಕುರ್ಯಾತ್ ಅರ್ಚನಂ ಕಲಶದ್ವಯೇ ।
ಏಕೋದ್ದಿಷ್ಟೇ ಸಪಿಂಡಾದೌ ಕುಂಭಮೇಕಂ ಪ್ರಕಲ್ಪಯೇತ್ ॥ [ಗೃಹ್ಯಪರಿಶಿಷ್ಟ ಆಚಾರತಂತ್ರ]

ಯಜಮಾನದೇಹಗೇಹಾದಿ ಶುದ್ಧಿಗಾಗಿ ಪುಣ್ಯಾಹವಾಚನ ನಡೆಸಬೇಕು. ಪುನಃ ಹನ್ನೆರಡರಂದು ಸಪಿಂಡೀಕರಣಕ್ಕಿಂತ ಮೊದಲೂ ಪುಣ್ಯಾಹವಾಗಬೇಕು. ಈ ಸಂದರ್ಭದಲ್ಲಿ ಒಂದೇ ಕಲಶವನ್ನು ಆರಾಧಿಸಬೇಕು. ಇತರ ಪುಣ್ಯಾಹವಾಚನದಲ್ಲಿ ಎರಡು ಕಲಶಗಳನ್ನು ಪೂಜಿಸಬೇಕು. ಪಂಚಗವ್ಯ ಬೇರೆಯಾಗಿ ನಡೆಸಬೇಕು.

ಯಮುದ್ದಿಶ್ಯೋತ್ಸೃಜೇನ್ನೀಲಂ ಸ ಲಭೇತ ಪರಾಂ ಗತಿಮ್ ।
ವೃಷೋತ್ಸೃಷ್ಟಃ ಪುನಾತ್ಯೇವ ದಶಾತೀತಾನ್ ದಶಾಪರಾನ್ ॥ [ನಿರ್ಣಯಸಿಂಧು]

ಮೃತಜೀವಿಯ ಪ್ರೇತತ್ವ ನಿವೃತ್ತಿಗಾಗಿ ನೀಲವರ್ಣದ ವೃಷಭ ಹಾಗೂ ಹೆಣ್ಣು ಕರುವನ್ನು ಪೂಜೆ ಮಾಡಿ ರುದ್ರಪ್ರೀತಿಗಾಗಿ ಉತ್ಸರ್ಜನೆ ಮಾಡಬೇಕು. ಇದರಿಂದ ಮೃತಜೀವಿಯು ಸದ್ಗತಿ ಹೊಂದುವುದು ಮಾತ್ರವಲ್ಲದೆ ಯಜಮಾನನ ಹಿಂದುಮುಂದಿನ ಹತ್ತು ಪಿತೃಗಳಿಗೂ ಉತ್ತಮಲೋಕ ಪ್ರಾಪ್ತಿಯಾಗುವುದು.

ವೃಷೋತ್ಸರ್ಜನವೇಲಾಯಾಂ ವೃಷಾಭಾವೇ ಕಥಂಚನ ।
ಮೃದ್ಭಿಃ ಪಿಷ್ಟೈಃ ಕುಶೈ ದರ್ಭೈರ್ವಾ ವೃಷಂ ಕೃತ್ವಾ ವಿಮೋಚಯೇತ್ ।
ನ ಶಕ್ಯತೇ ವೃಷೋತ್ಸರ್ಗೋ ಹೋಮಂ ವಾ ತತ್ರ ಕಾರಯೇತ್ ॥ [ನಿರ್ಣಯಸಿಂಧು]

ಪ್ರತ್ಯಕ್ಷ ವೃಷಭವನ್ನು ಉತ್ಸರ್ಜನ ಮಾಡಲು ಅಶಕ್ಯವಾದಲ್ಲಿ ಮೃತ್ತಿಕೆಯಿಂದಲೋ, ಹಿಟ್ಟಿನಿಂದಲೋ, ದರ್ಭೆಯಿಂದಲೋ ವೃಷಭಮೂರ್ತಿ

Scanned by CamScanner

ಮಾಡಿ ಅಭಿಮಂತ್ರಿಸಿ ವಿಸರ್ಜಿಸಬೇಕು. ಕೊನೇ ಪಕ್ಷ ಹೋಮವನ್ನಾದರೂ ಮಾಡಿದರೂ ಸಾಕು. (ಅಭಿಮಂತ್ರಿಸಿದ ವೃಷಭ ವತ್ಸತರೀಯನ್ನು [ಹೆಣ್ಣುಕರುವನ್ನು] ಬೆಂಕಿಯಿಂದ ಲಾಂಛನ ಮಾಡುವುದಿದೆ. ಚರ್ಮ-ರೋಮ-ರಕ್ತ-ಮಾಂಸಾದಿಗಳನ್ನು ಸುಟ್ಟ ಪ್ರಯುಕ್ತ ದೋಷಮಾರ್ಜನೆಗಾಗಿ ಎಳ್ಳು, ನೀರು, ಸುವರ್ಣ, ಗೋ, ವಸ್ತ್ರವನ್ನೂ ದಾನ ಮಾಡಬೇಕು.)

ಪತಿಪುತ್ರವತೀ ನಾರೀ ಮ್ರಿಯತೇ ಚೋಭಯಾಗ್ರತಃ ।
ವೃಷೋತ್ಸರ್ಗಂ ನ ಕುರ್ವೀತ ಧೇನುಂ ದದ್ಯಾದ್ದ್ವಿಜನ್ಮನಃ ॥

[ಸಂಗ್ರಹ]

ಗಂಡನು ಬದುಕಿದ್ದೂ ಮಕ್ಕಳಿರುವ ಮಹಿಳೆ ಮೃತಳಾದರೆ ವೃಷೋತ್ಸರ್ಗ ಬದಲು ಗೋದಾನ ಕೊಡಬೇಕೆಂದು ಸಾಮಾನ್ಯವಚನವಿದೆ.

ಪತಿಪುತ್ರವತೀ ನಾರೀ ಮೃತಾ ಚೇಜ್ಜೀವಭರ್ತೃಕಾ ।
ತಸ್ಯಾ ಅಪಿ ವೃಷೋತ್ಸರ್ಗಃ ಕರ್ತವ್ಯಸ್ತು ಯಥಾವಿಧಿ ।
ಪಾತಿವ್ರತ್ಯೇನ ತಲ್ಲೋಕಂ ವೃಷಹೀನಾ ನ ಗಚ್ಛತಿ ॥

[ಸ್ಮೃತ್ಯಂತರ]

ಗಂಡನು ಬದುಕಿರುವಾಗಲೇ ಹೆಂಡತಿಯು ಮೃತಳಾದರೂ ವೃಷೋತ್ಸರ್ಗವನ್ನು ಮಾಡಲೇಬೇಕು. ವೃಷೋತ್ಸರ್ಗ ಮಾಡದಿದ್ದರೆ ಉತ್ತಮಲೋಕವನ್ನು ಪಡೆಯುವುದಿಲ್ಲ.

ಆದ್ಯಂ ಶ್ರಾದ್ಧಮಶುದ್ಧೋಽಪಿ ಕುರ್ಯಾದೇಕಾದಶೇಽಹನಿ ।
ಕರ್ತುಸ್ತಾತ್ಕಾಲಿಕೀ ಶುದ್ಧಿರಶುದ್ಧಃ ಪುನರೇವ ಸಃ ॥

[ಮನು]

ಹನ್ನೊಂದನೇ ದಿವಸ ಮಾಡುವ ಮೊದಲನೇ ಮಾಸಿಕಶ್ರಾದ್ಧವೇ ಏಕೋದ್ದಿಷ್ಟಶ್ರಾದ್ಧ. ಬ್ರಾಹ್ಮಣರು ಆ ದಿನ ದುರ್ಲಭರಾದುದರಿಂದ ಅಗ್ನಿಯಲ್ಲಿ ಆ 'ಏಕೋದ್ದಿಷ್ಟ' ಶ್ರಾದ್ಧವನ್ನು ಮಾಡಬೇಕು. ಏಕೋದ್ದಿಷ್ಟಶ್ರಾದ್ಧದಲ್ಲಿ ಪಿಂಡವು ಬಿಲ್ವಫಲಪ್ರಮಾಣವಾಗಿರಬೇಕು. ಕರ್ತೃವು ಆ ಶ್ರಾದ್ಧಪ್ರಯುಕ್ತ ಶುದ್ಧನೆನಿಸಿ ಪುನಃ ಅಶುದ್ಧನೇ ಆಗುವನು ಎಂಬುದಾಗಿ ಆಚಾರಸಂಗ್ರಹ ನಿರ್ಣಯವಿದೆ. ಹತ್ತು ದಿನ ಕಳೆದರೆ ಕುಟುಂಬದಲ್ಲಿ ಆಶೌಚನಿವೃತ್ತಿಯೆಂದೂ ಏಕೋದ್ದಿಷ್ಟಶ್ರಾದ್ಧದ ಅನಂತರ ಶುದ್ಧಿಯೆಂದೂ ಕೆಲವರ ಅಭಿಮತವಾಗಿದೆ. ಪಂಚಕ – ತ್ರಿಪಾದನಕ್ಷತ್ರದೋಷಗಳಿದ್ದರೆ

Scanned by CamScanner

ಸೂಕ್ತ ಶಾಂತಿಯನ್ನು ನಡೆಸಬೇಕು. ವಸುಗಣ–ರುದ್ರಗಣ ಪ್ರೀತಿಗಾಗಿ ಶ್ರಾದ್ಧನಿಮಿತ್ತ ಆಮಾನ್ನ ಕೊಡುವುದು ವಾಡಿಕೆಯಿದೆ. ಗರುಡಪುರಾಣ ಪ್ರಕಾರ ವಿಷ್ಣ್ವಾದಿ ಹದಿನಾರು ದೇವತೆಗಳ ಪ್ರೀತಿಗಾಗಿ ಷೋಡಶಮಾಸಿಕಶ್ರಾದ್ಧಗಳನ್ನು ಮಾಡಬೇಕೆಂದಿದೆ. ಇದು ಸದ್ಯ ನಮ್ಮಲ್ಲಿ ವಾಡಿಕೆಯಾಗಿ ಬೆಳೆದುಬಂದಿಲ್ಲ. ಇದನ್ನೇ ಮಧ್ಯಮ ಷೋಡಶಮಾಸಿಕಶ್ರಾದ್ಧವೆಂದೂ ಸಪಿಂಡೀಕರಣವಾದ ಬಳಿಕ ಪುನಃ ಮೃತನ ಉದ್ದಿಶ್ಯ ಮಾಡುವ ಷೋಡಶಮಾಸಿಕಶ್ರಾದ್ಧವು ಉತ್ತಮಶ್ರಾದ್ಧವೆಂದೂ ತಿಳಿದುಬರುತ್ತದೆ.

ಷೋಡಶಾದೀನಿ ಸರ್ವಾಣಿ ಕುರ್ಯಾದೇಕಾದಶೇಽಹನಿ ।
ಸಪಿಂಡೀಕರಣಂ ಚಾಪಿ ಕುರ್ಯಾದ್ವಾ ದ್ವಾದಶೇಽಹನಿ ॥ [ನಿರ್ಣಯಸಿಂಧು]

ಹನ್ನೊಂದನೇ ದಿವಸ ಷೋಡಶಮಾಸಿಕಶ್ರಾದ್ಧಗಳನ್ನೂ ಹನ್ನೆರಡನೇ ದಿನ ಸಪಿಂಡೀಕರಣಶ್ರಾದ್ಧವನ್ನೂ ಮಾಡಬೇಕು.

ಆ ದಿನ ಏಕೋದ್ದಿಷ್ಟಶ್ರಾದ್ಧವಾದ ಬಳಿಕ ವಸುಗಣ ರುದ್ರಗಣಪ್ರೀತಿಗಾಗಿ ಶ್ರಾದ್ಧ ಮಾಡಬೇಕೆಂದಿದ್ದರೂ ತತ್ಪ್ರತಿನಿಧಿಯಾಗಿ ಆಮಾನ್ನದಾನವನ್ನೂ ಕೊಡುವುದು ರೂಢಿಯಲ್ಲಿ ಇದೆ. ಬಳಿಕ ಮರುದಿನ ಮಾಡುವ ಸಪಿಂಡೀಕರಣ ನಿಮಿತ್ತ ಏಕೋದ್ದಿಷ್ಟವಿಧಿಯಂತೆ ಹದಿನಾರು ಪಿಂಡಗಳನ್ನಿಟ್ಟು ಷೋಡಶಮಾಸಿಕಶ್ರಾದ್ಧ ಮಾಡಿ ತತ್ಪ್ರಯುಕ್ತ ೧೬, ೮, ೪, ೨ ಆದರೂ ಆಮಾನ್ನದಾನ ಕೊಡಬೇಕು. ಹಾಗೂ ಅಂಧತ್ವ, ಮೂಕತ್ವ, ಬಧಿರತ್ವ, ಪೈಶಾಚತ್ವನಿವೃತ್ತಿಗಾಗಿ ದೀಪ–ಗೀತಾಪುಸ್ತಕ–ಘಂಟಾಮಣಿ, ತಿಲ ಕ್ರಮವಾಗಿ ಈ ನಾಲ್ಕು ದಾನಗಳನ್ನು ಕೊಡುವುದಿದೆ. ಹಾಗೂ–

ಏಕಾದಶಾಹೇ ಶಯ್ಯಾಯಾ ದಾನೇ ಏಷ ವಿಧಿಃ ಸ್ಮೃತಃ ।
ಯದ್ಯದಿಷ್ಟಂ ಚ ತಸ್ಯಾಸೀತ್ತತ್ಸರ್ವಂ ಪರಿಕಲ್ಪಯೇತ್ ।
ತೇನೋಪಭುಕ್ತಂ ಯತ್ಕಿಂಚಿದ್ವಸ್ತ್ರವಾಹನಭಾಜನಮ್ ॥ [ನಿರ್ಣಯಸಿಂಧು]

ಹನ್ನೊಂದನೇ ದಿನ ವಿಶೇಷ ದಾನಗಳನ್ನು ಕೊಡಬೇಕು. ಮೃತನಿಗೆ ಇಷ್ಟವಾದ ವಸ್ತುಗಳನ್ನೂ ಶಯ್ಯಾದಾನ, ದಶದಾನ, ಪ್ರಾರಂಭದಿನ ಸಂಕಲ್ಪಿಸಿದಂತೆ ಗೋದಾನ, ಆಮಾನ್ನಾದಿ ಅಷ್ಟದಾನಗಳನ್ನೂ ಅನ್ನಾದಿ ಉಪದಾನಾದಿಗಳನ್ನೂ ಕೊಡಬೇಕೆಂದಿದೆ. (ಆದರೆ ಅಂದು ಬ್ರಾಹ್ಮಣರ ಅಭಾವಪ್ರಯುಕ್ತ ಮರುದಿನ ಕೊಡುವುದು ರೂಢಿಯಾಗಿದೆ.)

Scanned by CamScanner

ಸಪಿಂಡೀಕರಣವಿಚಾರ –

(ಪ್ರೇತಜೀವಿಯನ್ನು ವಸುರುದ್ರಾದಿತ್ಯರೆಂಬ ಪಿತೃದೇವತಾಗಣದ ಅಧೀನರಾಗಿರುವ ತತ್ಪಿತೃಪಿತಾಮಹಪ್ರಪಿತಾಮಹರುಗಳ ಪಂಕ್ತಿಯಲ್ಲಿ ಪ್ರವೇಶಗೊಳಿಸಿ ಪಿತೃತ್ವವನ್ನುಂಟುಮಾಡುವ ವಿಧಾನವೇ ಸಪಿಂಡೀಕರಣ.)

ಆನಂತ್ಯಾತ್ಕುಲಧರ್ಮಾಣಾಂ ಪುಂಸಾಂ ಚೈವಾಯುಷಃ ಕ್ಷಯಾತ್ ।
ಅಸ್ಥಿರತ್ವಾಚ್ಛರೀರಸ್ಯ ದ್ವಾದಶಾಹೇ ಪ್ರಶಸ್ಯತೇ ॥ [ವ್ಯಾಘ್ರಸ್ಮೃತಿ]

ಸಪಿಂಡೀಕರಣಶ್ರಾದ್ಧವನ್ನು ವರ್ಷಾಂತ್ಯದಲ್ಲಿ ಮಾಡಬೇಕೆಂದಿದ್ದರೂ ಕರ್ತೃವಿನ ದೇಹಸ್ವಾಸ್ಥ್ಯ ಆಯುಷ್ಯಕಾಲ ನಿಶ್ಚಿತವಲ್ಲವಾದುದರಿಂದಲೂ ವರ್ಷತನಕ ಬ್ರಹ್ಮಚರ್ಯಾದಿ ನಿಯಮಬದ್ಧನಾಗಿರಲು ಅಸಾಧ್ಯವೆಂದೂ ಹಾಗೂ ಮನೆಯಲ್ಲಿ ನಡೆಯಬೇಕಾದ ಶುಭಕಾರ್ಯಗಳಿಗೂ ತೊಂದರೆಯಾಗುವುದರಿಂದಲೂ ಹನ್ನೆರಡನೇ ದಿವಸದಲ್ಲಿಯೇ ಪ್ರಶಸ್ತವೆಂದಿದ್ದಾರೆ.

ಜ್ಯೇಷ್ಠಃ ಸಪಿಂಡನಂ ಕುರ್ಯಾತ್ ದ್ವಾದಶಾಹೇಽನುಜೈಸ್ಸಹ ।
ಯದಿ ಚೇತ್ಸನ್ನಿಧೌ ನ ಸ್ಯಾತ್ಸನ್ನಿಧಿಸ್ಥೋಽನುಜೋಽಪಿ ವಾ ॥ [ಯಾಜ್ಞವಲ್ಕ್ಯ]

ಹಿರಿಯ ಮಗನೇ ಸಹೋದರರಿಂದ ಕೂಡಿಕೊಂಡು ಹನ್ನೆರಡನೇ ದಿನದಂದು ಸಪಿಂಡೀಕರಣಶ್ರಾದ್ಧವನ್ನು ಮಾಡಬೇಕು. ಜ್ಯೇಷ್ಠನು ದೇಶಾಂತರದಲ್ಲಿದ್ದರೆ ಕಿರಿಯವನಾದರೂ ಮಾಡಬಹುದು.

ಸರ್ವಾಭಾವೇ ಸ್ವಯಂ ಪತ್ನ್ಯಃ ಸ್ವಭರ್ತೃಣಾಮಮಂತ್ರಕಮ್ ।
ಸಪಿಂಡೀಕರಣಂ ಕುರ್ಯುಃ ತತಃ ಪಾರ್ವಣಮೇವ ಚ ॥ [ಬ್ರಾಹ್ಮ]

ಸಂತತಿ ಇಲ್ಲವಾದರೆ ಮೃತನ ಪತ್ನಿಯೇ ಅಮಂತ್ರಕ ವಿಧಾನದಿಂದ ಸಪಿಂಡೀಕರಣಶ್ರಾದ್ಧವನ್ನೂ, ಮುಂದೆ ಪಾರ್ವಣಶ್ರಾದ್ಧವನ್ನೂ ಮಾಡಬಹುದು. (ಇದು ಸದ್ಯ ವಾಡಿಕೆಯಲ್ಲಿ ಇಲ್ಲವಾಗಿದೆ. ಕಾಲಮಾನಪ್ರಕಾರ ವಿಧವಾಧರ್ಮವೇ ಕುಂಠಿತವಾಗಿರುವುದೇ ಇದಕ್ಕೆ ಕಾರಣವಿರಬಹುದು.)

Scanned by CamScanner

ಹಲವು ಪುತ್ರರಿದ್ದು ಸಪಿಂಡೀಕರಣದಲ್ಲಿ ಭಾಗವಹಿಸಲು ಅಸಾಧ್ಯವೆಂದಾಗ ಹಿರಿಯನಾಗಲೀ ಕಿರಿಯನಾಗಲೀ ಸಪಿಂಡೀಕರಣಶ್ರಾದ್ಧ ಮಾಡಿದ ಮೇಲೆ ಪುನಃ ಸಪಿಂಡನವನ್ನು ಮಾಡುವಂತಿಲ್ಲ. ಪುತ್ರನು 'ಪ್ರೇತ' ಶಬ್ದವನ್ನುಚ್ಚರಿಸದೆ ಪಿತೃಶಬ್ದದಿಂದಲೇ ಪ್ರೀತಿಶ್ರಾದ್ಧವೆಂದು ಮಾಡಬೇಕು. ಕೆಲವು ದಿನಗಳ ಅನಂತರ ತಿಳಿದರೆ ತತ್ಕ್ಷಣ ವಪನಾದಿಗಳನ್ನು ಮಾಡಿಸಿ ಹತ್ತು ದಿನಗಳ ತನಕ ಕೇವಲ ತಿಲಾಂಜಲಿ ಕೊಡುವುದರ ಮೂಲಕ ಸಾಮಾನ್ಯ ಆಶೌಚದಿಂದಿದ್ದು ಹನ್ನೊಂದನೇ ದಿನ ಪ್ರೀತಿಶ್ರಾದ್ಧವೆಂದು ಮಾಡಬೇಕು.

> ಪುನಃ ಸಪಿಂಡೀಕರಣಂ ಶ್ರಾದ್ಧಂ ಪಾರ್ವಣವಚ್ಚರೇತ್ ।
> ಅರ್ಘ್ಯಸಂಯೋಜನಂ ನೈವ ಪಿಂಡಸಂಯೋಜನಂ ನ ಚ ॥ [ಅಪರಾದರ್ಶ]

ಸಪಿಂಡೀಕರಣದಲ್ಲಿ ಆಚರಿಸುವ ಯಾವುದೇ ವಿಧಾನಗಳನ್ನು ಮಾಡದೆ ಕೇವಲ ಪಾರ್ವಣಶ್ರಾದ್ಧದಂತೆ ಮಾಡಬೇಕು.

> ಯಃ ಸಪಿಂಡೀಕೃತಂ ಪ್ರೇತಂ ಪುನಃ ಪ್ರೇತಂ ಪ್ರಕಲ್ಪಯೇತ್ ।
> ವಿಧಿಘ್ನಸ್ತೇನ ಭವತಿ ಪಿತೃಹಾ ಚೋಪಜಾಯತೇ ॥

ಪುನಃ ಪ್ರೇತಶಬ್ದಾದಿಗಳನ್ನುಚ್ಚರಿಸಿದರೆ ಪಿತೃಘಾತಕನೆನಿಸುವನು. ಮಾತಾಪಿತೃಗಳ ಉತ್ತರಕ್ರಿಯಾದಿಗಳನ್ನು ಮಾಡದೆ ಇದ್ದರೆ ಆತನಿಗೆ ಸೂತಕವು ಪಾತಕವಾಗಿಯೇ ಉಳಿಯುವುದು.

(ಹನ್ನೊಂದರಂದು ಕೌಟುಂಬಿಕವಾಗಿ ಆಶೌಚಪ್ರಾಪ್ತವಾದರೆ ಸಪಿಂಡೀಕರಣ ಮಾಡುವಂತಿಲ್ಲ. ಪ್ರಾರಂಭಿಸಿದ ಕ್ರಿಯಾದಶಾಹ ಮಧ್ಯೇ ಜ್ಯೇಷ್ಠಪುತ್ರನ ಪತ್ನಿ ಪ್ರಸವಿಸಿದರೆ ಏಕಾದಶಾಹ ಪರ್ಯಂತ ಕ್ರಿಯೆ ಮಾಡಿ ತನಗೆ ಬಂದ ಆಶೌಚ ಶುದ್ಧಿಯಂದು ಸಪಿಂಡೀಕರಣ ಮಾಡಬೇಕು. ಮುಖ್ಯ ಕರ್ತೃವಿನ ಸಹೋದರನ ಪತ್ನಿ ಪ್ರಸವಿಸಿದರೆ ಆತನು ಮಾತ್ರ ಏಕಾದಶಾಹ ತನಕ ಕ್ರಿಯೆ ನಡೆಸಿ ಆಶೌಚನಿವೃತ್ತಿಯಂದು ಪುಣ್ಯಾಹ, ಪಂಚಗವ್ಯಪ್ರಾಶನ, ತಿಲಹೋಮಪೂರ್ವಕ ಪ್ರೀತಿಶ್ರಾದ್ಧವನ್ನು ಮಾಡಬೇಕು. ಪತ್ನಿ ರಜಸ್ವಲೆಯಾದರೂ ಮೇಲಿನ ನಿಯಮವನ್ನೇ ಆಚರಿಸಬೇಕು.

ಹನ್ನೆರಡನೆಯ ದಿವಸ ಪುಣ್ಯಾಹವಾಚನ ಮುಗಿಸಿ ಪವಮಾನಹೋಮ, ಕೂಶ್ಮಾಂಡಹೋಮ, ತಿಲಹೋಮಗಳನ್ನು ವಿಶೇಷ ವೇದ ಪಾರಾಯಣಗಳನ್ನು ನಡೆಸಬೇಕು. ಈ ಸತ್ಕರ್ಮದ ಪುಣ್ಯಫಲವನ್ನು ಪಿಂಡಸಂಯೋಜನಸಂದರ್ಭದಲ್ಲಿ ಕೃಷ್ಣಾರ್ಪಣ ಬಿಡುವುದರಿಂದ ಮೃತಜೀವಿಗೆ ಪಿತೃತ್ವವುಂಟಾಗಿ ವಸ್ವಾದಿಪುಣ್ಯಲೋಕಪ್ರಾಪ್ತಿಯಾಗಲು ಸಹಾಯವಾಗುವುದು.)

Scanned by CamScanner

ಸಪಿಂಡೀಕರಣಾತ್ ಪ್ರೇತೇ ಪೈತೃಕಂ ಪದಮಾಸ್ಥಿತೇ ॥

[ಸ್ಮೃತಿ]

ಸಪಿಂಡೀಕರಣಶ್ರಾದ್ಧದಿಂದ ಮೃತಜೀವಿಯು ಪ್ರೇತತ್ವವನ್ನು ಬಿಟ್ಟು ಪಿತೃತ್ವವನ್ನು ಹೊಂದುವುದು. (ಏಕೋದ್ದಿಷ್ಟ ವಿಧಿಯಂತೆ ಪ್ರೇತಾರಾಧನೆಯನ್ನು, ಪಾರ್ವಣವಿಧಿಯಂತೆ ಕರ್ತೃವಿನ ಪಿತಾಮಹಾದಿ ಮೂರು ವರ್ಗಗಳನ್ನು ಆರಾಧನೆ ಮಾಡಿ. ಪ್ರೇತಪಿಂಡವನ್ನು ಮೂರು ಭಾಗ ಮಾಡಿ ತತ್ಪಿತ್ರಾದಿಗಳ ಪಿಂಡಗಳಲ್ಲಿ ಕೂಡಿಸಬೇಕು. ಈ ಶ್ರಾದ್ಧವನ್ನು ಮಾಡುವ ಸಂದರ್ಭ ವಿಶ್ವೇದೇವರ ಸ್ಥಾನಕ್ಕಾಗಿ ಈರ್ವರನ್ನು, ಪೈತೃಕವರ್ಗವಾಗಿ ಮೂವರನ್ನು, ಪ್ರೇತಸ್ಥಾನಕ್ಕಾಗಿ ಓರ್ವರನ್ನು – ಹೀಗೆ ಆರು ಮಂದಿ ವೇದಜ್ಞವಿಪ್ರರನ್ನು ನಿಮಂತ್ರಿಸಬೇಕು. ಆ ವಿಪ್ರರು ಸದಾಚಾರಸಂಪನ್ನರೂ ಸಹನಶೀಲರೂ ತೃಪ್ತಜೀವನವುಳ್ಳವರೂ ಆಗಿರಬೇಕು. "ವ್ರತಸ್ಥಮಪಿ ದೌಹಿತ್ರಂ ಶ್ರಾದ್ಧೇ ಯತ್ನೇನ ಭೋಜಯೇತ್" ಎಂಬ ಮನುವಚನ ಪ್ರಕಾರ ದೌಹಿತ್ರನು ಬ್ರಹ್ಮಚಾರಿಯಾಗಿದ್ದರೂ ಪೈತೃಕಸ್ಥಾನ ಬ್ರಾಹ್ಮಣಸ್ಥಾನದಲ್ಲಿ ಪರಿಗ್ರಹಿಸಲ್ಪಡಬಹುದು. ಒಟ್ಟು ಆರು ಮಂದಿ ದುರ್ಲಭವಾದರೆ ವಿಶ್ವೇದೇವರ ಸ್ಥಾನ, ಪೈತೃಕಸ್ಥಾನ, ಪ್ರೇತಸ್ಥಾನಗಳಿಗೆ ಒಬ್ಬೊಬ್ಬರನ್ನಾಗಿಯೂ ನಿಮಂತ್ರಿಸಬಹುದು. ವಿಪ್ರರನ್ನು ಮೊದಲೇ ಆಹ್ವಾನಿಸಿ ಆ ದಿನ ತೈಲೋದ್ವರ್ತನಾದಿ ಸ್ನಾನ ಮಾಡಿಸಿ ಪಾದ್ಯ–ಅರ್ಘ್ಯ–ವಸ್ತ್ರ–ಗಂಧ–ಉಪವೀತ–ಪುಷ್ಪಾಕ್ಷತೆ–ಜಲಪಾತ್ರೆಗಳನ್ನಿತ್ತು ಸತ್ಕರಿಸಿ ನಿಯಮಿತ ಪದಾರ್ಥಗಳಿಂದ ಮೃಷ್ಟಾನ್ನಭೋಜನ ಮಾಡಿಸಿ ಅವರ ಅನುಮತಿಯಂತೆ ಪ್ರೇತಪಿಂಡವನ್ನು ಸಂಯೋಜನೆ ಮಾಡಬೇಕು. ಇದಕ್ಕೆ 'ಕ್ಷಣಪಾರ್ವಣಶ್ರಾದ್ಧ'ವೆಂದು ಹೆಸರು.

ಅಡುಗೆ ಪದಾರ್ಥಗಳಲ್ಲೂ ನಿಯಮವಿದೆ. ಶೌಚಾಚಾರ ಮಡಿವಂತಿಕೆಗಳಲ್ಲೂ ಅತಿ ಜಾಗ್ರತೆ ವಹಿಸಬೇಕು. ತೀರ್ಥಯಾತ್ರಾದಿಗಳಲ್ಲಿ ಬ್ರಾಹ್ಮಣರನ್ನು ಪರೀಕ್ಷಿಸಕೂಡದು. ಆದರೆ ಪಾರ್ವಣಶ್ರಾದ್ಧದಲ್ಲಿ ಮತ್ತು ಸಪಿಂಡೀಕರಣದಲ್ಲಿ ವಿಪ್ರರನ್ನು ಪರೀಕ್ಷಿಸಲೇಬೇಕೆಂದೂ ಅನ್ಯಥಾ ಕರ್ಮ ನಿಷ್ಫಲವೆಂದೂ ಬಹಳವಾಗಿ ಸ್ಮೃತಿಕಾರರು ಎಚ್ಚರಿಸಿರುತ್ತಾರೆ.

ಶಾಸ್ತ್ರೋಕ್ತಲಕ್ಷಣಗಳುಳ್ಳ ವಿಪ್ರರು ಸಿಗದಾಗ ಅಡುಗೆ–ಪದಾರ್ಥಗಳಲ್ಲಿ, ಶೌಚಾಚಾರಗಳಲ್ಲಿ ಅಸಾಧ್ಯವೆಂದಾದರೆ ಇನ್ನೊಂದು ಚಟಕಶ್ರಾದ್ಧ ವಿಧಿಯಿದೆ.

ನಿಧಾಯ ದರ್ಭನಿಚಯಮಾಸನೇಷು ಸಮಾಹಿತಃ ।
ಪ್ರೈಷಾನುಪ್ರೈಷಸಂಯುಕ್ತಂ ಸರ್ವಂ ಶ್ರಾದ್ಧಂ ಪ್ರಕಲ್ಪಯೇತ್ ॥

[ಹೇಮಾದ್ರಿ]

Scanned by CamScanner

ಬ್ರಾಹ್ಮಣಸ್ಥಾನಗಳಲ್ಲಿ ಕೂರ್ಚಗಳನ್ನು ಇರಿಸಿ ಕ್ಷಣಶ್ರಾದ್ಧದಂತೆ ವಿಧಾನಗಳನ್ನು ನಡೆಸುವುದು. ಪ್ರತ್ಯಕ್ಷ ಬ್ರಾಹ್ಮಣರ ಸನ್ನಿಧಾನದಲ್ಲಿ ಪ್ರತ್ಯುತ್ತರವನ್ನು ಅವರಿಂದಲೇ ಪಡೆಯುವುದು. ಕೂರ್ಚಮುಖೇನವಾದಾಗ ಮಾನಸಿಕ ಚಿಂತನೆ ಸಮಾಧಾನವೇ ಉತ್ತರವಾಗುವುದು. (ವಿಶ್ವೇದೇವರ ಸ್ಥಾನೀಯ ವಿಪ್ರರು ಪೂರ್ವಾಭಿಮುಖವಾಗಿಯೂ – ಕೂರ್ಚವಾದರೆ ನಾಲ್ಕು ಎಳೆಯ ದರ್ಭೆ ಪವಿತ್ರಗ್ರಂಥಿ ಮಾಡಿ ಪೂರ್ವಾಗ್ರವಾಗಿಯೂ; ಪ್ರೇತಸ್ಥಾನೀಯ ಬ್ರಾಹ್ಮಣರು ಉತ್ತರಾಭಿಮುಖವಾಗಿಯೂ – ಕೂರ್ಚವಾದರೆ ಒಂದೆಸಳಿನ ಕೂರ್ಚ ದಕ್ಷಿಣಾಗ್ರವಾಗಿಯೂ; ಪೈತೃಕವರ್ಗ ಬ್ರಾಹ್ಮಣರು ಉತ್ತರ ಮುಖವಾಗಿಯೂ – ಕೂರ್ಚವಾದರೆ ಮೂರು ಎಳೆಯ ಕೂರ್ಚಗಳನ್ನು ದಕ್ಷಿಣಾಗ್ರಗಳಾಗಿಯೂ ಇರಿಸಬೇಕು. ಚಟಕಶ್ರಾದ್ಧವಿಧಿಯು ಕೇವಲ ವಾರ್ಷಿಕ ಪಾರ್ವಣಶ್ರಾದ್ಧದಲ್ಲಿ ಅಂಗೀಕಾರಾರ್ಹವಾಗಿದೆ. ಮಾತಾಪಿತೃಗಳ ಸಪಿಂಡೀಕರಣಶ್ರಾದ್ಧದಲ್ಲಿ ಪ್ರತ್ಯಕ್ಷ ಬ್ರಾಹ್ಮಣಾರಾಧನೆಯೇ ವಿಶೇಷವಾಗಿದೆ.

ಯಜಮಾನನು ಒಂದೆಳೆಯ ಪವಿತ್ರವನ್ನೂ ಮೂರು ಎಳೆಯ ಪವಿತ್ರವನ್ನೂ ಧರಿಸಬೇಕು. ಪ್ರೇತಶಬ್ದ ನಿವೃತ್ತಿಯಾಗಲು ಒಂದು ಎಳೆಯ ಪವಿತ್ರ ಬಿಟ್ಟು ಎರಡೆಸಳಿನ ಹಾಗೂ ಮೂರು ಎಳೆಯ ಪವಿತ್ರ ಧರಿಸಬೇಕು. ಪ್ರೇತಬರ್ಹಿಸ್ಸು ಒಂದೆಸಳು, ಪೈತೃಕವರ್ಗ ಬರ್ಹಿಸ್ಸು ಒಂದೆಸಳು, ಪೈತೃಕವರ್ಗ ಬರ್ಹಿಸ್ಸು ತೊಂಬತ್ತಾರೆಸಳು, ಜಲಕೂರ್ಚ ಇಪ್ಪತ್ತೊಂದು ಎಸಳು, ಏರಕಾಕ್ಕೆ ಏಳು ಎಳೆಯ ಕೂರ್ಚಗಳೆಂದು ನಿಯಮಗಳಿಗೆ. ವಿಶ್ವೇದೇವ ಸ್ಥಾನಕ್ಕೆ ಚತುರಸ್ರಮಂಡಲ, ಪ್ರೇತಸ್ಥಾನಕ್ಕೆ ತ್ರಿಕೋಣ, ಪೈತೃಕವರ್ಗಕ್ಕೆ ವರ್ತುಲಮಂಡಲವಾಗಿರಬೇಕು. ಪಿಂಡಸ್ಥಲವನ್ನು ರಂಗವಲ್ಲಿಯಿಂದ ಅಲಂಕರಿಸದೆ ಜೇಡಿಪುಡಿಯಿಂದ ಬರೆಯಬೇಕು. ಕರ್ತೃವು ಪೂರ್ವಾಭಿಮುಖಿಯಾಗಿ ಆಚಮನವನ್ನು, ಪಶ್ಚಿಮಾಭಿಮುಖಿಯಾಗಿ ವಿಶ್ವೇದೇವತೆಗಳ ಆರಾಧನೆಯನ್ನು, ದಕ್ಷಿಣಾಭಿಮುಖಿಯಾಗಿ ಪೈತೃಕವರ್ಗ ಆರಾಧನೆಯನ್ನು ಮಾಡಬೇಕೆಂದಿದೆ. ಪಿಂಡವನ್ನು ಆಗ್ನೇಯಾಭಿಮುಖವಾಗಿ ಇಡಬೇಕು. ಮುಖ್ಯಕರ್ತೃವಿನ ಎಡ ಭಾಗದಲ್ಲಿ ಸಹೋದರರು ಕುಳಿತುಕೊಳ್ಳಬೇಕು. ದೇಶಾಚಾರದಂತೆ ಸಹೋದರರೆಲ್ಲರೂ ಪಿಂಡಪ್ರದಾನ ಮಾಡುವುದು ಪೂರ್ವಪದ್ಧತಿಯಾಗಿದೆ. ಆದರೆ ಬ್ರಾಹ್ಮಣಾರಾಧನೆಯನ್ನು ಅನುಜರ ಸಹಕಾರದಿಂದ ಜ್ಯೇಷ್ಠನೇ ಮಾಡಬೇಕು. ಶ್ರಾದ್ಧದಲ್ಲಿ ಪಿಂಡಪ್ರದಾನ ಮುಖ್ಯವಾದರೂ ಬ್ರಾಹ್ಮಣಾರಾಧನೆಯು ಅತಿ ಮಹತ್ತ್ವವುಳ್ಳದ್ದಾಗಿದೆ. ಆದುದರಿಂದಲೇ ಜ್ಯೇಷ್ಠನೇ ನಡೆಸಬೇಕೆಂದು ಸ್ಪಷ್ಟಪಡಿಸಿರುತ್ತಾರೆ.)

ತಿಲಮನ್ನಂ ಚ ಪಾನೀಯಂ ಗುಡಂ ದಧಿ ಪಯಸ್ತಥಾ ।
ಮಧುಸರ್ಪಿಃ ಸಮಾಯುಕ್ತಮಷ್ಟಾಂಗಂ ಪಿಂಡಲಕ್ಷಣಮ್ ॥ [ಸ್ಮೃತಿಸಾರ]

ಎಳ್ಳು, ತೀರ್ಥ, ಬೆಲ್ಲ, ಮೊಸರು, ಹಾಲು, ಜೇನು, ತುಪ್ಪ ಮಿಶ್ರವಾದ ಅನ್ನದಿಂದ ಪಿಂಡ ಮಾಡಬೇಕು.

Scanned by CamScanner

ನಾಲಿಕೇರಸಮಂ ಪಿಂಡಂ ಪಾರ್ವಣೇ ಸಮುದಾಹೃತಮ್ ।
ಪ್ರೇತಪಿಂಡಸ್ತು ದೈರ್ಘ್ಯೇಣ ದ್ವಾದಶಾಂಗುಲ ಉಚ್ಯತೇ ॥ [ಸ್ಮೃತಿಸಾರ]

ಪಾರ್ವಣಶ್ರಾದ್ಧದಲ್ಲಿ ಪಿಂಡವು ತೆಂಗಿನಕಾಯಿಯ ಗಾತ್ರದಲ್ಲಿರಬೇಕು. ಪ್ರೇತಪಿಂಡವು ಹನ್ನೆರಡಂಗುಲ ದೀರ್ಘವರ್ತುಲವಾಗಿರಬೇಕು. (ಪ್ರೇತಪಿಂಡವನ್ನು ಸಂಯೋಜನೆ ಮಾಡುವುದಕ್ಕಿಂತ ಮೊದಲು ಗೋದಾನ ಕೊಡಬೇಕು. ಪ್ರತ್ಯಕ್ಷ ಗೋದಾನ ಕೊಡುವುದಿದ್ದರೆ ಆಗ ಸಂಕಲ್ಪ ಮಾತ್ರ ಮಾಡಿ ಶ್ರಾದ್ಧಾಂತ್ಯದಲ್ಲಿ ಕೊಡಬೇಕು. ಕಬ್ಬಿನಿಂದ ಸಿದ್ಧಗೊಳಿಸಿ ದೋಣಿಯನ್ನು ದಾನಕೊಡುವುದಿದೆ.)

ಗರುಡಪುರಾಣದ ವಾಕ್ಯದಂತೆ ಪ್ರೇತಘಟ ದಾನಮಾಡಬೇಕು. ಬಭ್ರುವಾಹನ ಪ್ರೇತಸಂವಾದ ಸಂದರ್ಭದಲ್ಲಿ–

ಸಂತಪ್ತಹಾಟಕಮಯಂ ತು ಘಟಂ ವಿಧಾಯ ಬ್ರಹ್ಮೇಶಕೇಶವಯುತಂ ಸಹ ಲೋಕಪಾಲೈಃ ।
ಕ್ಷೀರಾಜ್ಯಪೂರ್ಣವಿವರಂ ಪ್ರಣಿಪತ್ಯ ಭಕ್ತ್ಯಾ ವಿಪ್ರಾಯ ದೇಹಿ ತವ ದಾನಶತೈಃ ಕಿಮನ್ಯೈಃ ॥ [ಅತ್ರಿಸ್ಮೃತಿ]

ನೂರಾರು ದಾನಕ್ಕಿಂತ ಸುವರ್ಣಮಯ ಘಟವನ್ನು ಹಾಲು ತುಪ್ಪ ತುಂಬಿಸಿ ಬ್ರಹ್ಮಾದಿದೇವತೆಗಳನ್ನು ಆವಾಹಿಸಿ ವೇದಜ್ಞ ವಿಪ್ರನಿಗೆ ದಾನಕೊಡುವುದು ಮಹತ್ತ್ವಪೂರ್ಣವೆನಿಸಿದೆ ಎಂದು ಉಕ್ತವಾಗಿದೆ.

ಕರ್ತೃವಿನ ತಂದೆಯು ಮರಣಪರ್ಯಂತ ನಡೆಸುತ್ತಿದ್ದ ಶ್ರಾದ್ಧದಲ್ಲಿ ಪಿತೃಪಿತಾಮಹಪ್ರಪಿತಾಮಹರಲ್ಲಿ ತನ್ನ ಊರ್ಧ್ವ ಪ್ರಪಿತಾಮಹನನ್ನು ಇನ್ನು ಮುಂದೆ ಆರಾಧಿಸುವುದಕ್ಕೆ ವಿಧಿ ಇಲ್ಲವಾದುದರಿಂದ ಅವರಿಗೆ ಪುಣ್ಯಲೋಕಪ್ರಾಪ್ತಿಯಾಗುವಂತೆ ಸಂಕಲ್ಪಮಾಡಿ ವಿಪ್ರನಿಗೆ ಆಮಾನ್ನದಾನ ಮಾಡಬೇಕು. ತಾಂಬೂಲ ದಕ್ಷಿಣೆಗಳಿಂದ ಸಂತೃಪ್ತರಾಗಲು ಪ್ರೇತಸ್ಥಾನೀಯ ವಿಪ್ರನು "ಇನ್ನು ಮುಂದೆ ಪ್ರೇತ ಶಬ್ದವನ್ನು ಬಿಟ್ಟು ಪಿತೃಶಬ್ದದಿಂದ ಆರಾಧಿಸುವಂತೆ ಹೇಳಲು; ಕರ್ತೃವು ತಾನು ಉತ್ತರೀಯವಾಗಿ ಧರಿಸಿದ್ದ ಕರ್ಮವಸ್ತ್ರವನ್ನು ಮುಖ್ಯ ಬ್ರಾಹ್ಮಣ(ಪ್ರೇತಸ್ಥಾನೀಯ)ನಿಗೆ ಕೊಡಬೇಕು. ಕೂರ್ಚಮುಖೇನವಾಗಿದ್ದರೆ ತತ್‌ಸ್ಥಾನೀಯ ಕೂರ್ಚದ ಜೊತೆ ವಿಸರ್ಜಿಸಬೇಕು. ವಿಪ್ರರನ್ನು ಕಳುಹಿಸುವ ಸಂದರ್ಭದಲ್ಲಿ ಪ್ರಾಂಗಣದಲ್ಲಿ ಅವರ ಪಾದಪ್ರಕ್ಷಾಳನೆ ಮಾಡಿ ಬೀಳ್ಕೊಡಬೇಕು. ಕೂರ್ಚಗಳನ್ನಾದರೂ ಹೊರಗೆ ತಂದು ಜಲವನ್ನು ಪ್ರೋಕ್ಷಿಸಿ ವಿಸರ್ಜಿಸಬೇಕು. ವಿಶೇಷ ಗಮನೀಯ ಸಂಗತಿ ಏನೆಂದರೆ–

Scanned by CamScanner

ಉಚ್ಛೇಷಣಂ ತು ತತ್ತಿಷ್ಠೇದ್ಯಾವದ್ವಿಪ್ರಾ ವಿಸರ್ಜಿತಾಃ ।
ತತೋ ಗೃಹಬಲಿಂ ಕುರ್ಯಾದಿತಿ ಧರ್ಮೋ ವ್ಯವಸ್ಥಿತಃ ॥ [ಮನು]

ಬ್ರಾಹ್ಮಣರು ಊಟಮಾಡಿ ಉಳಿದ ಪದಾರ್ಥಗಳನ್ನು ಅವರ ವಿಸರ್ಜನೆಯಾದ ಮೇಲೆಯೇ ತೆಗೆದು ಸ್ಥಳವನ್ನು ಶುದ್ಧಗೊಳಿಸಬೇಕು. (ಬೋಜನ ಮಾಡಿದ ಪತ್ರಾದಿ ಉಚ್ಛಿಷ್ಟವನ್ನು ಭೂಗತ ಮಾಡುವುದು ವಾಡಿಕೆ. ಅನಂತರ ಯಜಮಾನನು ಸ್ನಾನಮಾಡಿ ಕಲಶದ್ವಯದಲ್ಲಿ ಪುಣ್ಯಾಹ, ಪಂಚಗವ್ಯಪ್ರಾಶನ, ಉಪವೀತಧಾರಣ, ನಿರೀಕ್ಷ್ಯಾಜ್ಯದಾನ ಮಾಡಬೇಕು. ಹಿಂದಿನ ದಿನ ದಾನ ಕೊಡದೆ ಇದ್ದಲ್ಲಿ ಎಲ್ಲ ದಾನಗಳನ್ನು ಕೊಟ್ಟು ಭೋಜನ ಮಾಡಿಸಬೇಕು. ಬಳಿಕ ಬಂಧುವರ್ಗದವರಿಗೆಲ್ಲ ಹೊಸ ಬಟ್ಟೆ ನೀಡಬೇಕು. ಆತ್ಮಸಂಬಂಧ ಹಿರಿಯರಿಂದ ತಾನೂ ನೂತನ ಬಟ್ಟೆ ಸ್ವೀಕರಿಸಿ ಧರಿಸಿ ಅಮಂಗಲ ನಿವಾರಣೆಗಾಗಿ ಓಕುಳಿ ಆರತಿ ಮಾಡಿಸಿಕೊಂಡು ಆಚಾರ್ಯಪೂಜೆ ಮಾಡಬೇಕು. ಹತ್ತುದಿನ ತನಕ ಚರು ಬೇಯಿಸಿದ ಪಾತ್ರೆಯನ್ನು ಅಕ್ಕಿ ತುಂಬಿಸಿ ತರಕಾರಿಸಹಿತ ಆಚಾರ್ಯರಿಗೆ ಕೊಡಬೇಕು. ಹಿರಿಯರಿಂದ ಆಶೀರ್ವಾದ ಪಡೆದು ತಾನು ಭೋಜನ ಮಾಡಬೇಕು. ಅಂದು ಮುಸ್ಸಂಜೆಕಾಲ ದೇವಸ್ಥಾನಕ್ಕೋ ಹಿರಿಯ ಬಂಧುಗಳ ಮನೆಗೋ ಹೋಗಿಬರುವ ಸಂಪ್ರದಾಯ ಇದೆ.)

ಪಿಂಡದಾನ–ವಿಕಿರಬಲಿ–ಬಲಿಹರಣವಿಚಾರ–

ಪಾರ್ವಣಶ್ರಾದ್ಧದಲ್ಲಿ ಪಿಂಡದಾನಕಾಲವು ಆರು ವಿಧಗಳಾಗಿವೆ.

"ಅರ್ಚನೋತ್ತರಮ್ । ಅಗ್ನೌಕರಣೋತ್ತರಮ್ । ಭೋಜನೋತ್ತರಮ್ । ವಿಕಿರೋತ್ತರಮ್ । ಸ್ವಧಾವಾಚನೋತ್ತರಮ್ । ವಿಪ್ರ ವಿಸರ್ಜನೋತ್ತರಮ್ ॥"

ಶಾಖಾಭೇದಗಳಂತೆ ಕಾಲವ್ಯತ್ಯಾಸಗಳನ್ನು ತಿಳಿಸಿರುತ್ತಾರೆ. ಪಿಂಡದಾನದಂತೆ ವಿಕಿರಬಲಿಯೂ ಮುಖ್ಯವಾದುದು. ಬಲಿವಿಚಾರದಲ್ಲೂ ಕಾಲವ್ಯತ್ಯಾಸವಿದೆ. ಆಶ್ವಲಾಯನಗೃಹ್ಯಸೂತ್ರದಂತೆ ವಿಪ್ರರ ಭೋಜನಾನಂತರ ಪಿಂಡದಾನವಾದ ಮೇಲೆ ವಿಕಿರಬಲಿ ಇಟ್ಟು ಆಚಮನ ಮಾಡಬೇಕೆಂದು ತಿಳಿಯುವುದು. ರೂಢಿಯಲ್ಲಿ ಭೋಜನಸಂದರ್ಭ ವಿಕಿರಬಲಿ ಇಟ್ಟು ಉತ್ತರಾಪೋಶನ–ಪಿಂಡದಾನವೆಂದೂ ಬಳಿಕ ಪಿಂಡದ ಸುತ್ತಲೂ ಬಲಿಹರಣ–ವಾಯಸಬಲಿ–ಪವಿತ್ರವಿಸರ್ಜನೆ–ಆಚಮನವೆಂದೂ ಬಳಕೆಯಲ್ಲಿದೆ. ಬಲಿಹರಣವಿಚಾರ ಗೃಹ್ಯಸೂತ್ರದಲ್ಲಿ ಸ್ಪಷ್ಟವಾಗಿಲ್ಲ. ಕೆಲವು ದೇಶಪ್ರಯೋಗದಂತೆ ಬಲಿಹರಣವೂ ಇಲ್ಲ. ಶ್ರಾದ್ಧಾಂತ್ಯದಲ್ಲಿ ವಿಕಿರಬಲಿ ಪಿಂಡವನ್ನು ವಾಯಸಕ್ಕೆ ಇಡುವ ರೂಢಿ ಇದೆ.

Scanned by CamScanner

ಎರಡು ಬಲಿಗಳೂ ಸಾಮಾನ್ಯ ಸಮಾನತಂತ್ರಗಳಾದುದರಿಂದ ಗೃಹ್ಯಸೂತ್ರವಚನಕ್ಕೂ ವಿರೋಧವಾಗದಂತೆ ವಿಪ್ರರ ಭೋಜನೋತ್ತರ ಪಾತ್ರಸಮೀಪ ವಿಕಿರಬಲಿಯನ್ನೂ ಪಿಂಡದ ಸುತ್ತಲೂ ಬಲಿಹರಣವನ್ನೂ ಮಾಡಿ ವಾಯಸಬಲಿ ಇಟ್ಟು ಪವಿತ್ರವಿಸರ್ಜನೆ ಹಾಗೂ ಆಚಮನ ಮಾಡುವುದು ವಿಹಿತವೆಂದು ಈ ಪ್ರಯೋಗದಲ್ಲಿ ಅಳವಡಿಸಲಾಗಿದೆ.

॥ ಇತಿ ಸಪಿಂಡೀಕರಣವಿಚಾರಃ ॥

ಹದಿಮೂರನೆಯ ದಿನವಿಚಾರ–

ಪ್ರೇತಃ ಸಪಿಂಡಾನಾದೂರ್ಧ್ವಂ ಪಿತೃಲೋಕೇಽನುಗಚ್ಛತಿ ।
ಕುರ್ಯಾತ್ತಸ್ಯ ತು ಪಾಥೇಯಂ ದ್ವಿತೀಯೇಽಹ್ನಿ ಸಪಿಂಡನಾತ್ ।
ಸಪಿಂಡನದಿನೇ ವಾಪಿ ದ್ವಾದಶೇ ವಾ ತ್ರಯೋದಶೇ ॥ [ವಿಶ್ವಪ್ರಕಾಶ]

ಪಿತೃವು ಪ್ರೇತಲೋಕವನ್ನು ಬಿಟ್ಟು ಪಿತೃಲೋಕಕ್ಕೆ ಪಯಣಿಸುವ ಸಮಯದಲ್ಲಿ ಸಕಲ ಸಾಧನೆಯ ಅನುಕೂಲತೆಯಿಂದ ಸುಖವಾಗಿ ಹೋಗಲು ಅನ್ನದಿಂದಲೋ ಹಿಟ್ಟಿನಿಂದಲೋ ಪಾಥೇಯಶ್ರಾದ್ಧವೆಂದು ಮಾಡಬೇಕು. ಶ್ರಾದ್ಧ ಮಾಡಲು ಅಸಾಧ್ಯವಾದರೆ ತಿಲತರ್ಪಣವನ್ನಾದರೂ ಕೊಡಬೇಕು. (ಬಳಿಕ ಓರ್ವ ವಿಪ್ರನನ್ನು ಅರುಣೋದಯಕಾಲದಲ್ಲಿ ಕರೆಯಿಸಿ ಒಂದು ವರ್ಷಕ್ಕೆ ಸಾಕಾಗುವಷ್ಟು ಅಕ್ಕಿ, ಬೇಳೆ, ಕಾಳು, ತರಕಾರಿ, ಜಲಪಾತ್ರೆ, ವಸ್ತ್ರ, ಛತ್ರ, ಆಸನ, ದೀಪಾದಿಗಳನ್ನು ದಾನಮಾಡಿ ಕಳುಹಿಸಬೇಕು. ಈ ಕೃತ್ಯವನ್ನು ಉದಯಾತ್ಪೂರ್ವದಲ್ಲಿ ಮಾಡಿ ಆ ಬ್ರಾಹ್ಮಣನು ನಿರ್ಗಮಿಸಲು ಹೊಸ್ತಿಲಿಗೆ ರಂಗವಲ್ಲಿ ಇಟ್ಟು ಶಂಖಧ್ವನಿ ಮಾಡುವ ವಾಡಿಕೆ ಹಳ್ಳಿಗಳಲ್ಲಿದೆ.)

ಶ್ರವಣದೇವತಾರಾಧನೆಯ ವಿಚಾರ –

ಶ್ರವಣಾ ಬ್ರಹ್ಮಣಃ ಪುತ್ರಾಃ ಸ್ವರ್ಭೂಃಪಾತಾಲಚಾರಿಣಃ ।
ದೂರಶ್ರವಣವಿಜ್ಞಾನಾ ದೂರದರ್ಶನಚಕ್ಷುಷಃ ॥

Scanned by CamScanner

ಶ್ರವಣದೇವತಾಃ – ಕಾಲನೇಮಿರ್ಜಗಚ್ಚಕ್ಷುಃ ವಕ್ರದಂಷ್ಟ್ರೋ ವೃಕೋದರಃ ।
ಸುದೀರ್ಘನಯನಃ ಕ್ರೂರಃ ಮರ್ಮಭೇದ್ಯಶರಸ್ತಥಾ ॥

ದುರ್ವಾತಶ್ಚಾತಕೋ ಭೀಮಃ ಶತ್ರುಘ್ನೋ ಮಿತ್ರರಕ್ಷಕಃ ।
ದೇವತಾ ದ್ವಾದಶೈವೈತಾಃ ಶ್ರವಣಾಖ್ಯಾಃ ಪ್ರಕೀರ್ತಿತಾಃ ॥

ತೇಷಾಂ ಪತ್ನ್ಯಸ್ತಥಾಭೂತಾಃ ಶ್ರವಣ್ಯಃ ಪೃಥಗಾಹ್ವಯಾಃ ।
ಸ್ತ್ರೀಣಾಂ ವಿಚೇಷ್ಟಿತಂ ಸರ್ವಂ ತಾ ವಿಜಾನಂತಿ ತತ್ತ್ವತಃ ॥ [ಗಾರುಡ]

ಬ್ರಹ್ಮನ ಹನ್ನೆರಡು ಜನ ಪುತ್ರರು ಶ್ರವಣದೇವತೆಗಳೆಂದೇ ಹೆಸರುಳ್ಳವರು. ಅವರಿಗೆಲ್ಲಾ ಬೇರೆ ಬೇರೆ ಹೆಸರುಗಳಿದ್ದರೂ ಸಮಷ್ಟಿಯಾಗಿ ಶ್ರವಣದೇವತೆಗಳು. ಅವರ ಪತ್ನಿಯರು ಅದೇ ಹೆಸರಿನಿಂದಿರುವವರು. ಸ್ವರ್ಗ, ಮರ್ತ್ಯ, ಪಾತಾಳಗಳಲ್ಲಿ ಇಚ್ಛಾನುಸಾರ ಸಂಚರಿಸುತ್ತಾ ಎಲ್ಲ ಜೀವಿಗಳ ಶುಭಾಶುಭ ಕರ್ಮಗಳನ್ನು ತಿಳಿಯುವ ಹಾಗೂ ದೂರದಿಂದಲೇ ನೋಡಲೂ ಕೇಳಲೂ ಸಾಮರ್ಥ್ಯ ಹೊಂದಿದವರು. ಯಮರಾಜನ ಸಭಾಸ್ಥಾನದಲ್ಲಿ ಮಾನ್ಯತೆಯುಳ್ಳವರೂ ಆಗಿರುತ್ತಾರೆ. (ಜೀವಿಗಳ ಪಾಪಪುಣ್ಯಗಳನ್ನು ಯಮನು ಚಿತ್ರಗುಪ್ತನಿಂದ ತಿಳಿಯುವ ಸಮಯದಲ್ಲಿ ಈ ಶ್ರವಣದೇವತೆಗಳು ಜೀವಿಯು ಜೀವನದಲ್ಲಿ ನಡೆಸಿದ ಪುಣ್ಯಕರ್ಮಾತಿಶಯಗಳಲ್ಲಿ ಸ್ವತಂತ್ರ ರೀತಿಯಿಂದ ಅಭಿಪ್ರಾಯ ನೀಡುವವರಾಗುತ್ತಾರೆ. ಅವರ ಪ್ರೀತಿಗಾಗಿ ಹನ್ನೆರಡು ಬ್ರಾಹ್ಮಣ(ಸಪತ್ನೀಕ)ರನ್ನೂ ಸರ್ವಸಾಕ್ಷಿಯಾಗಿ ಮಹಾವಿಷ್ಣುವಿನ ಪ್ರೀತಿಗಾಗಿ ಓರ್ವ ಬ್ರಾಹ್ಮಣ ಹೀಗೆ ಹದಿಮೂರು ವಿಪ್ರರನ್ನು ಆರಾಧನೆ ಮಾಡಿ ಅವರನ್ನು ಅರ್ಘ್ಯಪಾದ್ಯಾದಿಗಳಿಂದ ಉಪಚರಿಸಿ ವಸ್ತ್ರ, ಗಂಧ, ಉಪವೀತ, ಪುಷ್ಪಮಾಲಾಕ್ಷತೆ, ಜಲಪಾತ್ರೆ, ಗೋಪೀಚಂದನ, ತಾಂಬೂಲ, ದಕ್ಷಿಣೆಗಳಿಂದಲೂ ಭಕ್ಷ್ಯಭೋಜ್ಯ ಪಾಯಸಗಳಿಂದಲೂ ಭೋಜನಮಾಡಿಸಿ ತೃಪ್ತಿಪಡಿಸಿ ಅವರಿಂದ ಆಶೀರ್ವಾದ ಪಡೆಯಬೇಕು. ಸಾಮಾನ್ಯವಾಗಿ ಕೇಶವಾದಿ ದ್ವಾದಶಮೂರ್ತಿ ಆರಾಧನೆ ಪ್ರಚಲಿತವಿದೆ. ಪ್ರಯೋಗದಲ್ಲಿ ತಿಳಿಸಿದಂತೆ ಈ ಶ್ರವಣದೇವತೆಗಳನ್ನು ಉದ್ದೇಶವಿರಿಸಿಯೂ ಆರಾಧಿಸಬಹುದು.

'ವೈಕುಂಠಃ ಪುರುಷಃ ಪ್ರಾಣಃ' ಎಂಬ ಸಹಸ್ರನಾಮದಲ್ಲಿ ಕೊಂಡಾಡುವ ಮಹಾವಿಷ್ಣುವಿನ ಪ್ರೀತಿಗಾಗಿಯೇ ನಡೆಸಲಾಗುವ ಈ ದಿನದ ಕಾರ್ಯಕ್ರಮವು 'ವೈಕುಂಠ'ಸಮಾರಾಧನೆ ಎಂದೇ ಪ್ರಸಿದ್ಧವಾಗಿದೆ. ಪಿತೃವು ವೈಕುಂಠಕ್ಕೆ ಹೋಗುವನೆಂದು ಸರ್ವಥಾ ತಿಳಿಯಬಾರದು. ಈ

Scanned by CamScanner

ಸಮಾರಾಧನೆಯಿಂದ ಯಜಮಾನನಿಗೂ ಕುಟುಂಬಕ್ಕೂ ಶ್ರೇಯಸ್ಸಾಗುವುದು. ಇಷ್ಟಮಿತ್ರರನ್ನು ಆಹ್ವಾನಿಸಿ ನಡೆಸುವ ಈ ಆರಾಧನೆಯನ್ನು ಹದಿನಾಲ್ಕನೇ ದಿವಸ ಆಚರಿಸುವುದಿದೆ.)

ವರ್ಷಪರ್ಯಂತ ಕರ್ತೃನಿಯಮ–

ಅನ್ಯಶ್ರಾದ್ಧಂ ಪರಾನ್ನಂ ಚ ಗಂಧಮಾಲ್ಯಂ ಚ ಮೈಥುನಮ್ ।
ವರ್ಜಯೇತ್ ಗುರುಪಾತೇ ತು ಯಾವತ್ಪೂರ್ಣೋ ನ ವತ್ಸರಃ ॥

ಮಾತಾಪಿತ್ರೋರ್ಮೃತೇಃ ಪ್ರಾಪ್ತೌ ವತ್ಸರಂ ಕೇಶಧಾರಣಮ್ ।
ವಾಪಯೇದ್ಯದಿ ಮೂಢಾತ್ಮಾ ರೌರವಂ ನರಕಂ ವ್ರಜೇತ್ ॥ [ಸ್ಮೃತಿಸಾರ]

ಕರ್ತೃವು ಒಂದು ವರ್ಷ ತನಕ ಪರಾನ್ನಭೋಜನ, ಅನ್ಯರ ಶ್ರಾದ್ಧ, ಗಂಧಮಾಲ್ಯಾದಿ ಅಲಂಕಾರ, ಅಭ್ಯಂಗಸ್ನಾನ, ಸ್ತ್ರೀಸಂಗ, ಮಹಾದಾನಾದಿ ಕಾಮ್ಯಕರ್ಮಗಳು, ತೀರ್ಥಯಾತ್ರಾ ಕ್ಷೇತ್ರವಿಧಿ, ವಿವಾಹಾದಿ ಸಂಬಂಧ, ನಾಂದೀಶ್ರಾದ್ಧ ಹಾಗೂ ಇತರ ನೈಮಿತ್ತಿಕ ಕರ್ಮಗಳನ್ನು ನಡೆಸುವಂತಿಲ್ಲ. ಕ್ಷೌರಮಾಡುವಂತಿಲ್ಲ. ಮೂಢತನದಿಂದ ಮೇಲೆ ತಿಳಿಸಿದ ನಿಯಮಗಳನ್ನು ಪಾಲಿಸದೆ ಇದ್ದರೆ ಮಹಾ ಅನರ್ಥಫಲವಿದೆಯೆಂದು ತಿಳಿಸಿರುತ್ತಾರೆ.

ಪ್ರಮೀತೌ ಪಿತರೌ ಯಸ್ಯ ದೇಹಸ್ತಸ್ಯಾಶುಚಿರ್ಭವೇತ್ ।
ನ ದೈವಂ ನಾಪಿ ವಾ ಪಿತ್ರ್ಯಂ ಯಾವತ್ಪೂರ್ಣೋ ನ ವತ್ಸರಃ ॥ [ಸ್ಮೃತಿಸಂಗ್ರಹ]

ಶವದಹನ ಪ್ರೇತಕೃತ್ಯಗಳಿಂದ ಕರ್ತೃವಿನ ದೇಹ ಅಶುಚಿಯಾಗಿರುವುದರಿಂದ ವರ್ಷ ತನಕ ನಿಯಮದಲ್ಲಿದ್ದು ಪಿತೃಸಂಬಂಧ ಕರ್ಮ ಹಾಗೂ ಸಚ್ಛಾಸ್ತ್ರಾಧ್ಯಯನ, ವೇದಪಾರಾಯಣಾದಿಗಳನ್ನು ಮಾಡುತ್ತಿರಬೇಕು. ಅನ್ಯರ ಶ್ರಾದ್ಧ ವರ್ಜ್ಯವೆಂದರೆ–

ಪತ್ನೀ ಪುತ್ರಸ್ತಥಾ ಪೌತ್ರೋ ಭ್ರಾತಾ ತತ್ತನಯಃ ಸ್ನುಷಾ ।
ಮಾತಾ ಪಿತೃವ್ಯಶ್ಚೈತೇಷಾಂ ಮಹಾಗುರುನಿಪಾತನೇ ।
ಕುರ್ಯಾತ್ಸಪಿಂಡನಂ ಶ್ರಾದ್ಧಂ ನಾನ್ಯೇಷಾಂ ತು ಕದಾಚನ ॥ [ಸ್ಮೃತಿಸಂಗ್ರಹ]

Scanned by CamScanner

ಹೆಂಡತಿ, ಮಗ, ಮೊಮ್ಮಗ (ಮಗನ ಮಗ), ಸಹೋದರ, ಅವನ ಮಗ, ಸೊಸೆ, ತಾಯಿ, ಚಿಕ್ಕಪ್ಪ, ದೊಡ್ಡಪ್ಪ – ಇವರಿಷ್ಟು ಮಂದಿ ಹೊರತು ಉಳಿದವರ ಸಪಿಂಡೀಕರಣಶ್ರಾದ್ಧವನ್ನು ಮಾಡಬಾರದು.

ಷೋಡಶಮಾಸಿಕವಿಚಾರ–

ಕೃತೇ ಸಪಿಂಡೀಕರಣೇ ನರಃ ಸಂವತ್ಸರಾತ್ಪರಮ್ ।
ಪ್ರೇತದೇಹಂ ಪರಿತ್ಯಜ್ಯ ಭೋಗದೇಹಂ ಪ್ರಪದ್ಯತೇ ॥ [ನಿರ್ಣಯಸಿಂಧು]

ತಂದೆಯ ಉತ್ತರಕ್ರಿಯಾದಿಗಳನ್ನು ಪೂರೈಸಿದರೆ ತನ್ನ ಕರ್ತವ್ಯಗಳು ಮುಗಿಯಿತು ಎನ್ನುವಂತಿಲ್ಲ. ಸಪಿಂಡೀಕರಣ ಕರ್ಮದಿಂದ ಪ್ರೇತಶಬ್ದವನ್ನು ಬಿಟ್ಟು ಪಿತೃಶಬ್ದವನ್ನು ಪಡೆದ ಜೀವಿಯು ಭೋಗದೇಹ ಪಡೆಯಲು ಮನುಷ್ಯಮಾನ ಪ್ರಕಾರ ಒಂದು ವರುಷ ಬೇಕಾಗುವುದು. ಒಂದು ವರ್ಷ ತನಕ ಆ ಜೀವಿಯು ಪ್ರೇತ(ಪಯಣಿಗ)ನಾಗಿರುತ್ತಾನೆ. ಆ ಪ್ರಯಾಣದಲ್ಲಿ ಹದಿನಾರು ಭವನಗಳನ್ನು ಹಾದುಹೋಗಬೇಕು.

೧. ಸೌಮ್ಯಪುರ
೨. ಸೌರಿಪುರ
೩. ನಗೇಂದ್ರಭವನ
೪. ಗಂಧರ್ವಪುರ
೫. ಶೈಲಾಗಮಪುರ
೬. ಕ್ರೌಂಚಪುರ
೭. ಕ್ರೂರಪುರ
೮. ವಿಚಿತ್ರಭವನ
೯. ಬಹ್ವಾಪದ
೧೦. ದುಃಖಪ್ರದ
೧೧. ನಾನಾಕ್ರಂದಪುರ
೧೨. ಸುತಪ್ತಭವನ
೧೩. ರೌದ್ರಪುರ
೧೪. ಪಯೋವರ್ಷಣ
೧೫. ಶೀತಾಢ್ಯಪುರ
೧೬. ಬಹುಭೀತಿಧರ್ಮಭವನ

ಈ ರೀತಿ ಗರುಡಪುರಾಣದಲ್ಲಿ ತಿಳಿಸಿದಂತೆ ಹದಿನಾರು ಸ್ಥಾನಗಳನ್ನು ಹೊಂದುವ ಆ ಜೀವಿಯು ತಾನು ಜೀವನದಲ್ಲಿ ಮಾಡಿದ ಶುಭಕರ್ಮಗಳ ಫಲಾನುಭವದೊಂದಿಗೆ ಮಗನು ನಡೆಸುವ ಮಾಸಿಕಶ್ರಾದ್ಧ–ದಾನಗಳ ಫಲವನ್ನು ಅನುಭವಿಸುತ್ತಾ ಪಯಣಿಸುವನು. ಹದಿನಾರು ಸ್ಥಾನಗಳೂ ಅತಿಭಯಂಕರವಾಗಿದ್ದು ಅಲ್ಲಿ ಆ ಜೀವಿಗೆ ಆಗುವ ಕ್ಲೇಶವು – ಅತ್ಯಂತ ಬೇಸಗೆಯ ದಿನದಲ್ಲಿ ಮರುಳುಗಾಡಿನಲ್ಲಿ ಸಂಚರಿಸುವ ಪ್ರಯಾಣಿಕನಿಗೆ ಆಗುವ ಅನುಭವಕ್ಕಿಂತ ಸಾವಿರಪಾಲು ಕಠಿಣವಾಗಿದೆ ಎಂದು ಪುರಾಣವಾಕ್ಯವಿದೆ. ಹಾಹಾಕಾರದಿಂದ ಪಯಣಿಸುವ ಆ ಜೀವಿಗೆ 'ಗಚ್ಛಂತಮನುಗಚ್ಛಂತಿ ಕೃತಂ ಕರ್ಮ ಶುಭಾಶುಭಮ್'' ಎಂಬಂತೆ ತನ್ನ ಸತ್ಕರ್ಮದ ಫಲವೇ ಸಂಗಾತಿಯಾಗಬಲ್ಲುದು. ಜೊತೆಗೆ ಮಗನು ಶ್ರದ್ಧೆಯಿಂದ ಆಯಾಯ ದಿನಗಳಲ್ಲಿ ನೀಡುವ ಅನ್ನೋದಕಾದಿಗಳೂ ಪುಷ್ಟಿನೀಡಬಲ್ಲವು.

Scanned by CamScanner

ದ್ವಾದಶಾಹಃ ಪ್ರಭೃತ್ಯಷ್ಟಾದಶಾಹೇಷ್ವಾದ್ಯಮಾಸಿಕಮ್ ।
ಸಪ್ತತ್ರಿಂಶದ್ದಿನಾದೂರ್ಧ್ವಂ ತ್ರ್ಯಹಸ್ಸು ಹ್ಯೂನಮಾಸಿಕಮ್ ॥

ಚತ್ವಾರಿಂಶದ್ದಿನಾದೂರ್ಧ್ವಂ ಪಂಚಾಹಸ್ಸು ತ್ರಿಪಕ್ಷಕಮ್ ।
ತಥಾ ದಶಸು ಷಾಣ್ಮಾಸಂ ಸಪ್ತತ್ಯಧಿಶತಾತ್ಪರಮ್ ॥

ಊರ್ಧ್ವಂ ಪಂಚದಶಾಹಸ್ಸು ಚತ್ವಾರಿಂಶಚ್ಛತತ್ರಯಾತ್ ।
ಊನಾಬ್ದಿಕಂ ಪ್ರಕುರ್ವೀತ ಮೃತೇಽಹ್ನಿ ಪುನರಾಬ್ದಿಕಮ್ ॥ [ವಸಿಷ್ಠ]

ಹನ್ನೆರಡು ದಿನದಿಂದ ಹದಿನೆಂಟನೇ ದಿನಗಳೊಳಗೆ ಆದ್ಯಮಾಸಿಕ, ಇಪ್ಪತ್ತೇಳನೇ ದಿನದಿಂದ ಇಪ್ಪತ್ತೊಂಬತ್ತರೊಳಗೆ ಊನಮಾಸಿಕ, ಎರಡನೇ ತಿಂಗಳಲ್ಲಿ ನಲ್ವತ್ತೊಂದನೇ ದಿನದಿಂದ ನಲ್ವತ್ತೈದರೊಳಗೆ ತ್ರೈಪಾಕ್ಷಿಕ, ನೂರ ಎಪ್ಪತ್ತೊಂದನೇ ದಿನದಿಂದ ನೂರ ಎಂಬತ್ತರೊಳಗಿನ ದಿನಗಳಲ್ಲಿ ಊನಷಾಣ್ಮಾಸಿಕ, ಮುನ್ನೂರ ನಲ್ವತ್ತೊಂದರಿಂದ ಮುನ್ನೂರ ಐವತ್ತೈದರೊಳಗೆ ಊನಾಬ್ದಿಕ. ಪ್ರತಿ ತಿಂಗಳ ಮೃತತಿಥಿಗಳಲ್ಲಿ ಒಂದೊಂದರಂತೆ ಹನ್ನೊಂದು. ಹೀಗೆ ಹದಿನಾರು ಮಾಸಿಕಗಳು; ಇವುಗಳಲ್ಲಿ ಹನ್ನೊಂದರಂದು ಏಕೋದ್ದಿಷ್ಟವಿಧಿಯಂತೆ ಪ್ರೇತಶಬ್ದದಿಂದ ಆದ್ಯಮಾಸಿಕಶ್ರಾದ್ಧ ನಡೆಸಿರುವುದರಿಂದ ಪುನಃ ಪಿತೃಶಬ್ದವಾಚನಪೂರ್ವಕ ಪಾರ್ವಣವಿಧಿಯಂತೆ ಆದ್ಯಮಾಸಿಕವೆಂದು ತಿಳಿಸಲಾಗಿದೆ. ಅಧಿಕ ಮಾಸಗಳು ಬಂದಾಗ ಎರಡಾವರ್ತಿ ಶ್ರಾದ್ಧ ಅನಿವಾರ್ಯ. ಹಾಗೂ ದೋಷವಲ್ಲ. ಸೌರಮಾನ ನಿಯಮದವರು ಬೃಹದಾಶ್ವಲಾಯನಾಚಾರ್ಯರ ಮತದ ಪ್ರಕಾರ–

ಏಕವಿಂಶೇ ಭವೇದಾದ್ಯಂ ಸಪ್ತವಿಂಶೇ ತದೂನಕಮ್ ।
ಕವಿಃ ಕಥಯ ತನ್ವಂಗೀ ಪತಂಗಃ ಪಿತೃಸಂಗಮಃ ॥ [ಬೃಹದಾಶ್ವಲಾಯನಾಚಾರ್ಯ]

ಮರಣಾತ್ ಇಪ್ಪತ್ತೊಂದನೇ ದಿನ ಆದ್ಯಮಾಸಿಕ. ಇಪ್ಪತ್ತೇಳನೇ ದಿನ ಊನಮಾಸಿಕ, ನಲ್ವತ್ತೊಂದನೇ ದಿನ ತ್ರೈಪಾಕ್ಷಿಕ, ನೂರ ಎಪ್ಪತ್ತೊಂದನೇ ದಿನ ಊನ ಷಾಣ್ಮಾಸಿಕ, ಮುನ್ನೂರ ನಲ್ವತ್ತಾರನೇ ದಿನ ಊನಾಬ್ದಿಕ, ಮುನ್ನೂರ ಅರುವತ್ತೊಂದನೇ ದಿನ ಪತಂಗಮಾಸಿಕ–

Scanned by CamScanner

ಹೀಗೆ ಆರು ಮಾಸಿಕಶ್ರಾದ್ಧಗಳೂ ಪ್ರತಿ ತಿಂಗಳ ತಿಥಿಗಳಲ್ಲಿ ಹತ್ತು ಮಾಸಿಕಗಳೆಂದೂ – ಹೀಗೆ ಹದಿನಾರು ಮಾಸಿಕಶ್ರಾದ್ಧಗಳು ಉತ್ತಮ ಷೋಡಶಮಾಸಿಕಗಳೆಂದು ಕರೆಯಲ್ಪಡುತ್ತವೆ. ಮಾಸಿಕದ ದಿನಗಳಲ್ಲಿ ಆಶೌಚಾದಿಗಳು ಬಂದರೆ ಸೂತಕನಿವೃತ್ತಿಯ ದಿವಸ ಅಥವಾ ಮುಂದಿನ ಮಾಸಿಕದ ಜೊತೆಗೆ ಆಚರಿಸಬಹುದು. ಅಥವಾ ವಸಿಷ್ಠವಚನದ ಪ್ರಕಾರ ಆ ಮಾಸಿಕಗಳ ವಿಹಿತ ದಿನಗಳ ವ್ಯಾಪ್ತಿಯೊಳಗೂ ಆಚರಿಸಬಹುದು. ಉದ್ಯೋಗನಿಮಿತ್ತ ಪರವೂರಿನಲ್ಲಿರುವವರು ಪ್ರಾರಂಭದಲ್ಲಿ ಹದಿನಾರು ಮಾಸಿಕಗಳನ್ನು ಆಚರಿಸುವುದು ರೂಢಿಯಲ್ಲಿದೆ. ಇದು ಸಾಮಾನ್ಯ ಪಕ್ಷವೆನ್ನಬಹುದು. ಒಂದು ವೇಳೆ ಹಾಗಿದ್ದರೂ ೪೧, ೧೭೧, ೩೪೬, ೩೬೧ ಈ ನಾಲ್ಕು ಮಾಸಿಕಗಳನ್ನು ಆಯಾಯ ದಿವಸಗಳಲ್ಲೇ ಆಚರಿಸುವುದೇ ಉತ್ತಮಪಕ್ಷ.

ಶುಭಂ ಕರ್ಮ ಚ ಕುರ್ವೀತ ಮಾಸಿಕಾನ್ಯಪಕೃಷ್ಯ ಹಿ ।
ಸಮಾಪ್ಯಾಪಿ ಪುನಃ ಕುರ್ಯಾತ್ಪಿತ್ರೋಃ ಸಂವತ್ಸರಂ ತತಃ ॥

ಮೃತಸ್ಯ ತೃಪ್ತಯೇ ಕುರ್ಯಾದ್ದ್ವಿಸ್ತ್ರಿರಾವೃತ್ತಿಭೇದತಃ ।
ದ್ವಿಸ್ತ್ರಿರಾವೃತ್ತಿದೋಷೋಽತ್ರ ನಾಸ್ತಿ ಮಾಸಿಕಕರ್ಮಣಿ ॥ [ಸ್ಮೃತಿಸಂಗ್ರಹ]

ಪ್ರಾಪ್ತೇಽವಶ್ಯೇ ಮಾಸಿಕಂ ಕರ್ಮ ಚೇಷ್ಟಂ ಕುರ್ಯಾತ್ಪೂರ್ವಂ ಶೋಭನೇ ಶೋಭನಾತ್ತು ।
ಪಶ್ಚಾತ್ಪಿತ್ರೋರೇವ ಶೇಷಾಣಿ ಕುರ್ಯಾನ್ಮಾಸಿ ಶ್ರಾದ್ಧಾನ್ಯಬ್ದಪೂರ್ತೇರ್ನ ಚಾನ್ಯಃ ॥ [ವೈದ್ಯನಾಥೀಯ]

ಒಂದು ವರ್ಷದೊಳಗೆ ಶುಭಮಂಗಲ ಕಾರ್ಯಗಳು ಅನಿವಾರ್ಯವಾಗಿ ಒದಗಿದರೆ ಮುಂದಿನ ಮಾಸಿಕಶ್ರಾದ್ಧಗಳನ್ನು ಅಪಕರ್ಷಣ ವಿಧಾನದಂತೆ ಶುಭಕರ್ಮನಿಮಿತ್ತ ಆಚರಿಸುವ ನಾಂದೀಶ್ರಾದ್ಧದ ಪೂರ್ವದಿನ ನಡೆಸಿ ಮಂಗಲಕಾರ್ಯ ಮುಗಿಸಿ ಪುನಃ ಉಳಿದ ಮಾಸಿಕಶ್ರಾದ್ಧಗಳನ್ನು ಯಥಾಕಾಲದಲ್ಲಿ ಆಚರಿಸಬೇಕು. ಶ್ರಾದ್ಧಗಳು ಎರಡು ಮೂರು ಆವೃತ್ತಿಯಾದರೂ ದೋಷವಾಗುವುದಿಲ್ಲ. ಶುಭಮಂಗಲ ಕಾರ್ಯಗಳೆಂದರೆ–

ವ್ರತಸೀಮಂತಚೌಲೇಷು ವಿವಾಹೇ ಚ ದ್ವಿತೀಯಕೇ ।
ಅಪಕೃಷ್ಯ ತದಾ ಕುರ್ಯಾನ್ಮಾಸಿಕಾನಿ ತಥೈವ ಚ ॥ [ಶಾಕಟಾಯನ]

Scanned by CamScanner

ಕಾಲಕ್ಕೆ ಸರಿಯಾಗಿ ಆಚರಿಸಬೇಕಾಗಿರುವ ಕೆಲವು ಸಂಸ್ಕಾರಗಳು ಉಪನಯನ, ಸೀಮಂತ, ಚೂಡಾಕರ್ಮ, ವಿಧುರನ ದ್ವಿತೀಯವಿವಾಹ– ಇಂತಹ ಸಂದರ್ಭಗಳಿಗೆ ಮಾತ್ರ ಅಪಕರ್ಷಣವಿಧಾನದ ಮಾಸಿಕಗಳೆಂಬುದು ಗಮನಾರ್ಹ. ಕನ್ಯಾದಾನ ಮಾಡಬಹುದೆಂದೂ ಹಿರಿಯರ ವಚನವಿದೆ. (ಮಾತಾಪಿತೃಗಳನ್ನು ಹೊರತುಪಡಿಸಿ ಆತ್ಮೀಯರ ಮಾಸಿಕಗಳನ್ನು ಅಪಕರ್ಷಣರೀತ್ಯಾ ನಡೆಸಿದ ಅನಂತರ ಪುನಃ ಮಾಡುವ ಅಗತ್ಯ ಇಲ್ಲವೆಂದೂ ವಚನವಿದೆ.)

ಪ್ರತಿ ತಿಂಗಳ ಮಾಸಿಕಶ್ರಾದ್ಧಗಳನ್ನು ಪಾರ್ವಣವಿಧಿಯಂತೆ ಬ್ರಾಹ್ಮಣಾರಾಧನೆ(ಕ್ಷಣ)ಪೂರ್ವಕವೂ ಆಚರಿಸಬಹುದು. ಕಾಲಮಾನರೀತ್ಯಾ ಚಟಕ ವಿಧಾನದಿಂದಲೂ ಆಚರಿಸಬಹುದು. ಶ್ರಾದ್ಧದಲ್ಲಿ 'ಶ್ರದ್ಧೆ–ಶೌಚ–ಸಹನೆ–ನಿಧಾನ' (ಅವಸರ ಮಾಡದಿರುವಿಕೆ) –ಇವು ನಾಲ್ಕು ಬಹಳ ಮುಖ್ಯವಾಗಿವೆ.

ತಿಲತರ್ಪಣ ಮತ್ತು ವರ್ಷಾಂತಕರ್ತವ್ಯವಿಚಾರ –

ಶ್ರಾದ್ಧದಲ್ಲಿ ಪಿಂಡದಾನದಷ್ಟೇ ಮಹತ್ತ್ವವುಳ್ಳದ್ದು ತಿಲತರ್ಪಣ–

ಪೂರ್ವಂ ತಿಲೋದಕಂ ಕೃತ್ವಾ ಆಮಶ್ರಾದ್ಧಂ ತು ಕಾರಯೇತ್ ।
ಪ್ರತ್ಯಬ್ದೇ ನ ಭವೇತ್ಪೂರ್ವಂ ಪರೇಽಹನಿ ತಿಲೋದಕಮ್ ॥ [ಗರ್ಗಃ]

ದರ್ಶಾದಿ ಕೆಲವು ಶ್ರಾದ್ಧಗಳಲ್ಲಿ ಮೊದಲು ತಿಲತರ್ಪಣ ಕೊಟ್ಟು ಬಳಿಕ ಶ್ರಾದ್ಧ ಮಾಡಬೇಕು. ವಾರ್ಷಿಕಶ್ರಾದ್ಧಾಂಗ ತಿಲತರ್ಪಣವನ್ನು ಮರುದಿನ ಕೊಡಬೇಕೆಂದಿದೆ.

ವೃದ್ಧಿಶ್ರಾದ್ಧೇ ಸಪಿಂಡ್ಯಾಂ ಚ ಪ್ರೇತಶ್ರಾದ್ಧೇಽನುಮಾಸಿಕೇ ।
ಸಂವತ್ಸರವಿಮೋಕೇ ಚ ನ ಕುರ್ಯಾತ್ತಿಲತರ್ಪಣಮ್ ॥ [ಬೃಹನ್ನಾರದೀಯೇ]

ವೃದ್ಧಿಶ್ರಾದ್ಧ, ಸಪಿಂಡೀಕರಣ, ಪ್ರೇತನಾಮೋಚ್ಚಾರಣಪೂರ್ವಕ ದಶಾಹಶ್ರಾದ್ಧ, ಸಪಿಂಡೀಕರಣವಾದ ಬಳಿಕ ವರ್ಷಪರ್ಯಂತ ಆಚರಿಸುವ

Scanned by CamScanner

ಷೋಡಶಮಾಸಿಕಶ್ರಾದ್ಧ, ವರ್ಷಾಂತ್ಯದಿನದ ವಿಮೋಕಶ್ರಾದ್ಧ – ಇವುಗಳಲ್ಲಿ ತಿಲತರ್ಪಣ ಕೊಡಬಾರದು. ವರ್ಷಾಂತ್ಯದ ಶ್ರಾದ್ಧಕ್ಕೆ ವಿಮೋಕ್ಷಶ್ರಾದ್ಧವೆಂದೂ ರೂಢಿಯಿದೆ. ಈ ದಿನ ಶ್ರೋತ್ರಿಯವಿಪ್ರರಿಗೆ ಆಹ್ವಾನ ಕೊಟ್ಟು ಪಾರ್ವಣವಿಧಿಯಂತೆ ಶ್ರಾದ್ಧ ಮಾಡಬೇಕು.

ವಿಪ್ರರ ಭೋಜನ ಹಾಗೂ ಪಿಂಡದಾನ ಮುಗಿಸಿ ಯಜಮಾನನು ಶುಭಕರ್ಮಾಧಿಕಾರಸಿದ್ಧಿಗಾಗಿ ಓಕುಳಿ ಆರತಿ ಮಾಡಿಸಿಕೊಂಡು ನೂತನ ವಸ್ತ್ರಾದಿಗಳನ್ನು ಧರಿಸಿ ಆಚಾರ್ಯಪೂಜೆ ಮಾಡಿ ಸ್ವಸ್ತಿವಾಚನ ಮಂತ್ರಾಕ್ಷತೆ ಸ್ವೀಕಾರ ಮಾಡುವುದು ವಾಡಿಕೆಯಲ್ಲಿದೆ. ೪೭

ಬ್ರಹ್ಮಚಾರಿಮರಣವಿಚಾರ–

ಸ್ನಾತಕೋ ಬ್ರಹ್ಮಚಾರೀ ಚ ನಿಧನಂ ಪ್ರಾಪ್ನುಯಾದ್ಯದಿ ।
ಸಂಯೋಜ್ಯ ಚಾರ್ಕವಿಧಿನಾ ಸಂಯೋಜ್ಯೌ ತೌ ತತಃ ಪರಮ್ ॥ [ಶೌನಕಃ]

ಶೌನಕೀಯಮತದಂತೆ ಸ್ನಾತಕವ್ರತಿಯೂ ಬ್ರಹ್ಮಚಾರಿಯೂ ಮರಣಪಟ್ಟರೆ ಪ್ರಯೋಗದಲ್ಲಿ ತಿಳಿಸಿದ ಪ್ರಕಾರ ವ್ರತವಿಸರ್ಗವಿಧಿ, ಅರ್ಕಶಾಖಾವಿವಾಹಪೂರ್ವಕ ಶವದಹನಗೊಳಿಸಿ ದುರ್ಗತಿಪರಿಹಾರಕ್ಕಾಗಿ ಕೃಚ್ಛ್ರ, ನಾರಾಯಣಬಲಿ, ಬ್ರಹ್ಮಚಾರಿಗಳ ಆರಾಧನೆಗಳನ್ನು ಮಾಡಬೇಕು ಎಂದು ತಿಳಿದುಬರುವುದು. ಹನ್ನೆರಡು ವಯಸ್ಸಿನೊಳಗಿನ ಬ್ರಹ್ಮಚಾರಿ ಮರಣಪಟ್ಟರೆ ವ್ರತವಿಸರ್ಗವಿಧಿ ಮಾತ್ರವೆಂದೂ ಅನಂತರ ವಿವಾಹವಾಗದೆ ಮೃತಿ ಪಟ್ಟರೆ ಅರ್ಕವಿವಾಹಪದ್ಧತಿಸಹಿತವೆಂದೂ ಬಲ್ಲವರ ಅಭಿಮತ.

ಆದರೂ ಸ್ಮೃತ್ಯಂತರವಾಕ್ಯದಂತೆ–

ಅಪೂರ್ಣದ್ವಾದಶಾಬ್ದಾನಾಂ ಮೃತಾನಾಂ ಬ್ರಹ್ಮಚಾರಿಣಾಮ್ ।
ದಾಹಾದಿ ಷೋಡಮಾಸಾಂತಂ ನಿರ್ವರ್ತ್ಯೈವ ಯಥಾವಿಧಿ ॥

ದ್ವಾದಶೇಽಹನಿ ಸಂಪ್ರಾಪ್ತೇ ನೈವ ಕುರ್ಯಾತ್ಸಪಿಂಡನಮ್ ।
ನಾರಾಯಣಂ ಸಮುದ್ದಿಶ್ಯ ವಿಪ್ರಾನಷ್ಟೌ ತು ಭೋಜಯೇತ್ ।
ಏಕೋದ್ದಿಷ್ಟವಿಧಾನೇನ ಶ್ರಾದ್ಧಂ ವಾ ಕಾರಯೇದ್ದ್ವಿಜಃ ॥ [ವೈದ್ಯನಾಥೀಯ]

Scanned by CamScanner

ಹನ್ನೆರಡು ವಯಸ್ಸು ಪೂರ್ಣವಾಗದ ಬ್ರಹ್ಮಚಾರಿಯು ಮರಣಹೊಂದಿದರೆ ದಹನಾದಿ ಕ್ರಿಯೆಗಳನ್ನು ಮೊದಲ್ಗೊಂಡು ದಶಾಹ ತನಕ ಗಾತ್ರ(ನಿತ್ಯ)ವಿಧಿಗಳನ್ನೂ ಹನ್ನೊಂದನೇ ದಿವಸ ಏಕೋದ್ದಿಷ್ಟ ಹಾಗೂ ಷೋಡಶಮಾಸಿಕಶ್ರಾದ್ಧವನ್ನೂ ಮಾಡಿ, ಹನ್ನೆರಡನೇ ದಿವಸ ನಾರಾಯಣಬಲಿಯನ್ನು ಮಾಡಿ, ಎಂಟು ಮಂದಿ ವಿಪ್ರರನ್ನು ಆರಾಧಿಸಿ, ಮೃತಜೀವಿಯನ್ನು ಕುರಿತು ಏಕೋದ್ದಿಷ್ಟವಿಧಿಯಂತೆ ಶ್ರಾದ್ಧವನ್ನು ಮಾಡಬೇಕು. ಅರ್ಕವಿವಾಹವಿಧಿಯನ್ನಾಗಲಿ, ಸಪಿಂಡೀಕರಣವನ್ನಾಗಲಿ, ಪಿತೃವರ್ಗದೊಂದಿಗೆ ಪಿಂಡಸಂಯೋಜನೆ ವಿಧಾನವನ್ನಾಗಲಿ ಸ್ಪಷ್ಟವಾಗಿ ಉಲ್ಲೇಖಿಸಿಲ್ಲ.

ಪತ್ನೀಭ್ರಾತೃಸುತಾದೀನಾಂ ಸಪಿಂಡೀಕರಣಾತ್ಪರಮ್ ।
ಏಕೋದ್ದಿಷ್ಟವಿಧಾನೇನ ಮಾಸಿಕಾನಾಂ ಪುನಃ ಕ್ರಿಯಾ ॥ [ವೈದ್ಯನಾಥೀಯ]

ಕರ್ತೃವು ತನ್ನ ಪತ್ನಿ, ತಮ್ಮ, ಸುತ, ಭಗಿನೀ ಮುಂತಾದವರಿಗೆ ಸಪಿಂಡೀಕರಣವಾದ ಮೇಲೆ ಏಕೋದ್ದಿಷ್ಟವಿಧಾನದಿಂದ ಮಾಸಿಕಾದಿ ಶ್ರಾದ್ಧಗಳನ್ನು ಮಾಡುವಂತೆ ತಿಳಿಸಲಾಗಿದೆ. ಪಾರ್ವಣವಿಧಿಯಿಂದ ಶ್ರಾದ್ಧ ಮಾಡಲು ಸ್ಪಷ್ಟೋಕ್ತಿ ಇಲ್ಲ.

ಏಕೋದ್ದಿಷ್ಟಂ ಯತ್ರಯತ್ರ ಸಪಿಂಡೀಕರಣಾತ್ಪರಮ್ ।
ದೈವಯುಕ್ತಂ ತು ತತ್ಕಾರ್ಯಂ ದೈವಹೀನಂ ನ ತದ್ಭವೇತ್ ॥ [ವೈದ್ಯನಾಥೀಯ]

ಸಪಿಂಡೀಕರಣದ ಬಳಿಕ ಏಕೋದ್ದಿಷ್ಟವಿಧಿಯಂತೆ ಶ್ರಾದ್ಧವಾದರೂ ವಿಶ್ವೇದೇವಪೂರ್ವಕವಾಗಿಯೇ ಮಾಡಬೇಕು ಎಂಬುದು ಗಮನೀಯ.

ನಾರಾಯಣಬಲಿವಿಚಾರ –

ನಾರಾಯಣಬಲಿ ಮಾಡುವ ಉದ್ದೇಶ ಕಾಲನಿಯಮಗಳು ಬಹಳವಾಗಿವೆ. ಬ್ರಹ್ಮಚಾರಿಯೂ ಗರ್ಭಿಣಿಸ್ತ್ರೀಯೂ ಮೃತರಾದರೂ ಇನ್ನು ದುರ್ಮರಣವಾದವರ ಬಗ್ಗೆಯೂ ಶವದಹನಕ್ಕಿಂತ ಮೊದಲೇ ನಾರಾಯಣಬಲಿವಿಧಿಯನ್ನು ಮಾಡಬೇಕು. ಬುದ್ಧಿಪೂರ್ವಕ ಆತ್ಮಹತ್ಯೆ, ವಿಷಜಂತುಗಳಿಂದ, ಶಸ್ತ್ರಾದಿಗಳಿಂದ, ವಾಹನಾಪಘಾತಗಳಿಂದ ಅಕಾಲಗಳಲ್ಲಿ ಮರಣಪಟ್ಟರೆ ದುರ್ಮರಣವೆನಿಸುವುದು. ಅಂತಹ ಸಂದರ್ಭದಲ್ಲಿ ಮೃತಜೀವಿಗೆ ದುರ್ಗತಿಯಾಗದಂತೆಯೂ ಪ್ರೇತತ್ವನಿವೃತ್ತಿಯಾಗುವಂತೆಯೂ ನಾರಾಯಣಬಲಿ ಮಾಡಿ ಶವದಹನ ಮಾಡಬೇಕು. ಪುನಃ ಸಪಿಂಡೀಕರಣವಾದ ಮೇಲೆ ಸದ್ಗತಿಪ್ರಾಪ್ತಿಗಾಗಿ ನಾರಾಯಣಬಲಿಯನ್ನು ನಡೆಸಬೇಕು. ನಾರಾಯಣಬಲಿಪ್ರಯೋಗಗಳಲ್ಲೂ ಪ್ರಭೇದಗಳಿವೆ.

ಗರುಡಪುರಾಣವಾಕ್ಯದಂತೆ ಮರಣಸಂದರ್ಭವನ್ನು ತಿಳಿದು ನಾರಾಯಣಬಲಿ ಅಂಗವಾಗಿ ವಿಷ್ಣು–ಬ್ರಹ್ಮ–ರುದ್ರ–ಯಮ–ಪ್ರೇತ ಹೀಗೆ

Scanned by CamScanner

ಐದು ಪ್ರತಿಮೆಗಳ ಮೂಲಕ ನಾಮಮಂತ್ರಗಳಿಂದ ಪಾದ್ಯಾದಿ ಪೂಜೆಮಾಡಿ ಪುರುಷಸೂಕ್ತ ವಿಷ್ಣುಸೂಕ್ತಗಳಿಂದಲೂ ಆರಾಧಿಸಿ ಬಳಿಕ ಶವದಹನ ಮಾಡಬೇಕು. ಪುನಃ ಸಪಿಂಡೀಕರಣಸಂದರ್ಭದಲ್ಲಿ ಕೇಶವಾದಿ ದ್ವಾದಶನಾಮಗಳಿಂದ ಪಿತೃದೇವತಾಸ್ವರೂಪ ಚಿಂತನೆಯೊಂದಿಗೆ ಪಿಂಡಪ್ರದಾನ ದ್ವಾದಶಮೂರ್ತಿ ಆರಾಧನೆ ಮಾಡುವುದರಿಂದ ಆ ಜೀವಿಯು ವಸ್ವಾದಿ ಪುಣ್ಯಲೋಕ ಪ್ರಾಪ್ತಿದ್ವಾರಾ ಕ್ರಮೇಣ ಸದ್ಗತಿ ಹೊಂದುವುದೆಂದು ಶೌನಕೀಯ ಉಲ್ಲೇಖವಿದೆ.

॥ ಇತಿ ನಾರಾಯಣಬಲಿಃ ॥

ಏಕಾದಶ್ಯಾಂ ಮರಣೇ– [ಕರ್ಮಸಿದ್ಧಾಂತೇ ಪದ್ಮಸಂಹಿತಾಯಾಂ]

ಏಕಾದಶ್ಯಾಂ ತು ಯೋ ಬ್ರಹ್ಮನ್ ಬ್ರಾಹ್ಮಣೋ ಮ್ರಿಯತೇ ಯದಿ ।
ತದಾನೀಂ ಕಾಷ್ಠವದ್ದಗ್ಧ್ವಾ ಪರೇದ್ಯುರ್ಮಂತ್ರತೋ ದಹೇತ್ ॥ ೧ ॥

ಪ್ರೇತಾಹುತಿರ್ನ ಹೋತವ್ಯಾ ನ ಪಿಂಡಂ ನ ತಿಲಾಂಜಲಿಮ್ ।
ಕುರ್ಯಾತ್ಸರ್ವಂ ಪರದಿನೇ ದೋಷಸ್ತತ್ರ ನ ವಿದ್ಯತೇ ॥ ೨ ॥

ಅಸ್ಥಿದಾಹಂ ತತಃ ಕಾರ್ಯಮೌಪಾಸನಪುಳಸ್ಸರಮ್ ।
ಮರಣೇಽಹ್ನಿ ಪ್ರಭೃತ್ಯಂತಂ ಸಂಪ್ರಾಪ್ತೇ ಹರಿವಾಸರೇ ॥ ೩ ॥

ನ ತತ್ರ ವೇದಿಕಾಪೂಜಾ ಕುರ್ಯಾತ್ಪೂರ್ವೇಽಹ್ನಿ ಸಮ್ಮತಾ ।
ಪಿತುರ್ದಶಾಹಮಧ್ಯೇ ತು ಸಂಪ್ರಾಪ್ತೇ ಹರಿವಾಸರೇ ।
ಪಿಂಡದಾನಂ ನ ಕರ್ತವ್ಯಂ ನ ತಿಲೋದಕಸತ್ಕ್ರಿಯಾ ॥ ೪ ॥

Scanned by CamScanner

ಏಕಾದಶೀದಿನದಂದು ಶವದಹನಸಂದರ್ಭ ಒದಗಿದರೆ ಕಟ್ಟಿಗೆಯನ್ನು ಸುಟ್ಟಂತೆ ದಹನ ಮಾಡಬೇಕೆಂಬ ವಿಧಿಯಿದೆ. ಮರಣೋತ್ತರ ಕರ್ಣಸೂಕ್ತವಾಚನ ಮಾಡಿಸಿ ಕರ್ತೃವು ಕೃಚ್ಛ್ರಾಚರಣೆ ಮಾಡಿ ನಾರಾಯಣಸ್ಮರಣೆ ಮಾಡುತ್ತಾ ಶವವನ್ನು ಪ್ರಾಂಗಣದಲ್ಲಿಟ್ಟು ತಣ್ಣೀರಿನಿಂದ ಸ್ನಾನಮಾಡಿಸಿ ಊರ್ಧ್ವಪುಂಡ್ರವನ್ನು ಹಚ್ಚಬೇಕು. ಕರ್ತೃವು ಸ್ನಾನಮಾಡಿ ನೂತನವಸ್ತ್ರ ಧರಿಸಿ ಶವಕ್ಕೆ ನೂತನವಸ್ತ್ರವನ್ನು ಆಚ್ಛಾದಿಸಿ ಪಾದದೇಶದಿಂದ ಚತುರ್ಥಭಾಗವನ್ನು ಉತ್ತರೀಯ(ಕರ್ಮವಸ್ತ್ರ)ವಾಗಿ ತುಂಡರಿಸಿಟ್ಟು ಬಂಧುಗಳೆಲ್ಲಾ ನಮಸ್ಕರಿಸಿ ಶವವನ್ನು ಶ್ಮಶಾನಕ್ಕೆ ಒಯ್ದು ಚಿತೆಯನ್ನು ಸಿದ್ಧಗೊಳಿಸಿ ಲೌಕಿಕಾಗ್ನಿಯಿಂದ ದಹನ ಮಾಡಬೇಕು. ಅನಂತರ ತಿಲಾಂಜಲಿ, ಉದಕಾಂಜಲಿ, ಪಿಂಡದಾನಾದಿ ಕ್ರಿಯೆಗಳನ್ನೂ ಮಾಡುವಂತಿಲ್ಲ. ದಹನಸ್ಥಳಕ್ಕೆ ಹೋದವರು ಸ್ನಾನಮಾಡಿ ಅಗ್ನಿತಾಪ, ಘೃತಧೂಮಾಘ್ರಾಣ ಮಾಡಬೇಕು. ಶವಸ್ಪರ್ಶ ಮಾಡಿದ ಸಪಿಂಡೇತರರು ತಾತ್ಕಾಲಿಕವಾಗಿ ಉಪವೀತವನ್ನು ಬದಲಾಯಿಸಿ ಮರುದಿನ ಕ್ರಮದಂತೆ ಉಪವೀತವನ್ನು ಧರಿಸಬೇಕು. ಮರುದಿನ ಕರ್ತೃವು ಕೃಚ್ಛ್ರ–ವಪನ–ಸ್ನಾನ ಮಾಡಿ ಅಸ್ಥಿಗಳನ್ನು ಜಾಗ್ರತೆಯಾಗಿ ಸಂಗ್ರಹಿಸಿ ತೈಲಲೇಪನ ಉಷ್ಣೋದಕಸೇಚನ ಮಾಡಿ ವಿಧಿಪ್ರಕಾರ ದಹನಾದಿ ತಿಲಾಂಜಲಿ ಪಿಂಡಪ್ರದಾನಗಳನ್ನು ಮಾಡಬೇಕು. ಕ್ರಿಯೆಯಲ್ಲಿ ಪ್ರಥಮ ಹಾಗೂ ದ್ವಿತೀಯದಿನದ ವಿಧಿಗಳನ್ನು ಮಾಡುವುದು.

ಕೃತಚೂಡಸ್ಯ ಮರಣೇ–

ಶಾಸ್ತ್ರರೀತ್ಯಾ ಮಕ್ಕಳಿಗೆ ಒಂದು–ಮೂರು–ಐದನೇ ವಯಸ್ಸಿನಲ್ಲಿ ಚೂಡಾಕರ್ಮವಿಹಿತವೆನಿಸಿದೆ. ಅದರಂತೆ ಚೂಡಾಕರ್ಮ ಆಗಿ ಮರಣಪಟ್ಟರೆ ಸ್ಮೃತಿವಾಕ್ಯ ಹೀಗಿದೆ –

ಮೃತಶ್ಚ ಪಂಚಮಾದೂರ್ಧ್ವಮವ್ರತಃ ಸವ್ರತೋಽಪಿ ವಾ ।
ಪಾಯಸೇನ ಗುಡೇನಾಪಿ ಪಿಂಡಾನ್ ದದ್ಯಾದ್ದಶ ಕ್ರಮಾತ್ ॥

ಏಕಾದಶಂ ದ್ವಾದಶಂ ಚ ವೃಷೋತ್ಸರ್ಗವಿಧಿಂ ವಿನಾ ।
ಮಹಾದಾನವಿಹೀನಂ ಚ ಪೌಗಂಡೇ ಕೃತ್ಯಮಾಚರೇತ್ ॥

ಜೀವಮಾನೇ ಚ ಪಿತರಿ ನ ಪೌಗಂಡೇ ಸಪಿಂಡನಮ್ ।
ಅತಸ್ತಸ್ಯ ದ್ವಾದಶಾಹನ್ಯೇಕೋದ್ದಿಷ್ಟಂ ಸಮಾಚರೇತ್ ॥ [ಗಾರುಡ]

Scanned by CamScanner

ಐದು ವಯಸ್ಸಿನ ಬಳಿಕ ಉಪನಯನ ಆಗಿರಲಿ ಆಗದಿರಲಿ ಪುತ್ರನು ಮರಣಹೊಂದಿದರೆ ದಶಾಹತನಕ ಬೆಲ್ಲಮಿಶ್ರಿತ ಪಾಯಸದಿಂದ ಪಿಂಡಪ್ರದಾನ ಮಾಡುವಂತೆಯೂ ಹನ್ನೊಂದನೇ ದಿವಸ ವೃಷೋತ್ಸರ್ಗ ಮಹಾದಾನಾದಿಗಳನ್ನು ಹೊರತುಪಡಿಸಿ ಏಕೋದ್ದಿಷ್ಟವನ್ನು ಮಾಡಿ ಹನ್ನೆರಡನೇ ದಿವಸ ಏಕೋದ್ದಿಷ್ಟವಿಧಿಯಂತೆ ಶ್ರಾದ್ಧ ಮಾಡುವಂತೆಯೂ ಗಾರುಡವಚನವಿದೆ. ತಂದೆಯು ಬದುಕಿದ್ದಾಗ ಪುತ್ರನು ಮೃತನಾದರೆ ಸಪಿಂಡೀಕರಣ ಮಾಡುವಂತಿಲ್ಲ.

ಅಕ್ಲೃಪ್ತಚೂಡಾ ಯೇ ಬಾಲಾ ಯೇ ಚ ಗರ್ಭಾದ್ವಿನಿಃಸೃತಾಃ ।
ಮೃತಾ ಅನುಪನೀತಾ ಯೇ ಅನೂಢಾ ಅಪಿ ಕನ್ಯಕಾಃ ।
ಯೇ ಮೃತಾಶ್ಚಾಪ್ಯಸಂಸ್ಕಾರಾಸ್ತೇಭ್ಯೋ ಭೂಮೌ ಪ್ರದೀಯತೇ ॥ [ಹಾರೀತಃ]

ಶಾಲೀನಾಂ ಸಕ್ತುಭಿರ್ವಾಪಿ ಪಿಣ್ಯಾಕೈರ್ವಾಪಿ ನಿರ್ವಪೇತ್ ॥ [ವೃದ್ಧಶೌನಕಃ]

ಫಲಮೂಲೈಶ್ಚ ಪಯಸಾ ಶಾಕೇನ ಚ ಗುಡೇನ ಚ ।
ತಿಲಮಿಶ್ರಂ ತು ದರ್ಭೇಷು ಪಿಂಡಂ ದಕ್ಷಿಣತೋ ಹರೇತ್ ॥ [ಶುನಃಪುಚ್ಛಃ]

ಅಪ್ರಾಪ್ತವಯಸ್ಸಿನ ಮಕ್ಕಳೂ, ಪ್ರಾಪ್ತವಯಸ್ಸಿನಲ್ಲೂ ಚೂಡಾಸಂಸ್ಕಾರವಾಗದ ಹಾಗೂ ಉಪನಯನವಾಗದ ಮಕ್ಕಳೂ ಮತ್ತು ವಿವಾಹವಾಗದ ಕನ್ನಿಕೆಯರೂ ಮರಣಪಟ್ಟರೆ ಅಕ್ಕಿಹಿಟ್ಟು ಯಾ ಸಕ್ತುವಿನಿಂದಾಗಲಿ ಫಲ, ಗಡ್ಡೆ, ಹಾಲು, ಬೆಲ್ಲ, ತಿಲಮಿಶ್ರಿತವಾಗಿ ಪಿಂಡವನ್ನು ಭೂಮಿಯಲ್ಲೂ, ಸಂಸ್ಕಾರವಾಗಿದ್ದರೆ ದರ್ಭೆಯ ಮೇಲೂ ದಕ್ಷಿಣಭಾಗದಲ್ಲಿಡಬೇಕೆಂದಿದೆ. ಈ ವಿಷಯದಲ್ಲಿ ಕ್ರಿಯಾವಿಶೇಷಗಳ ವಿವರ ಕಂಡುಬಂದಿಲ್ಲ.

ಪ್ರೌಢಕನ್ಯಾಮರಣೇ –

ಷೋಡಶೇಽಬ್ದೇ ವ್ಯತೀತೇ ತು ಕನ್ಯಾ ಯದಿ ವಿಪದ್ಯತೇ ।
ಅಮಂತ್ರಕಂ ಶವಂ ದಗ್ಧ್ವಾ ನಿತ್ಯಂ ಪಿಂಡೋದಕಕ್ರಿಯಾಃ ॥

ದಶಾಹಾಂತಂ ಕ್ರಿಯಾಂ ಕುರ್ಯಾತ್ ಮಲಿನಂ ಷೋಡಶೀಯಕಮ್ ।
ಪ್ರೇತಮುದ್ದಿಶ್ಯ ರುದ್ರೇಽಹ್ನಿ ಬಲಿಂ ನಾರಾಯಣಾತ್ಮಕಮ್ ॥

ಏಕೋದ್ದಿಷ್ಟಂ ತತಃ ಕುರ್ಯಾತ್ ಶ್ರಾದ್ಧಮಗ್ನೌ ಯಥಾವಿಧಿ ।
ತಿಲಹೋಮಂ ದ್ವಾದಶೇಽಹ್ನಿ ಹೂಯಾತ್ ಕೂಶ್ಮಾಂಡಕೈಸ್ತಥಾ ॥

ಸ್ವಾಮ್ಯಭಾವಾತ್ತದ್ದಿನೇ ತು ನಾರಾಯಣಬಲಿಂ ಚರೇತ್ ।
ಕೇಶವಾದೀನ್ ನಾಮಮಂತ್ರೈರ್ವಿಪ್ರಾನ್ ಸಂತರ್ಪಯೇತ್ತತಃ ।
ಪ್ರೇತಶಬ್ದನಿವೃತ್ತ್ಯರ್ಥಂ ವಾಚಯೇತ್ ಸುಸಮಾಹಿತೈಃ ॥

ಹದಿನಾರು ವರ್ಷ ದಾಟಿದ ಅವಿವಾಹಿತ ಕನ್ಯೆಯು ಮೃತಳಾದಾಗ ನಾರಾಯಣಬಲಿ ಮಾಡಿ ಅಮಂತ್ರಕವಾಗಿ ಕಾಷ್ಠದಂತೆ ದಾಹ ಮಾಡಿ ದಶಾಹಕ್ರಿಯೆಗಳನ್ನು ಪೂರೈಸಿ, ಹನ್ನೊಂದನೆಯ ದಿನದಂದು ನಾರಾಯಣಬಲಿ, ಏಕೋದ್ದಿಷ್ಟಶ್ರಾದ್ಧ ಮಾಡಿ ಹನ್ನೆರಡನೆಯ ದಿನದಂದು ತಿಲಹೋಮ, ಕೂಶ್ಮಾಂಡಹೋಮ ನಾರಾಯಣಬಲಿಪೂರ್ವಕ ದ್ವಾದಶಮೂರ್ತಿ ಆರಾಧನೆ ಮಾಡಿ ವಿಪ್ರೋತ್ತಮರಿಂದ ಪ್ರೇತಶಬ್ದನಿವೃತ್ತಿಯ ಬಗ್ಗೆ ಆಶೀರ್ವಾದವನ್ನು ಪಡೆದರೆ ಅವಳು ಸ್ವಕುಲೋದ್ಧಾರಕಳಾಗುವಳೆಂದು ಪ್ರಮಾಣವಚನವಿದೆ.

ಈ ಪ್ರಮಾಣಕ್ಕೆ ಅನುಸಾರವಾಗಿ, ಅವಿವಾಹಿತ ಮಹಿಳೆಯು ಮೃತಳಾದರೆ ಶವದಹನಕ್ಕಿಂತ ಮೊದಲು ವಿಷ್ಣು, ಬ್ರಹ್ಮ, ಮಹಾದೇವ, ಯಮ, ಪ್ರೇತ ಈ ಐವರ ಆರಾಧನಪೂರ್ವಕ ನಾರಾಯಣಬಲಿ ಮಾಡಿ ದಶಾಹತನಕ ಗಾತ್ರವಿಧಿಕ್ರಿಯಾ, ಧರ್ಮೋದಕ, ಹನ್ನೊಂದನೇ ದಿವಸ ಏಕೋದ್ದಿಷ್ಟಶ್ರಾದ್ಧ ಮಾಡಿ ಅದೇ ದಿನ ಅಥವಾ ಮರುದಿನ ಮಂಡಲದಲ್ಲಿ ಕೇಶವಾದಿ ದ್ವಾದಶನಾಮಗಳಿಂದ ಆರಾಧನರೂಪವಾದ ನಾರಾಯಣಬಲಿಯನ್ನು ಮತ್ತು ಮಂಡಲದ ಹೊರಭಾಗದಲ್ಲಿ ಪ್ರೇತಾರಾಧನೆ ಏಕೋದ್ದಿಷ್ಟ ವಿಧಿಯಂತೆ ನಡೆಸಿ, ಅಗ್ನಿ ಪ್ರತಿಷ್ಠಾಪನಪೂರ್ವಕ ಪುರುಷಸೂಕ್ತ, ವಿಷ್ಣುಸೂಕ್ತಗಳಿಂದ ಪಾಯಸಾಹುತಿ ಕೊಟ್ಟು ಕೇಶವಾದಿ ದ್ವಾದಶ ಪಿಂಡಪ್ರದಾನ, ಪ್ರೇತ ಪಿಂಡದಾನ ಮಾಡಿ ೧೨ ಅಥವಾ ೪ ಆಮಾನ್ನವನ್ನು ಶ್ರೋತ್ರೀಯರಿಗೆ ದಾನ ಕೊಟ್ಟು, ಅವರಿಂದ ಪ್ರೇತಶಬ್ದನಿವೃತ್ತಿವಚನ ಸ್ವೀಕರಿಸಿ, 'ಸ್ವಕುಲಂ ಗಚ್ಛ' ಎಂದು ಪ್ರೇತಪಿಂಡದ

Scanned by CamScanner

ಮೇಲೆ ಅರಳು ಚೆಲ್ಲಿ, ನಾರಾಯಣಪನ್ನ ಸೂಕ್ತಪಠನಪೂರ್ವಕ ಕರ್ಮವನ್ನು ಮುಕ್ತಾಯಗೊಳಿಸಿ ಪಿಂಡಾದಿಗಳನ್ನು ನೀರಿನಲ್ಲಿ ವಿಸರ್ಜಿಸಿ ಸ್ನಾನಮಾಡಿ ಅಮಂಗಲ ನಿವಾರಣೆಗಾಗಿ ಪಂಚಗವ್ಯಪ್ರಾಶನ, ಪುಣ್ಯಾಹವಾಚನ ಮಾಡಬೇಕೆಂದೂ ವಿಹಿತವಾಗಿದೆ.

ಇಷ್ಟು ಕರ್ಮಭಾಗಗಳನ್ನು ಕ್ಷೇತ್ರಗಳಲ್ಲಿ ನಡೆಸುವುದು ರೂಢಿಯಲ್ಲಿದೆ. ಈ ಬಗ್ಗೆ ಹೆಚ್ಚಿನ ವಿವರ ತಿಳಿಯುವುದಿಲ್ಲ.

ರಜಸ್ವಲಾಮರಣವಿಚಾರ–

ರಜಸ್ವಲಾಯಾಃ ಪ್ರೇತಾಯಾಃ ಸಂಸ್ಕಾರಾದೀನಿ ನಾಚರೇತ್ ।
ಊರ್ಧ್ವಂ ತ್ರಿರಾತ್ರಾತ್ ಸ್ನಾತಾಯಾಃ ಶವಧರ್ಮೇಣ ದಾಹಯೇತ್ ॥ [ವೃದ್ಧಶಾತಾತಪಃ]

ರಜಸ್ವಲಾಸ್ತ್ರೀಯು ಮರಣಪಟ್ಟರೆ ಮೂರು ದಿನಗಳ ತನಕ ಸಂಸ್ಕಾರ ಮಾಡುವಂತಿಲ್ಲ. ಶವವನ್ನೂ ಇಡುವಂತಿಲ್ಲ. ಕರ್ತೃವು ಸೂತಕಾಂತ್ಯದಲ್ಲಿ ಗೋದಾನ, ತಿಲಹೋಮ, ನಾರಾಯಣಬಲಿ ಮಾಡುವೆನೆಂದು ಶ್ರೋತ್ರೀಯರ ಮುಂದೆ ಸಂಕಲ್ಪಮಾಡಿ ಪ್ರಯೋಗದಲ್ಲಿ ತಿಳಿಸಿದಂತೆ ಶವಶುದ್ಧಿ ಮಾಡಿ ಕೇವಲ ದಹನ ಮಾಡುವುದು. ನಾಲ್ಕನೇ ದಿನವಾಗಿದ್ದರೆ ಮಂತ್ರಾಗ್ನಿಯಿಂದ ದಹನ ಮಾಡಬಹುದು. ಕ್ರಿಯಾಭಾಗವನ್ನು ಐದನೇ ದಿನದಿಂದ ಪ್ರಾರಂಭಿಸಬೇಕು.

ಗರ್ಭಿಣೀಮರಣವಿಚಾರ–

ಪ್ರವಕ್ಷ್ಯಾಮಿ ಸಮಾಸೇನ ಶೌನಕೋಽಹಂ ದ್ವಿಜನ್ಮನಾಮ್ ।
ಗರ್ಭಿಣೀಮರಣೇ ಪ್ರಾಪ್ತೇ ಗೋಮೂತ್ರೇಣ ಜಲೈಸ್ಸಹ ॥

ಆಪೋ ಹಿ ಷ್ಠಾದಿಭಿರ್ಮಂತ್ರೈಃ ಪ್ರೋಕ್ಷ್ಯ ಭರ್ತಾ ಸಮಾಸ್ಥಿತಃ ।
ಪ್ರೇತಂ ಶ್ಮಶಾನೇ ನೀತ್ವಾಽಥೋಲ್ಲಿಖ್ಯ ಸವ್ಯೋದರಂ ತತಃ ॥

Scanned by CamScanner

ಪುತ್ರಮಾದಾಯ ಜೀವಂಶ್ಚೇತ್ ಸ್ತನಂ ದತ್ವಾ ಸುತಾಯ ತು ।
ಯತ್ನೇಸ್ತೇನಃ ಶಿಶಯ ಇತ್ಯೃಚಾ ಗ್ರಾಮೇ ನಿಧಾಯ ಚ ।

ಉದರಂ ಚಾಪ್ತ್ರಾಂ ಕುರ್ಯಾತ್ತ್ಪೃಷದಾಜ್ಯೇನ ಪೂರ್ಯ ಚ ।
ಸ್ನಾಪ್ಯ ಚಾಚ್ಛಾದ್ಯ ವಾಸೋಭಿಃ ಶವಧರ್ಮೇಣ ದಾಹಯೇತ್ ।
ಪ್ರಮೀತಂ ನಿಖನೇತ್ತಂ ತು ಪ್ರಾಯಶ್ಚಿತ್ತಮತಃ ಪರಮ್ ॥ [ಶೌನಕಃ]

ಮೃತಾ ಗರ್ಭಯುತಾ ನಾರೀ ಷಣ್ಮಾಸಾಭ್ಯಂತರೇ ಯದಿ ।
ಸಹೈವ ದಹನಂ ಕುರ್ಯಾದ್ಗರ್ಭಚ್ಛೇದಂ ನ ಕಾರಯೇತ್ ॥ [ಹೇಮಾದ್ರಿ]

ಏಳು ತಿಂಗಳಿನ ಗರ್ಭಿಣಿ ಮರಣವಾಗಲು ಗೋಮೂತ್ರದಿಂದ ಪ್ರೋಕ್ಷಿಸಿ ಶ್ಮಶಾನಕ್ಕೆ ಒಯ್ದು ಶವದ ಬಲಭಾಗದ ಉದರವನ್ನು ನಾಲ್ಕು ಅಂಗುಲ ಸೀಳಿ ಮಗುವನ್ನು ಹೊರತೆಗೆದು ಜೀವವಿದ್ದರೆ ತಾಯಿಯ ಸ್ತನಕ್ಕೆ ಮಗುವಿನ ಬಾಯಿಯನ್ನು ಸ್ಪರ್ಶ ಮಾಡಿಸಿ ಅದನ್ನು ಮನೆಗೆ ಒಯ್ಯಬೇಕು. ಸತ್ತಿದ್ದರೆ ಭೂಗತಮಾಡುವುದು. ಶವದ ಸೀಳಿದ ಚರ್ಮವನ್ನು ಆಜ್ಯವನ್ನು ತುಂಬಿಸಿ ಹೊಲಿದು ಸ್ನಾನ ಅಲಂಕಾರ ಮಾಡಿ ದಹನಮಾಡುವುದು. ಸೂತಕಾಂತ್ಯದಲ್ಲಿ ಪ್ರಾಯಶ್ಚಿತ್ತಗಳನ್ನು ಮಾಡಬೇಕು. ಗರ್ಭಧರಿಸಿ ಆರು ತಿಂಗಳಿನ ಒಳಗೆ ಮೃತಪಟ್ಟರೆ ಉದರಚ್ಛೇದ ಮಾಡದೆ ಹಾಗೆಯೇ ವಿಧಿಪ್ರಕಾರ ದಹನ ಮಾಡಬೇಕು.

ಸೂತಿಕಾಸ್ತ್ರೀಮರಣವಿಚಾರ–

ಸೂತಿಕಾಮರಣೇ ಪ್ರಾಪ್ತೇ ಸರ್ವೌಷಧ್ಯನುಲೇಪನಮ್ ।
ಅಸೂತಕೀ ತು ಸಂಸ್ಪೃಷ್ಟಃ ಶೂರ್ಪಾಣಾಂ ತು ಶತಂ ಕ್ಷಿಪೇತ್ ॥
ಸ್ನಾಪಯಿತ್ವಾ ತತಃ ಕರ್ಮ ಕುರ್ವೀತ ಸುವಿಚಕ್ಷಣಃ ॥ [ಗೃಹ್ಯಕಾರಿಕಾ–ವೈಶೀನಸಿಸ್ತು]

ಬಾಣಂತಿಯು ಮೃತಳಾದರೆ ಶವಶುದ್ಧಿಗಾಗಿ ಔಷಧಿಲೇಪನ, ಶೂರ್ಪಸ್ನಾನಾದಿಗಳನ್ನು ರಜಸ್ವಲಾಧರ್ಮದಂತೆ ಹೇಳಿದರೂ ಸ್ಪರ್ಶಿಸಿದ ಕರ್ತೃವು ಸೂತಕಿಯೆನಿಸದೆ ದಹನಾದಿ ಕ್ರಿಯೆಗಳನ್ನು ಮಾಡಬಹುದು.

ರೋಗಿಮರಣವಿಚಾರ–

ಮೃತಸ್ಯ ಕುಷ್ಠಿನೋ ದೇಹಂ ನಿಖನೇತ್ ಗೋಷ್ಠಭೂಮಿಷು ।
ವಾಸರತ್ರಿತಯಂ ಪಶ್ಚಾದುದ್ಧೃತ್ಯಾನ್ಯತ್ರ ತಂ ದಹೇತ್ ॥ [ಸ್ಮೃತಿ ಸಮುಚ್ಚಯ]

ಕುಷ್ಠ ಮೊದಲಾದ ದೊಡ್ಡ ರೋಗಗಳಿಂದ ಮರಣಪಟ್ಟರೆ ಗೋಶಾಲೆ ಹತ್ತಿರ ಹೊಂಡಮಾಡಿ (ನೆಕ್ಕಿಸೊಪ್ಪು, ಬಿಲ್ವಪತ್ರೆ, ಉಪ್ಪು, ಕಾಳುಮೆಣಸು ಹಾಕಿ) ರೋಗಿಯ ಶವವನ್ನು ಹುಗಿಯಬೇಕು. ಮೂರು ದಿನಗಳ ಬಳಿಕ ತೆಗೆದು ವಿಧಿಪ್ರಕಾರ ದಹನ ಮಾಡಬೇಕು. ಪ್ರಾಯಶ್ಚಿತ್ತವಾಗಿ ತಿಲಹೋಮ, ಪವಮಾನಹೋಮ, ಕೂಷ್ಮಾಂಡಹೋಮ, ನಾರಾಯಣಬಲಿ ಮಾಡಿ ಗೋದಾನ ಕೊಡಬೇಕು. ಶವವನ್ನು ತೆಗೆಯಲು ಅಸಹ್ಯವಾದರೆ ಒಂದು ಮುಹೂರ್ತ (ಎರಡು ಘಳಿಗೆ) ತನಕ ಸೊಪ್ಪುಗಳನ್ನು ಹಾಕಿಟ್ಟು ಬಳಿಕ ಅಮಂತ್ರಕವಾಗಿ ದಹನಮಾಡಿ ಅಸ್ಥಿಯನ್ನು ಶುದ್ಧಿಗೊಳಿಸಿ ಸಮಂತ್ರಕವಾಗಿ ದಹನಮಾಡಬೇಕು.

ಮಸೂರಿಕಾಮೃತಾ ಯೇ ತು ಕಾಲೇ ಕರ್ಮ ನ ವಿದ್ಯತೇ ।
ಮಸೂರಿಕಾವ್ಯಾಧಿಮೃತಾಃ ದುರ್ಮೃತಾಸ್ತೇ ಪ್ರಕೀರ್ತಿತಾಃ ॥ [ಸ್ಮೃತಿಸಾರ]

ಮಸೂರಿಕಾ (ಅಮ್ಮ–ಮಾರಿ) ರೋಗದಿಂದ ಮರಣವಾದರೆ ಅದು ದುರ್ಮರಣವೆನಿಸುವುದು. (ಅಮಂತ್ರಕವಾಗಿ ತುಳಸೀನಿರ್ಮಾಲ್ಯ, ಗೋಪೀಚಂದನ – ಮುತ್ತೈದೆಯಾಗಿದ್ದರೆ ಕುಂಕುಮಾದಿಸೌಭಾಗ್ಯದ್ರವ್ಯಗಳನ್ನು ಹಾಕಿ ಶವವನ್ನು ಭೂಗತ ಮಾಡಬೇಕು. ಶವವನ್ನು ತೆಗೆಯುವಂತಿಲ್ಲ. ನಲ್ವತ್ತೈದು ದಿವಸ ಆಶೌಚಾಚರಣೆ ಮಾಡಬೇಕು. ನಲ್ವತ್ತಾರನೇ ದಿವಸ ಶಾಖಾ(ಪಾಲಾಶವಿಧಿ)ಸಂಸ್ಕಾರವಿಧಿಯಂತೆ ದಹನಮಾಡಿ ಮೂರು ದಿನದ ಕ್ರಿಯೆಯನ್ನು ಮಾಡಬೇಕು. ಮರುದಿನ ಮೂರು ದಿನದ ಕ್ರಿಯೆ, ಅದರ ಮರುದಿನ ಮೂರು ದಿನದ ಕ್ರಿಯೆ –ಹೀಗೆ ಮೂರು ದಿನಗಳಲ್ಲಿ (ನಲ್ವತ್ತೆಂಟನೇ ದಿನ) ದಶಾಹವಿಧಿಯಂತೆ ಶಿರಃಪ್ರಭೃತಿ ಅವಯವಗಳ ನಿಷ್ಪತ್ತಿಯಾಗುವುದು. ಆ ತನಕ ಬಂಧುಗಳಿಗೆ ೪೮ ದಿವಸಗಳ ಆಶೌಚವಿದೆ. ಆದರೆ ಈ ಸಂದರ್ಭದಲ್ಲಿ ಸಪಿಂಡರಿಗೆ ಹತ್ತುದಿನಗಳ ಮೃತಾಶೌಚವಿದೆಯೆಂದು ವಿಧಿಯಿದೆ. ಮರುದಿನ ಏಕೋದ್ದಿಷ್ಟಶ್ರಾದ್ಧ

Scanned by CamScanner

ನಡೆಸಿ ರಾತ್ರಿ ನಾರಾಯಣಬಲಿ ಮಾಡಿ ಮರುದಿನ ತಿಲಹೋಮಾದಿ ಪ್ರಾಯಶ್ಚಿತ್ತಗಳನ್ನು ಮುಗಿಸಿ ಸಪಿಂಡೀಕರಣವನ್ನು ಮಾಡಬೇಕು. ಮರಣಹೊಂದಿ ಐವತ್ತನೇ ದಿವಸ ಪೂರ್ತಿಗೊಳ್ಳುವುದು. ಇಂದಿನ ಕಾಲಮಾನಪ್ರಕಾರ ಈ ಪ್ರಕ್ರಿಯೆ ಅಸಾಧ್ಯವೆಂದಾದರೆ ವೇದಜ್ಞವಿಪ್ರರ ಪೂರ್ಣಾನುಮತದಂತೆಯೂ, ಗುರುಪೀಠದ ಆದೇಶದಂತೆಯೂ ಇಪ್ಪತ್ತನಾಲ್ಕು ದಿನಗಳ ತನಕ ಆಶೌಚಾಚರಣೆ ಮಾಡಿ ಶಾಖಾಸಂಸ್ಕಾರದೊಂದಿಗೆ ಕ್ರಿಯಾದಿಗಳನ್ನು ನಡೆಸಲೂ ಬಹುದೆಂದು ಪ್ರತೀತಿಯಿದೆ. ಇದಕ್ಕೆ ಶಾಸ್ತ್ರಾಧಾರವಿಲ್ಲ.

ಪಾಲಾಶವಿಧಿವಿಚಾರ–

ವಿದೇಶಮರಣೇಽಸ್ಥೀನಿ ಆಹೃತ್ಯಾಭ್ಯಜ್ಯ ಸರ್ಪಿಷಾ ।
ದಾಹಯೇದ್ವರ್ಹಿಷಾಚ್ಛಾದ್ಯ ಪಾತ್ರನ್ಯಾಸಾದಿ ಪೂರ್ವವತ್ ॥ [ಹೇಮಾದ್ರಿ]

ಪರವೂರಲ್ಲಿ ಮರಣಗೊಂಡು ಸಂಬಂಧಿಗಳೇ ದಹನ ಮಾಡಿದರೂ ಮುಖ್ಯ ಕರ್ತೃವು ಸೂತಕಾಚರಣೆಯೊಂದಿಗೆ ಮೃತನ ಅಸ್ಥಿಯನ್ನು ಪಡೆದು ತುಪ್ಪದಲ್ಲಿ ಅದ್ದಿ ದಹನಮಾಡಿ ಕ್ರಿಯಾ ಪ್ರಾರಂಭಿಸಬೇಕು. ಅಸ್ಥಿಯು ಸಿಕ್ಕದಿದ್ದಾಗ ಪಾಲಾಶವಿಧಿ ಹೇಳಲ್ಪಟ್ಟಿದೆ.

ಅಸ್ಥ್ನಾಮಲಾಭೇ ಪಾರ್ಣಾನಿ ಶಕಲಾನ್ಯುಕ್ತಯಾ ವೃತಾ ।
ದಾಹಯೇದಸ್ಥಿಸಂಖ್ಯಾನಿ ತತಃ ಪ್ರಭೃತಿ ಸೂತಕಮ್ ॥ [ನಿ.ಸಿಂಧು]

ಕುರ್ಯಾದ್ದರ್ಭಮಯಂ ಪ್ರೇತಂ ದರ್ಭೈಸ್ತ್ರಿಶತಷಷ್ಟಿಭಿಃ ।
ಪಾಲಾಶೀಭಿಃ ಸಮಿದ್ಭಿರ್ವಾ ಸಂಖ್ಯಾ ಚೈವಂ ಪ್ರಕೀರ್ತಿತಾ ॥ [ಭವಿಷ್ಯೇ]

ಪ್ರಯೋಗದಲ್ಲಿ ವಿವರಿಸಿದಂತೆ ಮುನ್ನೂರ ಅರುವತ್ತು ದರ್ಭೆಗಳಿಂದ ಅಥವಾ ಪಾಲಾಶಸಮಿಧೆಗಳಿಂದ ತಲೆಯಿಂದ ಕಾಲುತನಕ ಶರೀರವನ್ನು ಸಿದ್ಧಗೊಳಿಸಿ ದಹನ ಮಾಡಬೇಕು. ಪಾಲಾಶಸಂಸ್ಕಾರವಿಧಿಯ ಅನಂತರ ಸೂತಕಾಚರಣೆಯೆಂದಿದೆ.

Scanned by CamScanner

ವ್ಯುತ್ಕ್ರಮಮರಣವಿಚಾರ–

> ಮೃತೇ ಪಿತರಿ ಯಸ್ಯಾಥ ವಿದ್ಯತೇ ಚ ಪಿತಾಮಹಃ ।
> ತೇನ ದೇಯಾಸ್ತ್ರಯಃ ಪಿಂಡಾಃ ಪ್ರಪಿತಾಮಹಪೂರ್ವಕಾಃ ॥ [ಹೇಮಾದ್ರಿ]

ಪಿತಾಮಹನು (ತಂದೆಯ ತಂದೆ) ಬದುಕಿರಲು ತಂದೆಯು ಮರಣ ಹೊಂದಿದರೆ ಸಪಿಂಡೀಕರಣಶ್ರಾದ್ಧದಲ್ಲಿ ಪ್ರಪಿತಾಮಹ (ಮುತ್ತಜ್ಜ), ತತ್ಪಿತೃ (ಮುತ್ತಜ್ಜನ ತಂದೆ), ತತ್ಪಿತಾಮಹ (ಮುತ್ತಜ್ಜನ ಅಜ್ಜ) –ಇವರಿಗೆ ಪಿಂಡಪ್ರದಾನ ಮಾಡಿ ತಂದೆಯ ಪ್ರೇತಪಿಂಡವನ್ನು ಆ ಪಿಂಡಗಳಿಗೆ ಸಂಯೋಜನೆ ಮಾಡಬೇಕು. ಬಳಿಕ ಮಾಸಿಕ ಹಾಗೂ ಸಾಂವತ್ಸರಿಕಶ್ರಾದ್ಧಗಳಲ್ಲಿ ತಂದೆಗೆ ಎರಡು ಪಿಂಡಗಳನ್ನು, ಪ್ರಪಿತಾಮಹ(ಮುತ್ತಜ್ಜ)ನಿಗೊಂದು ಪಿಂಡಪ್ರದಾನ ಮಾಡಬೇಕು. ಪಿತಾಮಹನು (ತಂದೆಯ ತಂದೆಯು) ಮೃತನಾಗಲು ತಾನೇ ಕ್ರಿಯೆಮಾಡುವ ಪಕ್ಷದಲ್ಲಿ ಸಪಿಂಡೀಕರಣದಲ್ಲಿ ಪ್ರಪಿತಾಮಹ–ತತ್ಪಿತೃ–ತತ್ಪಿತಾಮಹರ ಪಿಂಡಗಳಲ್ಲಿ ಪಿತಾಮಹಪ್ರೇತಪಿಂಡವನ್ನು ಸಂಯೋಜನೆ ಮಾಡಿ ವರ್ಷಪರ್ಯಂತ ಮಾಸಿಕಶ್ರಾದ್ಧಗಳಲ್ಲಿ ಪಿತಾಮಹನಿಗೆ ಎರಡು ಪಿಂಡ, ಪ್ರಪಿತಾಮಹನಿಗೊಂದು ಪಿಂಡದಾನ ಮಾಡುವುದು.

> ಪ್ರಪಿತಾಮಹೇಽಪಿ ಜೀವೇ ಸ್ಯಾತ್ ಕಥಂ ಪಿತೃಸಪಿಂಡನಮ್ ।
> ತದಾ ತೃತೀಯಮಾರಭ್ಯ ದದ್ಯಾತ್ ಪಿಂಡತ್ರಯಂ ಬುಧಃ ।
> ತೇಷಾಮೇವ ತು ಪಿಂಡಾನಾಂ ಮಧ್ಯೇ ಪ್ರೇತಂ ನಿಯೋಜಯೇತ್ ॥ [ದಾಕ್ಷ್ಯ]

ಪಿತಾಮಹನೂ, ಪ್ರಪಿತಾಮಹನೂ ಬದುಕಿರಲು ತಂದೆಯು ಮರಣಪಟ್ಟರೆ ಸಪಿಂಡೀಕರಣದಲ್ಲಿ ಊರ್ಧ್ವಪ್ರಪಿತಾಮಹನಿಂದ ಮೊದಲ್ಗೊಂಡು ತತ್ಪಿತೃ, ತತ್ಪಿತಾಮಹ, ತತ್ಪ್ರಪಿತಾಮಹ (ಮುತ್ತಜ್ಜನ ತಂದೆ, ಮುತ್ತಜ್ಜನ ಅಜ್ಜ, ಮುತ್ತಜ್ಜನ ಮುತ್ತಜ್ಜ – ಕರ್ತೃವಿಗೆ ಏಳನೇ ವ್ಯಕ್ತಿ)– ಇವರಿಗೆ ಪಿಂಡದಾನ ಮಾಡಿ ಆ ಪಿಂಡಗಳಿಗೆ ಪಿತೃಪ್ರೇತಪಿಂಡವನ್ನು ಸೇರಿಸಿ ಮುಂದಿನ ಮಾಸಿಕಾದಿಗಳಲ್ಲಿ ಹಿರಿಯರು ಬದುಕಿರುವಷ್ಟು ಕಾಲ ತಂದೆಗೆ ಮೂರೂ ಪಿಂಡಗಳನ್ನಿಡಬೇಕು. ಇದೇ ಕ್ರಮದಂತೆ ಪಿತಾಮಹಿ, ಪ್ರಪಿತಾಮಹಿಯರು ಬದುಕಿರಲು ಮಾತೃ ಮರಣಪಟ್ಟರೆ ಈ ಮೇಲಿನ ನಿಯಮಗಳನ್ನೇ ಪಾಲಿಸಬೇಕು.

ತಾಯಿಯು ಬದುಕಿರುವಾಗ ಪತ್ನಿ ಮೃತಳಾದರೆ ಕರ್ಮಾಧಿಕಾರಿ ಪತಿಯೇ ಕ್ರಿಯೆಮಾಡುವ ಸಂದರ್ಭದಲ್ಲಿ ಪಿತಾಮಹಿ (ತಾಯಿಯ

Scanned by CamScanner

ಅತ್ತೆ) ಮೊದಲ್ಗೊಂಡು ಮೂರು ಮಾತೃಗಳಿಗೆ – ಪಿತಾಮಹಿ (ಅಜ್ಜಿ– ತಾಯಿಯ ಅತ್ತೆ), ಪ್ರಪಿತಾಮಹಿ (ಮುತ್ತಜ್ಜಿ– ತಾಯಿಯ ಅತ್ತೆಯ ಅತ್ತೆ), ವೃದ್ಧಪ್ರಪಿತಾಮಹಿ (ಮುತ್ತಜ್ಜಿಯ ಅತ್ತೆ– ತಾಯಿಯ ಅತ್ತೆಯ ಅತ್ತೆಯ ಅತ್ತೆ) ಪಿಂಡದಾನ ಮಾಡಿ ಪತ್ನೀಪಿಂಡವನ್ನು ಸಂಯೋಜನೆ ಮಾಡಬೇಕು. ಮುಂದೆ ಶ್ರಾದ್ಧಾದಿಗಳಲ್ಲಿ ಹೆಂಡತಿಗೆ ಎರಡುಪಿಂಡ ಪಿತಾಮಹಿಗೆ ಒಂದು ಪಿಂಡ ಇಡಬೇಕು. ತಾಯಿಯೂ ಪಿತಾಮಹಿಯೂ ಪ್ರಪಿತಾಮಹಿಯೂ ಬದುಕಿರಲು ಹೆಂಡತಿಯು ಮೃತಳಾದರೆ ವೃದ್ಧಪ್ರಪಿತಾಮಹಿ ಮೊದಲ್ಗೊಂಡು ಮೂರು ಮಾತೃಗಳಿಗೆ (ವೃದ್ಧಪ್ರಪಿತಾಮಹಿ, ತತ್ಪಿತಾಮಹಿ, ತತ್ಪ್ರಪಿತಾಮಹಿ) ಪಿಂಡಹಾಕಿ ಸಂಯೋಜನೆ ಮಾಡಿ ಮುಂದಿನ ಶ್ರಾದ್ಧಗಳಲ್ಲಿ ಹೆಂಡತಿಗೆ ಮೂರೂ ಪಿಂಡಗಳನ್ನು ಹಾಕಬೇಕು. ಅಥವಾ ಏಕೋದ್ದಿಷ್ಟವಿಧಿಯಂತೆ ಪತ್ನೀಶ್ರಾದ್ಧವನ್ನು ಆಚರಿಸಬಹುದು. ಸಪಿಂಡೀಕರಣಶ್ರಾದ್ಧದಲ್ಲಿ ಮಾತ್ರ ಊರ್ಧ್ವಪಿತೃಗಳನ್ನು ಕರೆದು ಆರಾಧನೆ ಮಾಡಬಹುದೆಂದೂ ಮಾಸಿಕಾದಿ ವಾರ್ಷಿಕಶ್ರಾದ್ಧಗಳಲ್ಲಿ ಯಜಮಾನನ ಪ್ರಪಿತಾಮಹನಿಂದ ಹಿಂದಿನವರನ್ನು ಕರೆಯಲು ಶಾಸ್ತ್ರ ನಿಷೇಧಿಸಿರುವುದರಿಂದಲೂ ಈ ರೀತಿ ವ್ಯವಸ್ಥೆಗೆ ಋಷಿವಾಕ್ಯಗಳೇ ಮೂಲ ಆಧಾರವಾಗಿವೆ.

ನೈಮಿತ್ತಿಕ ಸಂದರ್ಭದಲ್ಲಿ ಊರ್ಧ್ವಪಿತೃಗಳ ಆವಶ್ಯಕತೆಯಿರುವುದರಿಂದಲೇ ಯಜಮಾನನು ಸೇರಿ ಏಳನೇ ಪುರುಷನಾಗುವನು.

> **ಸಾಪಿಂಡ್ಯಂ ಸಾಪ್ತಪುರುಷಂ ಕೂಟಸ್ಥಾದಭಿಜಾಯತೇ ।**
> **ದಶಾಹಂ ಸೂತಕಂ ತೇಷಾಮನ್ಯೇಷಾಂ ತ್ರಿದಿನಂ ಭವೇತ್ ॥** [ಹಾರೀತಸ್ಮೃತಿ]

ಏಳು ತಲೆಯ ತನಕ ಸಪಿಂಡರಿಗೆ ದಶಾಹಸೂತಕವೆಂದೂ, ಎಂಟನೇ ಪುರುಷನಿಂದ ಏಳು ತಲೆಯ ತನಕ ಸೋದಕರಿಗೆ ಮೂರು ದಿನ ಆಶೌಚವೆಂದೂ, ಪುನಃ ಏಳು ತಲೆಯ ತನಕ ಸಗೋತ್ರರಿಗೆ ಪಕ್ಷಿಣೀ ಆಶೌಚವೆಂದೂ ಅನಂತರ ಒಂದು ದಿನ ಹಾಗೂ ಸ್ನಾನಮಾತ್ರವೆಂದೂ ವಿವರಣೆಗಳಿವೆ. ಸಗೋತ್ರರಿಗೂ ಸ್ನಾನಮಾತ್ರದಿಂದ ಶುದ್ಧಿಯೆಂದೂ ಪ್ರಮಾಣಗಳಿವೆ.

ಹಿಂದೆ ಹೇಳಿದ ವ್ಯುತ್ಕ್ರಮ ರೀತಿಯ ಮರಣದಲ್ಲಿ ಪಿಂಡ ಸಂಯೋಜನೆ ಹಾಗೂ ಶ್ರಾದ್ಧಾದಿಗಳಲ್ಲಿ ಶಾಕಲಸ್ಮೃತಿ, ಕರ್ಮಸಿದ್ಧಾಂತ, ಸುಮಂತುಸ್ಮೃತಿ ಮುಂತಾದವುಗಳ ನಿರೂಪಣೆ ಪ್ರಕಾರ ವಿಕಲ್ಪಗಳೂ ಇವೆ.

ಪಾರ್ವಣಶ್ರಾದ್ಧದಲ್ಲಿ ಮೂವರ ಉದ್ದೇಶ ಪಿಂಡದಾನ ಮಾಡಿ ಕೈಗಂಟಿಕೊಂಡ ಪಿಂಡದ್ರವ್ಯವನ್ನು ದರ್ಭೆಯಿಂದ ತಿಕ್ಕಿ ಪಿಂಡಸ್ಥಳಕ್ಕೆ ಹಾಕಬೇಕೆಂದೂ ಅಥವಾ ಅದರಿಂದ ಲೇಪಪಿಂಡವೆಂದು ಇನ್ನೊಂದು ಪಿಂಡ ಇಡುವ ರೂಢಿಯೂ ಇದೆ. ಹೇಮಾದ್ರಿ ವಚನದ ಪ್ರಕಾರ–

Scanned by CamScanner

ಲೇಪಭಾಗಾಶ್ಚತುರ್ಥಾದ್ಯಾಃ ಪಿತ್ರಾದ್ಯಾಃ ಪಿಂಡಭಾಗಿನಃ ।
ಪಿಂಡದಃ ಸಪ್ತಮಸ್ತೇಷಾಂ ಸಾಪಿಂಡ್ಯಂ ಸಾಪ್ತಪೌರುಷಮ್ ॥ [ಹೇಮಾದ್ರಿ]

ಎಂದಂತೆ ಪಿತ್ರಾದಿತ್ರಯರು ಪಿಂಡಭಾಗಿಗಳೆಂದೂ ಅದಕ್ಕಿಂತ ಹಿಂದಿನವರು ಮೂವರು ಲೇಪಭಾಗಿಗಳೆಂದೂ ಯಜಮಾನನು ಏಳನೆಯವನಾಗಿ ಸಾಪಿಂಡ್ಯ ಸಂಬಂಧ ಹೊಂದಿದವನೆಂದೂ ಅರ್ಥಪೂರ್ಣ ವಿವರಣೆಯಿದೆ.

ಕಲಿಯುಗದಲ್ಲಿ ಅಘಸಂಕೋಚವನ್ನೇ ನಿಷೇಧಗೊಳಿಸಿದ ವಾಕ್ಯಗಳು ಗರುಡಪುರಾಣ, ಶತಶ್ಲೋಕೀ ಸ್ಮೃತಿಗಳಲ್ಲಿ ಸ್ಪಷ್ಟವಿದ್ದರೂ ಏಳುತಲೆ ಪುರುಷನ ವಿವರಗಳು ಸ್ಪಷ್ಟವಾಗಿದ್ದಲ್ಲಿ ಎಂಟನೆಯ ಪುರುಷನು ಗುರುಮಠದ ಒಪ್ಪಿಗೆಯಂತೆ ಪ್ರಾಯಶ್ಚಿತ್ತ ವಿಧಾನಗಳಿಂದ ಅಘಸಂಕೋಚ ವ್ಯವಸ್ಥೆ ನಡೆಸಬಹುದೆಂದೂ ತಿಳಿದವರ ಅಭಿಪ್ರಾಯ ಇದೆ.

ಸಂಘಾತಮರಣವಿಚಾರ–

ಅನ್ಯೇಷಾಂ ಪ್ರೇತಕಾರ್ಯಾಣಿ ಮಹಾಗುರುನಿಪಾತನೇ ।
ಆದ್ಯಂ ಶ್ರಾದ್ಧಮಶುದ್ಧೇಽಪಿ ಕುರ್ಯಾದೇಕಾದಶೇಽಹನಿ ॥ [ಲೌಗಾಕ್ಷಿ]

ಪಿತನು ಮರಣಹೊಂದಿ ದಶಾಹವಿಧಿಯೊಳಗೆ ಮಾತೃ ಮರಣವಾದರೆ ಮಂತ್ರಾಗ್ನಿಯಿಂದ ದಹನಮಾಡಿ ನಿತ್ಯವಿಧಿಯಲ್ಲಿ ಪ್ರಥಮ ಪಿತೃಕಾರ್ಯ ಬಳಿಕ ಮಾತೃಕಾರ್ಯವನ್ನು ನಡೆಸಬೇಕು. ತಾಯಿಯ ಹನ್ನೊಂದನೇ ದಿನದೊಳಗೆ ತಂದೆಯ ದಶಾಹವಿಧಿ ಮುಗಿದಿದ್ದರೂ ಪ್ರತಿದಿನ ತಿಲತೋಯಾಂಜಲಿ ನೀಡುತ್ತಾ ತಾಯಿಯ ಹನ್ನೊಂದನೇ ದಿವಸದಂದು ತಂದೆಯ ಏಕೋದ್ದಿಷ್ಟ ಮಾಡಿ ಅನಂತರ ತಾಯಿಯ ಏಕೋದ್ದಿಷ್ಟ ಮಾಡಬೇಕು. ಮರುದಿನ ತಂದೆಯ ಸಪಿಂಡೀಕರಣ ಮಾಡಿ ತಾಯಿಯ ಸಪಿಂಡೀಕರಣ ಮಾಡಬೇಕು.

ತಾಯಿ ಮೊದಲು ಮರಣಹೊಂದಿ ದಶಾಹದೊಳಗೆ ತಂದೆಯು ಮರಣಪಟ್ಟರೆ ಮಂತ್ರಾಗ್ನಿಯಿಂದ ದಹನಮಾಡಿ ನಿತ್ಯವಿಧಿಯಲ್ಲಿ ಮೊದಲು ತಂದೆಯ ನಿತ್ಯವಿಧಿ ಬಳಿಕ ತಾಯಿಯ ಕ್ರಿಯೆಯನ್ನು ನಡೆಸಬೇಕು. ತಂದೆಯ ಏಕೋದ್ದಿಷ್ಟ ದಿನದಂದು ಮೊದಲು ತಂದೆಯ ಏಕೋದ್ದಿಷ್ಟ ಮಾಡಿ ಬಳಿಕ ತಾಯಿಯ ಏಕೋದ್ದಿಷ್ಟ ಹಾಗೂ ಮರುದಿನ ಸಪಿಂಡೀಕರಣವನ್ನೂ ಅದರಂತೆ ಮಾಡಬೇಕು. ತಾಯಿ ಯಾ

Scanned by CamScanner

ತಂದೆ ಮರಣ ಹೊಂದಿರಲು ಇತರರ ಕ್ರಿಯಾ ಒದಗಿದರೂ ಪ್ರೇತಕಾರ್ಯಗಳನ್ನು ದಾಹಾದಿ ಹನ್ನೊಂದನೇ ದಿನದ ಏಕೋದ್ದಿಷ್ಟಶ್ರಾದ್ಧ ತನಕ ಮಾತ್ರ ಮಾಡಬೇಕು.

ತಾಯಿತಂದೆಯವರು ಏಕಕಾಲದಲ್ಲಿ ಮರಣಹೊಂದಿದರೆ ದಹನ ನಿತ್ಯವಿಧಿ ಸಪಿಂಡೀಕರಣ ಎಲ್ಲವನ್ನೂ ಮೊದಲು ತಂದೆಗೆ ಮಾಡಿ ಬಳಿಕ ತಾಯಿಯ ಕ್ರಿಯೆಗಳನ್ನು ಮಾಡಬೇಕು.

ಪತ್ನ್ಯಾಃ ಪುತ್ರಸ್ಯ ತತ್ಪುತ್ರಭ್ರಾತ್ರೋಸ್ತತ್ತನಯೇಷು ಚ ।
ಸ್ನುಷಾಸ್ವಸ್ರೋಶ್ಚ ಪಿತ್ರೋಶ್ಚ ಸಂಘಾತಮರಣಂ ಯದಿ ॥

ಅರ್ವಾಗಬ್ದಾನ್ಮಾತೃಪಿತೃಪೂರ್ವಂ ಸಾಪಿಂಡ್ಯಮಾಚರೇತ್ ।
ಕೃತ್ವಾ ಪೂರ್ವಮೃತಸ್ಯಾದೌ ದ್ವಿತೀಯಸ್ಯ ತತಃ ಪುನಃ ।
ತೃತೀಯಸ್ಯ ತತಃ ಕುರ್ಯಾತ್ಸನ್ನಿಪಾತೇಷ್ವಯಂ ಕ್ರಮಃ ॥ [ಋಷ್ಯಶೃಂಗಃ (ನಿ.ಸಿಂಧು)]

ಕ್ರಿಯಾಮಧ್ಯದಲ್ಲಿ ಕರ್ತೃವಿಗೆ ಸಂಬಂಧಪಟ್ಟ ಪತ್ನಿ, ಪುತ್ರ, ಮೊಮ್ಮಗ, ಭ್ರಾತೃ, ಅವನ ಮಗ, ಸೊಸೆ, ಚಿಕ್ಕಪ್ಪ, ಚಿಕ್ಕಮ್ಮ ಅವರ ಮಕ್ಕಳು, ಮಾತಾಮಹ, ಮಾತಾಮಹಿಯರು ಇವರಲ್ಲಿ ಯಾರಾದರೂ ಮರಣ ಹೊಂದಿದರೆ ದಹನ ಹಾಗೂ ಕ್ರಿಯಾರಂಭ ಮಾಡಿ ಪ್ರಥಮಮೃತನ ಹನ್ನೊಂದನೇ ದಿನ ಅವನ ಏಕೋದ್ದಿಷ್ಟಮಾಡಿ, ಅನಂತರ ಮೃತನ ಹನ್ನೊಂದನೇ ದಿನ ಅವನ ಏಕೋದ್ದಿಷ್ಟವನ್ನು ಮಾಡಬೇಕು. ಅನಂತರ ಈ ಇಬ್ಬರು ಮೃತರ ಷೋಡಶಮಾಸಿಕ ಸಪಿಂಡೀಕರಣಾದಿಗಳನ್ನು ಮರಣ ಕ್ರಮದಂತೆ ಮಾಡಬೇಕು. ಇನ್ನೊಬ್ಬರ ಕ್ರಿಯಾಮಧ್ಯೇ ಮಾತೃವಿನ ಯಾ ಪಿತೃವಿನ ಮರಣವಾದರೆ ಮೊದಲು ತಾಯಿಯ, ತಂದೆಯ ಕ್ರಿಯೆ ಮಾಡಿ ಬಳಿಕ ಬೇರೆಯವರ ಕ್ರಿಯೆ ಮಾಡಬೇಕು. ಅಂದರೆ, ಪ್ರಥಮ ಮರಣಪಟ್ಟವರ ಹನ್ನೊಂದನೇ ದಿನ ಏಕೋದ್ದಿಷ್ಟ ಮಾಡಿ ಬಳಿಕ ತಾಯಿ ಯಾ ತಂದೆಯ ಸಪಿಂಡೀಕರಣಾಂತ ಎಲ್ಲ ಕಾರ್ಯಗಳನ್ನು ಮುಗಿಸಿದ ಬಳಿಕವೇ ಮೊದಲು ಮೃತಪಟ್ಟವರ ಕ್ರಿಯಾಭಾಗವನ್ನು ಪೂರ್ಣಗೊಳಿಸಬೇಕು.

ತಂದೆತಾಯಿಗಳ ಪೈಕಿ ಒಬ್ಬರ ಅಪರಕ್ರಿಯೆಯ ಮಧ್ಯೆ ಇನ್ನೊಬ್ಬರ ಶ್ರಾದ್ಧ ಒದಗಿದರೆ ಪ್ರಾರಂಭಿಸಿದ ಕ್ರಿಯೆಯನ್ನು ಸಪಿಂಡೀಕರಣಾಂತ ಮಾಡಿ ಮರುದಿನ ಶ್ರಾದ್ಧ ಮಾಡಬೇಕು.

Scanned by CamScanner

ಜ್ಯೇಷ್ಠೋ ವಾಸ್ಯಾನುಜೋ ವಾಪಿ ಕುರ್ಯಾತ್ ಭ್ರಾತುಸ್ಸಪಿಂಡನಮ್ ।
ನ ಪುತ್ರಸ್ಯ ಪಿತಾ ಕುರ್ಯಾತ್ ನಾನುಜಸ್ಯ ತಥಾಗ್ರಜಃ ॥

ಯದಿ ಸ್ನೇಹೇನ ಕುರ್ಯಾತಾಂ ಸಪಿಂಡೀಕರಣಂ ವಿನಾ ।
ಅನ್ಯಾಭಾವೇ ಪಿತಾ ಮಾತಾ ಜ್ಯೇಷ್ಠೋ ವಾಪಿ ಸಪಿಂಡನಮ್ ॥

ಕುರ್ಯಾಜ್ಜೀವಂತಮಾಕ್ರಮ್ಯ ಪಿಂಡಭಾಗಂ ನಿಯೋಜಯೇತ್ ।
ಸರ್ವಾಭಾವೇ ಪಿತಾ ವಾಪಿ ಕುರ್ಯಾತ್ ಭ್ರಾತಾಽಥವಾಗ್ರಜಃ ॥ [ವೈದ್ಯನಾಥೀಯ]

ಮಗನ ಸಪಿಂಡೀಕರಣವನ್ನು ತಂದೆಯೂ ತಮ್ಮನ ಸಪಿಂಡೀಕರಣವನ್ನು ಅಣ್ಣನೂ ಮಾಡುವುದು ಪ್ರಶಸ್ತವಲ್ಲವೆಂದೂ ಆತ್ಮೀಯನೆಂದು ಸ್ನೇಹದಿಂದ ಮಾಡುವುದಾದರೂ ಸಪಿಂಡೀಕರಣ ವಿನಾ ಉಳಿದ ಉದಕದಾನಾದಿಕ್ರಿಯೆಗಳನ್ನು ಮಾಡಬಹುದೆಂದೂ ವಾಕ್ಯಗಳಿವೆ. ಕ್ರಿಯಾಕರ್ತೃಗಳು ಬೇರೆ ಯಾರೂ ಇಲ್ಲವೆಂದಾದರೆ ಪಿತನು ಪುತ್ರನ ಹಾಗೂ ಅಣ್ಣನು ತಮ್ಮನ ಸಪಿಂಡೀಕರಣಾದಿಕ್ರಿಯೆಗಳೆಲ್ಲವನ್ನೂ ಮಾಡಬಹುದೆಂದೂ ಸ್ಮೃತಿ ಇದೆ.

ನಾಸಪಿಂಡೀಕೃತೇಃ ಪಿತ್ರೋರನ್ಯೇಷಾಂ ಶ್ರಾದ್ಧಮಾಚರೇತ್ ।
ನಿತ್ಯಂ ನೈಮಿತ್ತಿಕಂ ಕಾಮ್ಯಮಿಷ್ಟಾಪೂರ್ತಾದಿಕಂ ಚ ನ ॥

ಮಾಸಿಕಾನ್ಯಾಬ್ದಿಕಂ ಪಿತ್ರೋರಶುದ್ಧೋಽಪ್ಯೌರಸಸ್ಸುತಃ ।
ಕುರ್ಯಾದೇವ ತಿಥಿಪ್ರಾಪ್ತಮಿತಿ ಶಾತಾತಪೋಽಬ್ರವೀತ್ ॥ [ಋಷ್ಯಶೃಂಗ]

ಮಾತಾಪಿತೃಗಳು ಮರಣಹೊಂದಿ ಸಪಿಂಡೀಕರಣಪರ್ಯಂತ ಇತರರ ಶ್ರಾದ್ಧವನ್ನು ನಿತ್ಯನೈಮಿತ್ತಿಕಾದಿ ಕರ್ಮಗಳನ್ನು ಮಾಡಬಾರದು. ಆದರೆ, ಇತರರ ಕ್ರಿಯಾ ಮಧ್ಯದಲ್ಲಿ ಮಾತಾಪಿತೃಗಳ ವಾರ್ಷಿಕ ತಿಥಿ ಹಾಗೂ ಮಾಸಿಕಶ್ರಾದ್ಧ ಬಂದರೆ ಹನ್ನೊಂದನೇ ದಿನ ಮೃತಜೀವಿಯ ಏಕೋದ್ದಿಷ್ಟ-ಷೋಡಶಮಾಸಿಕ ಮಾಡಿ ಮರುದಿನ ಪಿತೃಶ್ರಾದ್ಧ ಮಾಡಿ ಮರುದಿನ ಯಾ ಅದೇ ದಿನ ಮೊದಲು ಆರಂಭಿಸಿದ ಪ್ರೇತಕಾರ್ಯವನ್ನು ಪೂರ್ಣಮಾಡಬೇಕು ಎಂದು ಶಾತಾತಪರ ವಚನವಿದೆ.

Scanned by CamScanner

ಶ್ರಾದ್ಧಗಳ ವಿಚಾರ–

ಪಿತ್ರೋಃ ಶ್ರಾದ್ಧೇ ಸಮಂ ಪ್ರಾಪ್ತೇ ನವೇ ಪರ್ಯುಷಿತೇಽಪಿ ವಾ ।
ಪಿತೃಪೂರ್ವಂ ಸುತಃ ಕುರ್ಯಾದನ್ಯತ್ರಾಸತ್ತಿಯೋಗತಃ ॥ [ಕಾರ್ಷ್ಣಾಜಿನಿಃ]

ಹಿಂದಿನಿಂದ ಮಾಡಿಕೊಂಡು ಬಂದ ಅಥವಾ ಹೊಸದಾಗಿ ಮಾಡಬೇಕಾಗಿರುವ ಮಾತಾಪಿತೃಗಳ ಶ್ರಾದ್ಧವು ಒಂದೇ ದಿನ ಬಂದೊದಗಿದರೆ ತಂದೆಯ ಶ್ರಾದ್ಧವನ್ನು ಪೂರೈಸಿ ತಾಯಿಯ ಶ್ರಾದ್ಧವನ್ನು ಮಾಡಬೇಕು. ಬೇರೆಯವರ ಶ್ರಾದ್ಧವು ಒಟ್ಟಿಗೆ ಬಂದರೆ ಮೊದಲು ಮೃತರ ಶ್ರಾದ್ಧವನ್ನು ಮೊದಲು ಮಾಡಿ ಅನಂತರ ಮೃತರ ಶ್ರಾದ್ಧವನ್ನು ಬಳಿಕ ಮಾಡಬೇಕು. ಇದನ್ನೇ ಸ್ಪಷ್ಟವಾಗಿ–

ಮಾತಾಪಿತ್ರೋರ್ಮೃತಾಹೈಕ್ಯಂ ಕಾಲೇನಾಪಿ ಭವೇದ್ಯದಿ ।
ಪಿತೃಶ್ರಾದ್ಧಂ ಪುರಾ ಕೃತ್ವಾ ಕುರ್ಯಾನ್ಮಾತುರನಂತರಮ್ ॥

– ಎಂದು ಸ್ಮೃತಿಯಲ್ಲೂ

ಪಿತ್ರೋಽಸ್ತು ಪಿತೃಪೂರ್ವತ್ವಂ ಸರ್ವತ್ರ ಶ್ರಾದ್ಧಕರ್ಮಣಿ ॥ [ಕಾಲಾದರ್ಶ]

– ಎಂದು ಕಾಲಾದರ್ಶದಲ್ಲಿಯೂ ಹೇಳಲಾಗಿದೆ.

ಏಕತ್ರೈವ ದಿನೇ ಶ್ರಾದ್ಧದ್ವಯಂ ಪ್ರಾಪ್ತಂ ಯದಾ ತದಾ ।
ಚರೇದೇವ ಪುರಾ ವರ್ಷಾತ್ ಪಿತುರ್ಮಾತುಶ್ಚ ತತ್ಸುತಃ ॥ [ವೈದ್ಯನಾಥೀಯ]

ತಂದೆಯ ಶ್ರಾದ್ಧವನ್ನು ಮೊದಲು ಮಾಡಬೇಕೆಂಬ ನಿಯಮವಿದ್ದರೂ ಒಂದು ವರ್ಷದೊಳಗೆ ತಾಯಿಯ ಮಾಸಿಕಶ್ರಾದ್ಧ ಮತ್ತು ತಂದೆಯ ಸಾಂವತ್ಸರಿಕಶ್ರಾದ್ಧಗಳನ್ನು ಒಂದೇ ದಿನದಂದು ಮಾಡಬೇಕಾದ ಸಂದರ್ಭದಲ್ಲಿ ತಾಯಿಯ ಮಾಸಿಕಶ್ರಾದ್ಧವನ್ನು ಮೊದಲು ಪೂರೈಸಿ ಸ್ನಾನಮಾಡಿ ಬೇರೆ ಪಾಕಪೂರ್ವಕ ತಂದೆಯ ಶ್ರಾದ್ಧವನ್ನು ಮಾಡಬೇಕು.

Scanned by CamScanner

ಏಕಸ್ಮಿನ್ ಯಃ ಕರೋತ್ಯಹ್ನಿ ದ್ವಯೋಃ ಶ್ರಾದ್ಧಂ ಯದಾ ದ್ವಿಜಃ ।
ತದಾ ಪೂರ್ವಮೃತಸ್ಯಾದೌ ಕೃತ್ವಾ ಸ್ನಾತ್ವಾ ಯಥಾವಿಧಿ ।
ಪಶ್ಚಾತ್ ಪಶ್ಚಾನ್ಮೃತಸ್ಯೈವ ಪೃಥಕ್ ಪಾಕೈಃ ಸಮಾಚರೇತ್ ॥ [ಆಶ್ವಲಾಯನ]

ಒಬ್ಬನು ಒಂದೇ ದಿವಸದಲ್ಲಿ ಇಬ್ಬರ ಶ್ರಾದ್ಧವನ್ನು ಮಾಡಬೇಕಾದ ಸಂದರ್ಭದಲ್ಲಿ ಮರಣಕ್ರಮದಂತೆ ಪೃಥಕ್ ಸ್ನಾನ ಹಾಗೂ ಪಾಕಪೂರ್ವಕ ಆ ಶ್ರಾದ್ಧಗಳನ್ನು ಮಾಡಬೇಕು.

ನೈಕಸ್ಮಿನ್ ದಿವಸೇ ಶ್ರಾದ್ಧಂ ತ್ರಯಾಣಾಂ ಕುತ್ರಚಿದ್ದ್ವಿಜಃ ।
ಏಕಃ ಕುರ್ಯಾತ್ ತಥಾ ಪ್ರಾಪ್ತೇ ಅನ್ಯೋ ಭ್ರಾತಾ ಸಮಾಚರೇತ್ ॥

ಭ್ರಾತರ್ಯವಿದ್ಯಮಾನೇ ತು ತತ್ಪರೇಽಹ್ನಿ ಸಮಾಚರೇತ್ ।
ಅನ್ಯಥಾ ಶ್ರಾದ್ಧಹಂತಾ ಸ್ಯಾತ್ ಶ್ರಾದ್ಧಸಂಕರಕೃತ್ ಭವೇತ್ ॥ [ಆಶ್ವಲಾಯನ]

ಒಬ್ಬನು ಒಂದೇ ದಿವಸದಲ್ಲಿ ಮೂರು ಶ್ರಾದ್ಧಗಳನ್ನು ಮಾಡಬಾರದು. ಅಂತಹ ಪ್ರಸಂಗ ಬಂದೊದಗಿದರೆ ಮರಣಕ್ರಮದಂತೆ ತಾನು ಎರಡು ಶ್ರಾದ್ಧಗಳನ್ನು ಮಾಡಿ ಮೂರನೆಯದನ್ನು ತಮ್ಮನಿಂದ ಮಾಡಿಸಬೇಕು. ತಮ್ಮನಿಲ್ಲದಿದ್ದರೆ ಮರುದಿನ ತಾನೇ ಆ ಮೂರನೆಯ ಶ್ರಾದ್ಧವನ್ನು ಮಾಡಬೇಕು. ಇದಕ್ಕೆ ವ್ಯತಿರಿಕ್ತವಾಗಿ ಮಾಡಿದರೆ ಶ್ರಾದ್ಧವನ್ನು ಕೆಡಿಸಿದ ಹಾಗೂ ಶ್ರಾದ್ಧಸಂಕರದ ದೋಷವು ಉಂಟಾಗುತ್ತದೆ.

ವಿವಾಹಮಾರಭ್ಯ ಚತುರ್ಥಮಧ್ಯೇ ಶ್ರಾದ್ಧಂ ದಿನಂ ದರ್ಶದಿನಂ ಯದಿ ಸ್ಯಾತ್ ।
ವೈಧವ್ಯಮಾಪ್ನೋತಿ ತದಾಶು ಕನ್ಯಾ ಜೀವೇತ್ ಪತಿಶ್ಚೇದನಪತ್ಯತಾ ಸ್ಯಾತ್ ॥ [ಸ್ಮೃತಿಸಮುಚ್ಚಯ]

ವಿವಾಹದಿಂದ ನಾಲ್ಕು ದಿನಗಳ ಮಧ್ಯದಲ್ಲಿ ವಾರ್ಷಿಕಶ್ರಾದ್ಧ ಅಥವಾ ಅಮಾವಾಸ್ಯೆ ಬಂದರೆ ಮಹಾ ಆಪತ್ತು ಬರುವುದೆಂದು ಎಚ್ಚರಿಸಿದ್ದಾರೆ. ನಾಂದೀಶ್ರಾದ್ಧದ ಬಳಿಕ ವಿವಾಹಕ್ಕಿಂತ ಮೊದಲು ದರ್ಶ ಹಾಗೂ ವಾರ್ಷಿಕ ಶ್ರಾದ್ಧದಿನ ಬಂದರೂ ದೋಷ ಇದೆ.

Scanned by CamScanner

ವಿವಾಹಮಧ್ಯೇ ಯದಿ ಚೇತ್ ಕ್ಷಯಾಹಸ್ತತ್ರ ಸ್ವಮುಖ್ಯಾಃ ಪಿತರೋ ನ ಯಾಂತಿ ।
ವೃತ್ತೇ ವಿವಾಹೇ ಪರತಸ್ತು ಕುರ್ಯಾಚ್ಛ್ರಾದ್ಧಂ ಸ್ವಧಾಭಿರ್ನತು ದೂಷಯೇತ್ತಮ್ ॥ [ಸ್ಮೃತಿಸಂಗ್ರಹ]

ವಿವಾಹಕಾರ್ಯಕ್ರಮ ಮುಗಿಸಿ ಬಳಿಕ ಕ್ಷಯಾಹದಿನವನ್ನು ಆಚರಿಸಬೇಕು. ನಾಂದೀಶ್ರಾದ್ಧದ ಊರ್ಧ್ವಪಿತೃಗಳು ಸನ್ನಿಹಿತರಾದಾಗ ತನ್ನ ಮುಖ್ಯ ಪಿತೃಗಳು ಬರುವುದಿಲ್ಲ. ವಾರ್ಷಿಕಶ್ರಾದ್ಧ ಮಾಸ ವಾ ಪಕ್ಷ ಕಳೆದ ಮೇಲೆ ವಿವಾಹ ಮಾಡಬಹುದು. ಅಥವಾ ವಿವಾಹದಿನಕ್ಕಿಂತ ಮೊದಲು ಶ್ರಾದ್ಧತಿಥಿಯಾಗಿದ್ದರೂ ದೋಷವಿಲ್ಲವೆನ್ನುತ್ತಾರೆ. ಆದರೆ ವಿವಾಹಪ್ರಯುಕ್ತ ಮಾಡುವ ನಾಂದೀಶ್ರಾದ್ಧಕ್ಕಿಂತ ಮೊದಲಾಗಿರಬೇಕು.

ತ್ರಿಪಿಂಡೀಶ್ರಾದ್ಧವಿಚಾರ –

ಮಾತಾಪಿತೃಗುರುಘ್ನಾಶ್ಚ ದೇವವಿಪ್ರಸ್ವ ಹಾರಿಣಃ ।
ಕ್ರಿಯಾಕರ್ಮವಿಹೀನಾಶ್ಚ ಪ್ರಾಪ್ನುವಂತಿ ಪಿಶಾಚತಾಮ್ ।
ಪ್ರೇತೋದ್ಧಾರಶ್ಚ ಕರ್ತವ್ಯಃ ತೇಷಾಂ ಸುಗತಿಮಿಚ್ಛತಾ ॥ [ಯಮಸ್ಮೃತಿ]

ಮಾತಾಪಿತೃಗಳ ಅಂತ್ಯಕ್ರಿಯಾದಿಗಳನ್ನು ವಿಧಿಪ್ರಕಾರ ಆಚರಿಸದಿದ್ದರೆ, ವಿಧ್ಯುಕ್ತ ನಿತ್ಯಾನುಷ್ಠಾನಗಳನ್ನು ಮಾಡದೆ ಇದ್ದರೆ, ದೇವಸ್ವ ಬ್ರಹ್ಮಸ್ವಗಳನ್ನು ಅಪಹರಿಸಿದರೆ ಪಿಶಾಚಜನ್ಮ ಹೊಂದುವರೆಂದೂ ತಮ್ಮ ಸದ್ಗತಿಗಾಗಿ ಕುಟುಂಬದವರನ್ನು ನಾನಾ ಪ್ರಕಾರ ಹಿಂಸಿಸುವರೆಂದೂ, ಆವೇಶ–ಹುಚ್ಚುತನ–ಪರೀಕ್ಷೆಗೆ ಸಿಗದೆ ಇರುವ ರೋಗ, ಅಪಸ್ಮಾರ, ಶುಭಕಾರ್ಯಗಳಿಗೆ ವಿಘ್ನವನ್ನುಂಟುಮಾಡುವ ಮೂಲಕ ಅನಿಷ್ಟ ಸೂಚನೆಯನ್ನೇ ಕೊಡುತ್ತಾರೆ. ತಂದೆತಾಯಿಗಳು ಮಾತ್ರವಲ್ಲ; ರಕ್ತಸಂಬಂಧವುಳ್ಳ ಆತ್ಮೀಯರಿಗಾದರೂ ಸದ್ಗತಿಯಾಗದೆ ಇದ್ದರೆ ಪ್ರೇತತ್ವ ನಿವೃತ್ತಿಗಾಗಿ ಆತ್ಮೀಯ ಬಂಧುಗಳಿಗೆ ಕಾಟ ಕೊಡಬಹುದು. ಪ್ರೇತತ್ವವನ್ನು ಪಡೆದ ಆ ಜೀವಿಗಳನ್ನು ಹಿಂದುಮುಂದು ಯಾರು ಏನು ಎಂಬುದು ತಿಳಿಯುವುದೇ ಕಷ್ಟ. ಯಾರೇ ಆಗಿರಲಿ, ಒಮ್ಮೆ ಕ್ರಿಯಾದಿಗಳು ನಡೆಸಿರಲು ಪುನಃ ಆ ಜೀವಿಯನ್ನು 'ಪ್ರೇತ'ವೆಂದು ಸಂಬೋಧಿಸಿ ಕ್ರಿಯೆಯನ್ನು ಮಾಡುವಂತಿಲ್ಲ. ಇಂತಹ ಸಂದರ್ಭದಲ್ಲಿ ತ್ರಿಪಿಂಡೀಶ್ರಾದ್ಧವನ್ನು ಮಾಡಬೇಕು.

ಪುಣ್ಯಕ್ಷೇತ್ರೇ ಪುಣ್ಯನದ್ಯಾಂ ತ್ರಿಪಿಂಡೀವಿಧಿಮಾಚರೇತ್ ।
ತತ್ಪುತ್ರಸ್ತಸ್ಯ ಸಂಬಂಧೀ ಯಃ ಕೋಽಪ್ಯಸ್ಮಾದ್ವಿಮುಚ್ಯತೇ ॥

Scanned by CamScanner

ತ್ರಿಪಿಂಡೀವಿಧಿನಾ ಯಸ್ತು ಸಂಸ್ಕಾರಂ ಕುರುತೇ ಪುನಃ ।
ಪೈಶಾಚ್ಯಾತ್ಸ ವಿಮುಚ್ಯೇತ ಪುಣ್ಯಕ್ಷೇತ್ರೇ ನ ಸಂಶಯಃ ॥ [ವೈದ್ಯನಾಥೀಯೇ]

ದುರ್ಗತಿ ಹೊಂದಿರುವ ಕುಟುಂಬದ ಸಂಬಂಧಿಗಳ ಸದ್ಗತಿಗಾಗಿ ಪುಣ್ಯಕ್ಷೇತ್ರದಲ್ಲಿ ಅಥವಾ ಪುಣ್ಯ ನದೀತೀರದಲ್ಲಿ ವೇದಶಾಸ್ತ್ರಜ್ಞ ಋತ್ವಿಜರನ್ನು ಆಹ್ವಾನಿಸಿ ಪ್ರಾಯಶ್ಚಿತ್ತ ಕೃಚ್ಛ್ರಾಚರಣಪೂರ್ವಕವಾಗಿ ದಶವಿಧಸ್ನಾನ – ಪಂಚಗವ್ಯಪ್ರಾಶನ – ಪುಣ್ಯಾಹ – ವಿಷ್ಣುಪೂಜೆ ಮಾಡಿ ತಿಲಹೋಮ, ಪವಮಾನ, ಕೂಶ್ಮಾಂಡ ಹೋಮಾದಿಗಳನ್ನು ಮಾಡಿ ಸತ್ಕರ್ಮದ ಪುಣ್ಯಾತಿಶಯ ಫಲಗಳನ್ನು ತ್ರಿಪಿಂಡೀಶ್ರಾದ್ಧ ಮೂಲಕ ಅಜ್ಞಾತನಾಮ ಗೋತ್ರಗಳುಳ್ಳ ಆ ಜೀವಿಗಳಿಗೆ ಸಿಗುವಂತೆ ಪಿತೃದೇವತಾಂತರ್ಗತ ವಿಷ್ಣುವಿಗೆ ಅರ್ಪಣೆ ಮಾಡಿದಾಗ ಆ ಜೀವಿಗಳು ಪ್ರೇತತ್ವ–ಪಿಶಾಚತ್ವದಿಂದ ನಿವೃತ್ತಿ ಹೊಂದಿ ಉತ್ತಮ ಜನ್ಮವನ್ನು ಹೊಂದುವರೆಂದೂ ಕುಟುಂಬದಲ್ಲಿ ಅನಿಷ್ಟಗಳೂ ದೂರವಾಗಿ ಶ್ರೇಯಸ್ಸುಂಟಾಗುವುದೆಂದೂ ಶ್ರುತಿಸಮ್ಮತ ಸ್ಮೃತಿಗಳಲ್ಲಿ ಶಾಸ್ತ್ರಕಾರರು ಉಲ್ಲೇಖಿಸಿರುತ್ತಾರೆ.

ಮಹಾಲಯವಿಚಾರ –

ಪಿತೃಋಣ ಪರಿಹಾರಕ್ಕಾಗಿ ಮಾತಾಪಿತೃಗಳ ವಾರ್ಷಿಕ ಶ್ರಾದ್ಧವೆಂದಷ್ಟೆ ತಿಳಿಯದೆ ತನಗೆ ಸಂಬಂಧಪಟ್ಟ ಮೃತಜೀವಿಗಳನ್ನು ಮಹಾಲಯಾದಿಗಳಿಂದ ತೃಪ್ತಿಪಡಿಸುವುದೂ ಋಣಪರಿಹಾರಕ್ಕೆ ಕಾರಣವಾಗುವುದು. ಆತ್ಮಸಂಬಂಧಿಗಳೆಂದರೆ–

ಪಿತಾ ಚ ತತ್ಪಿತಾ ಯಶ್ಚ ತತ್ಪಿತಾಮಹ ಏವ ಚ ।
ಮಾತಾ ಪಿತಾಮಹೀ ಚೈವ ತಥೈವ ಪ್ರಪಿತಾಮಹೀ ॥

ಮಾತಾಮಹಃ ಸಪತ್ನೀಕಃ ತತ್ಪಿತಾ ಪ್ರಪಿತಾಮಹಃ ।
ಪಿತುರ್ಭ್ರಾತಾ ಕನಿಷ್ಠೋ ವಾ ಆತ್ಮಭ್ರಾತಾ ಕನಿಷ್ಠಕಃ ॥

ಪುತ್ರಃ ಪಿತೃಭಗಿನ್ಯಶ್ಚ ಮಾತುಲೋ ಮಾತೃಭಾಗಿನೀ ।
ಸ್ವಜಾಮಯಶ್ಚ ಭಾರ್ಯಾ ಚ ಭಗಿನ್ಯಶ್ಚಾಥ ಪುತ್ರಿಕಾ ॥

Scanned by CamScanner

ಶ್ವಶುರೋ ಭಾವುಕಶ್ಚೈವ ಸ್ನುಷಾ ಶ್ಯಾಲಶ್ಚ ವೈ ಗುರುಃ ।
ಆಚಾರ್ಯಾಃ ಸ್ವಾಮಿಮಿತ್ರೇ ಚ ಏಕತ್ರಿಂಶದುದಾಹೃತಾಃ ॥ [ಗೃಹ್ಯಪರಿಶಿಷ್ಟ]

ಪಿತೃ, ಪಿತಾಮಹ, ಪ್ರಪಿತಾಮಹ – ಮಾತೃ, ಪಿತಾಮಹಿ, ಪ್ರಪಿತಾಮಹಿ – ಮಾತಾಮಹ (ತಾಯಿಯ ತಂದೆ), ಮಾತುಃಪಿತಾಮಹ, ಮಾತುಃಪ್ರಪಿತಾಮಹ, ತಂದೆಯ ಅಣ್ಣಂದಿರು ಹಾಗೂ ತಮ್ಮಂದಿರು, ತನ್ನ ಅಣ್ಣಂದಿರು ಹಾಗೂ ತಮ್ಮಂದಿರು, ಪತ್ನಿ, ಪುತ್ರ, ತಂದೆಯ ಸಹೋದರಿಯರು, ಸೋದರಮಾವ, ತಾಯಿಯ ಸಹೋದರಿಯರು, ಅಳಿಯ, ತನ್ನ ಸಹೋದರಿಯರು, ಮಗಳು, ಮಾವ, ಭಾವ, ಸೊಸೆ, ಭಾವಮೈದುನ, ಗುರು, ಆಚಾರ್ಯ, ಸ್ವಾಮಿ, ಗೆಳೆಯ –ಈ ಮೂವತ್ತೊಂದು ವ್ಯಕ್ತಿಗಳಲ್ಲಿ ಮೃತಪಟ್ಟವರನ್ನು ಕುರಿತು ಪ್ರತಿನಿತ್ಯದಲ್ಲೂ ತರ್ಪಣ, ಪರ್ವದಿನಗಳಲ್ಲಿ ತಿಲತರ್ಪಣೆ ಕೊಡುವುದರ ಮೂಲಕವೂ ತೃಪ್ತಿಪಡಿಸಬೇಕು. ಇವರೆಲ್ಲರೂ ತಮ್ಮ ರಕ್ತಸಂಬಂಧಿಗಳು. ಬದುಕಿದ್ದಾಗ ಮಾತ್ರ ನಮಗೆ ಸಂಬಂಧಿಗಳೆಂದು ತಿಳಿಯದೆ ಅವರು ಮೃತಪಟ್ಟ ಮೇಲೆಯೂ ಪಿತೃದೇವತೆಗಳ ಅಧೀನದಲ್ಲಿರುವ ಅವರನ್ನು ತೃಪ್ತಿಪಡಿಸಬೇಕು. ಪಿತೃವರ್ಗದಲ್ಲಿ ಬೋಧಾಯನ ರೀತ್ಯಾ ಹಾಗೂ ಸಾಮಶಾಖಾ ರೀತ್ಯಾ ವ್ಯತ್ಯಾಸಗಳಿವೆ.

ಪ್ರತಿ ವರುಷದ ಭಾದ್ರಪದಮಾಸ ಕೃಷ್ಣಪಕ್ಷದ ದಿನಗಳು ವಿಶೇಷ ಪರ್ವದಿನಗಳೆನಿಸುತ್ತವೆ

ಆಷಾಢೀಮವಧಿಂ ಕೃತ್ವಾ ಪಂಚಮಂ ಪಕ್ಷಮಾಶ್ರಿತಾಃ ।
ಕಾಂಕ್ಷಂತಿ ಪಿತರಃ ಕ್ಲಿಷ್ಟಾಃ ಅನ್ನಮಪ್ಯನ್ವಹಂ ಜಲಮ್ ॥ [ವೃದ್ಧಮನು]

ಆಷಾಢ ಹುಣ್ಣಿಮೆಯ ಬಳಿಕ ಐದನೇ ಪಕ್ಷದ ದಿನಗಳಲ್ಲಿ ಪಿತ್ರಾದಿಗಳು ತಮ್ಮ ಬಂಧುಗಳಿಂದ ಅನ್ನೋದಕವನ್ನು ಅಪೇಕ್ಷೆ ಮಾಡುತ್ತಾರೆ.

ಪಕ್ಷಮಾಸೇ ಯಮಃ ಪ್ರೇತಾನ್ ಪಿತೄಂಶ್ಚಾಪಿ ಯಮಾಲಯಾತ್ ।
ವಿಸರ್ಜಯತಿ ಮಾನುಷ್ಯೇ ನಿರಯಸ್ಥಾಂಶ್ಚ ಕಾಶ್ಯಪ ॥ [ಬೃಹದ್ಗಾರುಡ]

ಈ ಪಕ್ಷ ಮಾಸದಲ್ಲಿ ಯಮನು ಪಿತ್ರಾದಿಗಳನ್ನೆಲ್ಲಾ ನರಕಾದಿ ಯಾವುದೇ ದುರ್ಗತಿ ಸ್ಥಾನದಲ್ಲಿದ್ದರೂ ಮನುಷ್ಯಲೋಕಕ್ಕೆ ಕಳುಹಿಸುವನೆಂದು ಪುರಾಣವಚನವಿದೆ.

ಆಷಾಢ್ಯಾಃ ಪಂಚಮೇ ಪಕ್ಷೇ ಕನ್ಯಾಸಂಸ್ಥೇ ದಿವಾಕರೇ ।

Scanned by CamScanner

ಯೋ ವೈ ಶ್ರಾದ್ಧಂ ನರಃ ಕುರ್ಯಾದೇಕಸ್ಮಿನ್ನಪಿ ವಾಸರೇ ।
ತಸ್ಯ ಸಂವತ್ಸರಂ ಯಾವತ್ಸಂತೃಪ್ತಾಃ ಪಿತರೋ ಧ್ರುವಮ್ ॥ [ಹೇಮಾದ್ರಿ]

ಭಾದ್ರಪದ ಬಹುಳ ಪಾಡ್ಯದಿಂದ ಅಮಾವಾಸ್ಯೆಯೊಳಗೆ ಸೂರ್ಯನು ಕನ್ಯಾರಾಶಿಯನ್ನು ಪ್ರವೇಶಮಾಡಲು ಆ ದಿನಗಳು ಪುಣ್ಯತಿಥಿಗಳೆಂದು ತಿಳಿಯಬೇಕು. ಒಂದು ದಿನವಾದರೂ ಹಿರಿಯರೆಲ್ಲರ ಉದ್ದೇಶವಿರಿಸಿ ಶ್ರಾದ್ಧಮೂಲಕ ಕೃತಜ್ಞತೆಯನ್ನು ಅರ್ಪಿಸಲೇಬೇಕು. ಒಂದು ದಿನದ ಶ್ರಾದ್ಧದಿಂದ ಒಂದು ವರ್ಷ ತನಕ ತೃಪ್ತಿಪಡುತ್ತಾರೆಂದ ಮೇಲೆ ಪಕ್ಷಪೂರ್ತಿ ಪಿತೃಕರ್ಮವನ್ನು ಆಚರಿಸಿದರೆ ತೃಪ್ತಿಗೊಂಡ ಹಿರಿಯರ ಪೂರ್ಣಾನುಗ್ರಹಕ್ಕೆ ಪಾತ್ರರಾಗುವುದು ಖಂಡಿತ.

ಕನ್ಯಾಗತೇ ಸವಿತರಿ ದಿನಾನಿ ದಶ ಪಂಚ ಚ ।
ಪಾರ್ವಣೇನೇಹ ವಿಧಿನಾ ಶ್ರಾದ್ಧಂ ತತ್ರ ವಿಧೀಯತೇ ॥ [ಮಾರ್ಕಂಡೇಯ]

ಪಕ್ಷಶ್ರಾದ್ಧಂ ಯದಾ ಕುರ್ಯಾತ್ತರ್ಪಣಂ ತು ದಿನೇದಿನೇ ।
ಸಕೃನ್ಮಹಾಲಯೇ ಚೈವ ಪರೇಽಹನಿ ತಿಲೋದಕಮ್ ॥ [ನಾರದೀಯ ಸ್ಮೃತಿ]

ಈ ಹದಿನೈದು ದಿನಗಳಲ್ಲಿ ಚತುರ್ದಶಿ ದಿನ ಬಿಟ್ಟು ಉಳಿದ ದಿವಸಗಳಲ್ಲಿ (ಏಕಾದಶಿ ಬಿಟ್ಟು) ಒಂದು ದಿನ ಪಾರ್ವಣವಿಧಿಯಂತೆ ಮೃತರಾದ ಎಲ್ಲರನ್ನೂ ಹೆಸರಿಸಿ ಪಿಂಡಪ್ರದಾನ ಮೂಲಕ ಶ್ರಾದ್ಧಮಾಡಿ ಉಳಿದ ದಿನಗಳಲ್ಲಿ ತಿಲತರ್ಪಣ ಕೊಡಬೇಕು. ಶಸ್ತ್ರಾದಿ ಅಪಘಾತಗಳಿಂದ ಮೃತರಾದವರಿದ್ದರೆ ಚತುರ್ದಶೀ ದಿನ ಶ್ರಾದ್ಧ ಮಾಡಬೇಕೆಂದಿದೆ. ಮುತ್ತೈದೆ ತಾಯಿ ಮರಣಪಟ್ಟಿದ್ದರೆ ತಂದೆ ಬದುಕಿರುವಷ್ಟು ಕಾಲ ನವಮಿ ತಿಥಿಯಂದು ಪುತ್ರರು ಶ್ರಾದ್ಧ ಮಾಡಬೇಕು.

ಯಾ ತಿಥಿರ್ಯಸ್ಯ ಮಾಸಸ್ಯ ಮೃತಾಹೇ ತು ಪ್ರವರ್ತತೇ ।
ಸಾ ತಿಥಿಃ ಪಿತೃಪಕ್ಷೇ ತು ಪೂಜನೀಯಾ ಪ್ರಯತ್ನತಃ ॥ [ನಾಗರಖಂಡಸ್ಮೃತಿ]

ಯಾವುದೇ ಮಾಸದಲ್ಲಿ ಆಗಿರಲಿ ತಂದೆಯು ಮರಣ ಹೊಂದಿದ ತಿಥಿಯು ಪಿತೃಪಕ್ಷದಲ್ಲಿ ಬರುವಾಗ ಆ ತಿಥಿಯು ಮಹಾಲಯಶ್ರಾದ್ಧ

Scanned by CamScanner

ಮಾಡಲು ಬಹಳ ಪ್ರಶಸ್ತವೆಂದಿದ್ದಾರೆ. ಮಹಾಲಯಶ್ರಾದ್ಧದಲ್ಲಿ ಪಿತೃವರ್ಗ, ಮಾತೃವರ್ಗ, ಮಾತಾಮಹವರ್ಗ, ಮಾತಾಮಹೀವರ್ಗ –ಈ ನಾಲ್ಕು ವರ್ಗದ ಹನ್ನೆರಡು ಪಿತೃಗಳಿಗೆ ಪಾರ್ವಣವಿಧಿಯಂತೆಯೂ, ಉಳಿದ ಜ್ಯೇಷ್ಠಾದಿ ಕನಿಷ್ಠಾದಿ ಪಿತೃವರ್ಗದವರನ್ನು ಏಕೋದ್ದಿಷ್ಟವಿಧಾನದಂತೆ ಶ್ರಾದ್ಧ ಮೂಲಕವಾಗಲೀ ತರ್ಪಣ ಮೂಲಕವಾಗಲೀ ತೃಪ್ತಿಪಡಿಸಬೇಕು.

ಪಕ್ಷದಿನಗಳಲ್ಲಿ ತಂದೆ ಯಾ ತಾಯಿಯ ವಾರ್ಷಿಕ ಶ್ರಾದ್ಧತಿಥಿ ಬಂದರೆ ಆ ದಿನ ಮೊದಲು ವಾರ್ಷಿಕ ಶ್ರಾದ್ಧಮಾಡಿ ಅನಂತರ ಮಹಾಲಯಶ್ರಾದ್ಧ ಮಾಡಬೇಕು. ವಸುರೂಪ ರುದ್ರರೂಪ ಆದಿತ್ಯರೂಪರೆಂದು ಅನುಸಂಧಾನದೊಂದಿಗೆ ಮಾಡುವ ಪಿತೃಪಿತಾಮಹಪ್ರಪಿತಾಮಹರ ಶ್ರಾದ್ಧವು ಪಾರ್ವಣ ವಿಧಾನವೆಂದೂ, ಕೇವಲ ವಸುರೂಪ ಚಿಂತನೆಯಿಂದ ನಡೆಸಲಾಗುವ ಜ್ಯೇಷ್ಠಾದಿ ಕನಿಷ್ಠಾದಿ ಪಿತೃಗಳ ಶ್ರಾದ್ಧವು ಏಕೋದ್ದಿಷ್ಟವಿಧಾನವೆಂದೂ ಅರ್ಥೈಸಲ್ಪಡುತ್ತದೆ. ಆಶೌಚಾದಿಗಳಿಂದ ಈ ಪಕ್ಷದಲ್ಲಿ ಶ್ರಾದ್ಧಮಾಡಲು ಪ್ರತಿಬಂಧಕವಾದರೆ ಆಶ್ವಯುಜಮಾಸದ ತಿಥಿಯಲ್ಲಿ ಆಚರಿಸಬಹುದು.

ಯಾವಚ್ಚ ಕನ್ಯಾತುಲಯೋಃ ಕ್ರಮಾದಾಸ್ತೇ ದಿವಾಕರಃ ।
ಶೂನ್ಯಂ ಪ್ರೇತಪುರಂ ತಾವದ್ವೃಶ್ಚಿಕಂ ಯಾವದಾಗತಃ ॥

[ಭಾರತ]

ವೃಶ್ಚಿಕೇ ಸಮತಿಕ್ರಾಂತೇ ಪಿತರೋ ದೈವತೈಸ್ಸಹ ।
ನಿಃಶ್ವಸ್ಯ ಪ್ರತಿಗಚ್ಛಂತಿ ಶಾಪಂ ದತ್ತ್ವಾ ಸುದಾರುಣಮ್ ॥

[ಕಾರ್ಷ್ಣಾಜಿನಿಃ]

ಕನ್ಯಾಮಾಸ ಹಾಗೂ ತುಲಾಮಾಸಗಳಲ್ಲಿ ಯಮಪುರದಲ್ಲಿ ಪಿತೃಜೀವಿಗಳೇ ಇರುವುದಿಲ್ಲವೆಂದೂ ಎಲ್ಲರೂ ಭೂಲೋಕದಲ್ಲಿ ತಮ್ಮ ಸಂಬಂಧಿಗಳಲ್ಲಿ ವಾಯುರೂಪವಾಗಿ ಇರುತ್ತಾರೆಂಬ ವಾಕ್ಯ ಮಹಾಭಾರತದಲ್ಲೂ; ವೃಶ್ಚಿಕಮಾಸ ಬರಲು ಪಿತೃಗಳನ್ನು ತೃಪ್ತಿಪಡಿಸದೆ ಇರುವ ಸಂಬಂಧಿಗಳಿಗೆ ನಿರಾಶರಾದ ಪಿತೃಗಳು ಶಾಪಕೊಟ್ಟು ಹಿಂದೆ ತೆರಳುವರೆಂಬ ವಾಕ್ಯ ಬ್ರಹ್ಮಪುರಾಣದಲ್ಲೂ ಇದೆ.

ದುರೋ ಅಶ್ವಸ್ಯ ಮಂತ್ರಂ ಚ ದಶವಾರಂ ದ್ವಿಮಾಸಕೇ ।
ಮಹಾಲಯಂ ಯದಾ ನ್ಯೂನಂ ತದಾ ಸಂಪೂರ್ಣಮೇವ ತತ್ ॥

[ಋಗ್ವಿಧಾನೇ]

ಒಂದು ವೇಳೆ ಪಕ್ಷಶ್ರಾದ್ಧದ ನ್ಯೂನತೆಯಾದರೆ ಭಾದ್ರಪದ-ಆಶ್ವಿನ ಈ ಎರಡು ಮಾಸಗಳಲ್ಲಿಯೂ "ದುರೋ ಅಶ್ವಸ್ಯ"ವೆಂಬ ಮಂತ್ರವನ್ನು ಪ್ರತಿದಿನ ಹತ್ತುಸಾರಿ ಜಪಿಸಲು ದೋಷ ಪರಿಹಾರವೆಂದಿದೆ.

ಓಂ ದುರೋ ಅಶ್ವಸ್ಯ ದುರ ಇಂದ್ರ ಗೋರಸಿ ದುರೋ ಯವಸ್ಯ ವಸುನ ಇನಸ್ಪತಿಃ । ಶಿಕ್ಷಾನರಃ ಪ್ರದಿವೋ ಅಕಾಮಕರ್ಶನಃ ಸಖಾ ಸಖಿಭ್ಯಸ್ತಮಿದಂ ಗೃಣೀಮಸಿ ॥

ಆತ್ಮಶ್ರಾದ್ಧವಿಚಾರ –

ನಮ್ಮ ಪ್ರಾಚೀನರು ಆಚರಿಸುತ್ತಿದ್ದ ನಿತ್ಯನೈಮಿತ್ತಿಕಕರ್ಮಾನುಷ್ಠಾನಗಳನ್ನು ಇಂದು ವಿಚಾರ ಮಾಡಿದರೆ ಅವುಗಳು ಅತ್ಯಂತ ವೇಗವಾಗಿ ಪರಿವರ್ತನೆ ಆಗುತ್ತಿರುವುದನ್ನು ಕಾಣುತ್ತಿದ್ದೇವೆ. ಇಂದು ಪರಂಪರಾಗತಜ್ಞಾನಿಗಳೂ ಮತ್ತು ಕರ್ಮಾರ್ಹತೆ, ಯೋಗ್ಯತೆಯುಳ್ಳವರಿಗೂ ತುಲನೆ ಮಾಡಿದರೆ ಆಕಾಶಕ್ಕೂ ಭೂಮಿಗೂ ಇರುವಷ್ಟು ಅಂತರವಿದೆಯೆಂದೇ ಹೇಳಬಹುದು. ಇಹದಲ್ಲಿ ಜೀವಿಯು ಸುಖವಾಗಿರುವಂತೆ ಸಂಸ್ಕಾರಮಾರ್ಗಗಳನ್ನೂ ಹೇಳಿರುವರು. ಹೇಗಾದರೂ ಸುಖಿಯಾಗಿ ಜೀವಿಸಲು ಆತ್ಮೀಯಬಂಧುಗಳ ದಾಕ್ಷಿಣ್ಯಕ್ಕಾಗಿಯೋ ವ್ಯಕ್ತಿತ್ವಮರ್ಯಾದೆ ಉಳಿಯುವಿಕೆಗಾಗಿಯೋ ಅನಿವಾರ್ಯ ಪ್ರಾಸಂಗಿಕತೆಗಾಗಿಯೋ ವೈಯಕ್ತಿಕ ಅನುಭವದ ಅಭಿರುಚಿಯಿಂದಲೋ ಸಂಸ್ಕಾರಗಳನ್ನು ನಡೆಸುವುದಿದೆ. ಅವುಗಳಲ್ಲೂ ಅದೆಷ್ಟೋ ಲುಪ್ತವಾಗಿವೆ. ಸಂಸ್ಕಾರಗಳ ಸ್ವರೂಪ, ಪ್ರಯೋಜನಗಳನ್ನೂ ಈ ಹಿಂದೆಯೇ ವಿವರಿಸಲಾಗಿದೆ. ಮರಣೋತ್ತರ ಜೀವಿಯನ್ನು ಅನುಸರಿಸುವುದೆಂದರೆ ಈ ಜನ್ಮದಲ್ಲಿ ಮಾಡಿದ ಶುಭಾಶುಭ ಕರ್ಮಫಲಗಳು ಮಾತ್ರ. ನಿರ್ಜೀವಶರೀರದಹನದಿಂದ ಮೊದಲ್ಗೊಂಡು ಪಿತೃಪಂಕ್ತಿಪ್ರವೇಶದ ತನಕ ಅಧಿಕಾರಿಗಳು ಆಚರಿಸುವ ಕ್ರಿಯೆಗಳೂ ಪೋಷಕವಾಗುವುವು.

ಇಂದು ಹಿರಿಯರ ಮರಣೋತ್ತರ ನಡೆಸಲಾಗುವ ದಹನ, ಔರ್ಧ್ವದೈಹಿಕಾದಿ ಕ್ರಿಯೆಗಳಲ್ಲಿ ಶ್ರದ್ಧೆ ಹಾಗೂ ವಿಶ್ವಾಸಗಳೂ ಕಡಿಮೆಯಾಗಿ ಕರ್ಮಭಾಗಗಳೇ ಹ್ರಾಸವಾಗುತ್ತಿರುವುದು ಶೋಚನೀಯ ಸಂಗತಿಯಾಗಿದೆ. ಧಾರ್ಮಿಕ ವಾತಾವರಣಮಾಲಿನ್ಯದಿಂದಾಗಿ ಕ್ರಿಯಾಕರ್ತೃಗಳಿಗೂ ಮಾಡಿಸುವ ಯಾಜ್ಞಿಕವರ್ಗದವರಿಗೂ ಸಹನೆ ಇಲ್ಲವಾಗಿದೆ. ಜೀವಿಯು ದೇಹತ್ಯಾಗ ಮಾಡಲು ಮಕ್ಕಳು ಯಾ ಅಧಿಕಾರಿಬಂಧುಗಳು ಔರ್ಧ್ವದೈಹಿಕಕ್ರಿಯೆ ಮಾಡುವುದೆಂದರೆ ಜನ್ಮವಿತ್ತು ಲಾಲನೆ ಪಾಲನೆ ಹಾಗೂ ಆಶ್ರಯ ನೀಡಿದ ಋಣಬಾಧಾಪರಿಹಾರಕ್ಕಾಗಿ ಅನಿವಾರ್ಯವೆಂಬಂತಾಗಿದೆ.

Scanned by CamScanner

ಸ್ವಂತಿಕೆಯ ಸುಖಸಂಪತ್ತಿಗಾಗಿ ವೃತ್ತಿಪರ ಆಮಿಷದೃಷ್ಟಿಯಿಂದ ಕರ್ತೃಗಳ ಪೋಷಕರ ಮರಣೋತ್ತರ ಸದ್ಗತಿದಾಯಕ ಕ್ರಿಯಾದಿಗಳನ್ನು ನಿರ್ಲಕ್ಷಿಸುವುದು ಸಾಮಾನ್ಯವಾಗಿದೆ. ಅಗಲಿದವರಿಗೆ ನಾವು ಮಾಡುವ ಕ್ರಿಯಾದಿಗಳ ಆವಶ್ಯಕತೆಯಾದರೂ ಏಕೆ ಎಂಬುದೇ ಪ್ರಶ್ನೆಯಾಗಿದೆ. ಮಗನ ಸರ್ವತೋಮುಖ ಅಭಿವೃದ್ಧಿಗಾಗಿ ತಂದೆಯು ನಡೆಸುವ ಸಂಸ್ಕಾರಗಳು ಎಷ್ಟು ಮುಖ್ಯವೋ ತಂದೆಯ ಮರಣಾನಂತರ ತನ್ನ ಜೀವಿತದ ತನಕ ಅವರ ಉದ್ದಿಶ್ಯ ನಡೆಸಲಾಗುವ ಕ್ರಿಯಾದಿಗಳೂ ಅಷ್ಟೇ ಮುಖ್ಯವೆಂಬುದನ್ನು ಶಾಸ್ತ್ರಗಳು ಎಚ್ಚರಿಸಿವೆ.

ಈ ನಿಟ್ಟಿನಲ್ಲಿ ನಮ್ಮ ಪ್ರಾಚೀನರು ಮುಂದಿನ ಜನಜೀವನದ ಆಗುಹೋಗುಗಳನ್ನು ವಿಮರ್ಶೆ ಮಾಡಿ ಮನನೊಂದು ಪ್ರತಿಯೊಂದು ಜೀವಿಯೂ ತನ್ನ ಮರಣೋತ್ತರಕ್ರಿಯಾದಿಗಳನ್ನು ಜೀವಿತಕಾಲದಲ್ಲಿ ತಾನೇ ಮಾಡಿಕೊಳ್ಳುವಂತೆ “ಜೀವಚ್ಛ್ರಾದ್ಧಪದ್ಧತಿ” ಎಂದು ಅನೇಕ ಗ್ರಂಥಗಳ ಆಧಾರದಂತೆ ಉಲ್ಲೇಖಿಸಿರುವುದು ಅಧ್ಯಾತ್ಮಬಂಧುಗಳ ಪುಣ್ಯಾತಿಶಯವೇ ಸರಿ. ಮಕ್ಕಳು ಇರುವವರಾಗಲೀ, ಸಂತತಿಹೀನರಾದ ದಂಪತಿಗಳೇ ಆಗಿರಲಿ ಜೀವಿತಕಾಲದಲ್ಲಿಯೇ ಕ್ರಿಯಾದಿಗಳನ್ನು ಮಾಡಿಸಿಕೊಳ್ಳುವಂತೆ ಪ್ರಯೋಗವಿದೆ.* ಸ್ವತಃ ಸೇವನೆಗಾಗಿ ತಯಾರಿಸುವ ಪದಾರ್ಥಗಳೆಂದಾದರೆ ಜಾಗ್ರತೆಯಾಗಿ ರುಚಿಕೆಡದಂತೆ ಶುಚಿಯಾಗಿ ಸಿದ್ಧಗೊಳಿಸುವುದು ಸಹಜವಷ್ಟೆ? ಅದರಂತೆ ಮರಣೋತ್ತರ ತನ್ನ ಆಮುಷ್ಮಿಕಸದ್ಗತಿಗಾಗಿ ತಾನೇ ನಡೆಸುವುದರಿಂದ ವಿಶೇಷ ಜಾಗ್ರತೆ, ಶ್ರದ್ಧೆ, ವಿಶ್ವಾಸಗಳೂ ಉಂಟಾಗುವುದರಲ್ಲಿ ಸಂದೇಹವಿಲ್ಲ. ಮಕ್ಕಳು ಹಾಗೂ ಬಂಧುಗಳು ಮರಣೋತ್ತರಕ್ರಿಯೆಗಳನ್ನು ಪುನಃ ಮಾಡುವುದರಿಂದ ಯಾವ ಬಾಧಕವಾಗಲಿ ಅಪರಾಧವಾಗಲಿ ಆಗುವುದಿಲ್ಲವೆಂದೂ ಹೇಳಿದೆ.

* * *

* ಈ ಬಗೆಗೆ ಪ್ರತ್ಯೇಕವಾದ 'ಜೀವಚ್ಛ್ರಾದ್ಧಪ್ರಯೋಗ' ಎಂಬ ಪುಸ್ತಕ ನಮ್ಮ ಸಂಸ್ಥೆಯಿಂದ ಪ್ರಕಟವಾಗಿದೆ.

Scanned by CamScanner

ಅವಸಾನಕಾಲೇ ಕರ್ತವ್ಯಮ್

ಆಸನ್ನಮರಣಂ ಪಿತ್ರಾದಿಕಂ ಪುತ್ರಾದಿಃ ತೀರ್ಥಂ ನೀತ್ವಾ ಪ್ರಾಯಶ್ಚಿತ್ತಂ ಕಾರಯೇತ್ । ಪಿತ್ರಾದಿಃ ಅಶಕ್ತಶ್ಚೇತ್ ಸ್ವಯಮೇವ ಕುರ್ಯಾತ್ । ಆಚಮ್ಯ ಪವಿತ್ರಂ ಧೃತ್ವಾ, ಪ್ರಾಣಾನಾಯಮ್ಯ, ದೇಶಕಾಲೌ ಸಂಕೀರ್ತ್ಯ–

ಶುಭಪುಣ್ಯತಿಥೌ ಮಮ (ಪಿತುಃ) ಜನ್ಮಪ್ರಭೃತಿ ಏತಾವತ್ಕಾಲಪರ್ಯಂತಂ ಬಾಲ್ಯಕೌಮಾರವಾರ್ಧಕ್ಯಾದ್ಯವಸ್ಥಾಸು ಜಾಗ್ರತ್‍ಸ್ವಪ್ನಸುಷುಪ್ತ್ಯವಸ್ಥಾಸು ಮನೋವಾಕ್ಕಾಯಕರ್ಮಭಿಃ ಕರ್ಮೇಂದ್ರಿಯೈಃ ಜ್ಞಾನೇಂದ್ರಿಯೈಶ್ಚ ಜನ್ಯವ್ಯಾಪಾರೈಃ ಜ್ಞಾತಾಜ್ಞಾತಕಾಮಾಕಾಮಸಕೃದಸಕೃತ್‍ಕೃತಕಾಯಿಕವಾಚಿಕ–ಮಾನಸಿಕಸಾಂಸರ್ಗಿಕಸ್ಪೃಷ್ಟಾಸ್ಪೃಷ್ಟಭುಕ್ತಾಭುಕ್ತಪೀತಾಪೀತಾದೀನಾಂ ಬ್ರಹ್ಮಹತ್ಯಾಸುರಾಪಾನಸ್ವರ್ಣಸ್ತೇಯಗುರುದಾರಗಮನತತ್ಸಂಯೋಗಿತ್ವ–ರೂಪಪಂಚಮಹಾಪಾತಕಾನಾಂ, ಗುರುನಿಂದಾದ್ಯತಿಪಾತಕಾನಾಂ, ಗೋವಧಾದ್ಯುಪಪಾತಕಾನಾಂ, ಅಗಮ್ಯಾಗಮನಾದ್ಯನುಪಾತಕಾನಾಂ, ಗರ್ದಭವಧಾದಿಸಂಕಲೀಕರಣಾನಾಂ, ಕ್ರಿಮಿಕೀಟವಧಾದಿ ಮಲಿನೀಕರಣಾನಾಂ, ಮದ್ಯಗಂಧಾದ್ಯಾಘ್ರಾಣಾದಿಜಾತಿಭ್ರಂಶಾನಾಂ ಶೂದ್ರಸೇವಾದ್ಯಪಾತ್ರೀ–ಕರಣಾನಾಂ, ವಿಹಿತಪರಿತ್ಯಾಗಾದಿಪ್ರಕೀರ್ಣಕಾನಾಂ, ನವಾನಾಂ ನವವಿಧಾನಾಂ ಬಹೂನಾಂ ಬಹುವಿಧಾನಾಂ ರಹಸಿ ಕೃತಾನಾಂ ಪ್ರಕಾಶಕೃತಾನಾಂ ಪಾಪಾನಾಂ ಮಧ್ಯೇ ಸಂಭಾವಿತಾಶೇಷಪಾಪಕ್ಷಯದ್ವಾರಾ ಸಕಲಪಾಪಾಪಹಶ್ರೀಮಹಾವಿಷ್ಣುಪ್ರೀತ್ಯರ್ಥಂ ಮಮ (ಪಿತುಃ) ಸುಖೇನ ಪ್ರಾಣೋತ್ಕ್ರಮ–ಣಾರ್ಥಂ ಸರ್ವಪ್ರಾಯಶ್ಚಿತ್ತಾರ್ಥಂ ದಶದಾನಮ್ ಉತ್ಕ್ರಾಂತಿಸಂಜ್ಞಕಗೋದಾನಂ (ಪ್ರತ್ಯಾಮ್ನಾಯಫಲದಾನಂ) ತಿಲದಾನಂ ಚ ಕರಿಷ್ಯೇ ॥

ಅವಸಾನಕಾಲದಲ್ಲಿ ಕರ್ತವ್ಯ-

